ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ




BAPU PRAPANCHA

ಕನ್ನಡ - English Monthly

ಸಂಪುಟ - 3 : ಸಂಚಿಕೆ - 6 ಮಾರ್ಚ್ 2022 ಪುಟ - 36 ₹ 28/-











ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2021-2022

ಕಸ್ತೂರ್‌ಬಾ ಗಾಂಧಿ : (11.04.1869 – 22.02.1944)

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಬಾಲಕಿ ಕಸ್ತೂರ್ ಬಾ ಅವರಲ್ಲಿ ಪ್ರಭಾವ ಬೀರಿದ್ದು ಅವರ ಊರಿಗೆ ಹಳ್ಳಿಗಳಿಂದ ಬರುತ್ತಿದ್ದ ಹಾಡುಗಾರರು ಆಗ ನರಸೀಮೆಹತ ಎಂಬ ಒಬ್ಬರು ದಾಸರು ಆಗಾಗ್ಗೆ ಆ ಊರಿಗೆ ಅವರ ತಂಡದೊಂದಿಗೆ ಬಂದು ಭಜನೆ, ಭಕ್ತಿಗೀತೆ, ಕೃಷ್ಣನ ಹಾಡುಗಳು ಗೋಪಿಕೆಯರ ಗೀತೆ, ರಾಧಾಕೃಷ್ಣರ ಪ್ರೇಮ – ವಿರಹ ರಾಸ್‌ಗಳನ್ನೂ ಹಾಡುತ್ತಿದ್ದರು. ಇವರೇ ರಚಿಸಿದ "ವೈಷ್ಣವ ಜನತೋ" ಹಾಡು ಬಾಪೂ ಅವರಿಗೂ ಮೆಚ್ಚುಗೆಯಾಗಿತ್ತು ಮತ್ತು ಮೋನಿ, ಬಾಲ್ಯದಲ್ಲಿ ಮಕ್ಕಳ ತಂಡದೊಂದಿಗೆ ಒಟ್ಟಾಗಿ ಆಟಓಟಊಟ ಮಾಡಿದವರಾಗಿದ್ದರು. 'ಬಾ' 5ವರ್ಷ ಆಗುತ್ತಿದ್ದಂತೆ. ಈ ಎಲ್ಲಾ ಆಟೋಟಗಳಿಗೆ ತಡೆ ಬಂದಿತ್ತು. ಆದರೆ ಪುರಾಣದ ಕತೆಗಳು, ಸತಿಸಾವಿತ್ರಿ, ಸೀತೆ, ತಾರಾಮತಿ ಅನುಸೂಯಾ ಮಾತೆಯರ ಪತಿವ್ರತ ಧರ್ಮದ ಕತೆಗಳನ್ನು ಆಚೀಚೆ ಮನೆಯ ಮಹಿಳೆಯರೆಲ್ಲಾ ಸೇರಿದಾಗ, ಹೆಣ್ಣು ಮಕ್ಕಳ ಮುಂದೆ ಹೇಳುತ್ತಾ ಇದ್ದರು. ಆ ಕತೆಗಳನ್ನು ಕೇಳಿದಾಗಲೆಲ್ಲಾ, 'ಬಾ'ಳ ಮನದಲ್ಲಿ ಹಲವು ಪ್ರಶ್ನೆಗಳೇಳುತ್ತಿದ್ದವು. "ದೇವರು ಏಕೆ ಹೆಣ್ಣು ಮಕ್ಕಳಿಗೆ ಇಂಥಹ ಕಷ್ಟಗಳನ್ನು ಕೊಡುತ್ತಾನೆ? ಅವರೆಲ್ಲರ ಶುದ್ಧ ಚಾರಿತ್ರ್ಯದ ಮೇಲೆ ಏಕೆ ಯಾವಾಗಲೂ ಅಪನಂಬಿಕೆಯನ್ನು ಅವರ ಜೀವನ ಸಂಗಾತಿಗಳಿಗೆ ಬರುವಂತೆ ಮಾಡುತ್ತಾನೆ. ಅವರೆಲ್ಲರೂ ಆ ದೇವರು ಕೊಟ್ಟ ಎಲ್ಲಾ ಸಂಕಷ್ಟಗಳನ್ನು ಎಷ್ಟು ಧೈರ್ಯದಿಂದ ಎದುರಿಸಿದರು. ಕಷ್ಟದ ದಿನಗಳನ್ನು ನೀಗಿಸಿಕೊಂಡು, ಎದುರಾದವರಿಗೆ ಸರಿ ಉತ್ತರವನ್ನು ಕೊಡುತ್ತಾ ಮುಂದೆ ಸಾಗಿದ ಪರಿ" ಕಸ್ತೂರ್ ಅವರ ಮನದಲ್ಲಿ ಅಚ್ಚೊತ್ತಿ ನಿಂತಿತ್ತು.

ಅಚ್ಚ ಸುಂದರಿ ಬಾಲಕಿ ಕಸ್ತೂರ್‌ಗೆ ನಿಶ್ಚಿತಾರ್ಥವಾದ ನಂತರ ತಾಯಿ ಮತ್ತು ಹಿರಿಯರೆಲ್ಲರ ಸಲಹೆ, ಸೂಚನೆಗಳಂತೆ, ಗಂಡು ಹೆಣ್ಣು ಮಕ್ಕಳೆಂಬ ಭೇದವಿಲ್ಲದೆ ಒಟ್ಟಾಗಿ ಕಲೆತು ಆಡುತ್ತಿದ್ದ ದಿನಗಳು ಮುಕ್ತಾಯಗೊಂಡವು. ಮಾತಿನ ಕಲರವ ನಿಧಾನವಾಗಿ ಮೌನಕ್ಕೆ ಸಾಗಿತ್ತು. ಮೋಹನದಾಸನ ತಂದೆ ಕರಮಚಂದ ಗಾಂಧಿ ಅವರಿಗೆ, ಅಂದಿನ ಬ್ರಿಟಿಷ್ ಸರ್ಕಾರ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿ ರಾಜಕೋಟದ ದಿವಾನರಾಗಿ ಅಧಿಕಾರ ನಿರ್ವಹಿಸಲು ತಿಳಿಸಿದಾಗ ಪುತಲೀ ಬಾಯಿಗೆ, ಆತಂಕಗಳು ಹೆಚ್ಚಾದವು. ಅಷ್ಟರಲ್ಲಾಗಲೇ ಮೋಹನನಿಗೆ ಮದುವೆ ಮಾಡಲು ಎರಡು ಬಾರಿ ಪ್ರಯತ್ನಗಳು ವಿಫಲತೆ ಕಂಡಿದ್ದವು. ಈ ವಿಷಯ ಒಂದು ಕಡೆಯಾದರೆ, ಪತಿಗೆ ಹೆಚ್ಚಿನ ಕಾರ್ಯಭಾರದಿಂದ ಕುಟುಂಬದ ಕಡೆ ನಿಗಾ ಕಡಿಮೆಯಾಗಿ ಮೋಹನನ ಮದುವೆ ಕಾರ್ಯ ವಿಳಂಬವಾಗುವುದೆಂಬ ಆತಂಕ ಮತ್ತೊಂದು ಕಡೆಯದಾಗಿತ್ತು. ಇದಕ್ಕೆ ಕೊನೆಹಾಡಿದಂತೆ ತಾಳಕ್ಕೆಮೇಳ ಕೂಡಿದಂತೆ, ಕಸ್ತೂರ್‌ಳ ಮನೆಯವರ ವರನ ಹುಡುಕಾಟ, ಮೋಹನನ ಮನೆಯವರ ವಧುವಿನ ಹುಡುಗಾಟಕ್ಕೆ ಜ್ಯೋತಿಷಿಯೊಬ್ಬರು ಮಕ್ಕಳಿಬ್ಬರ ಕುಂಡಲಿ ಸರಿಹೊಂದುತ್ತದೆಂದು ಹೇಳಿದಾಗ ಮಂಗಳ ವಾದ್ಯ ಮೊಳಗಿತ್ತು. ಕಸ್ತೂರ್ ಅವರ ಮನೆಗೆ ಮೋಹನನ ತಂದೆ ಹಿರಿಯರೊಂದಿಗೆ ಆಗಮಿಸಿ, ಮಗನ ಮದುವೆಯ ಪ್ರಸ್ತಾಪ, ಮಗಳನ್ನು ಅವರ ಮಗನಿಗೆ ತಂದುಕೊಳ್ಳುವ ಕೋರಿಕೆಯೊಂದನ್ನು ಮಂಡಿಸಿದ್ದರು. ತಂದೆತಾಯಿ ಅವರಿಗೆ ಬಹಳ ಸಂತೋಷವನ್ನೇ ತಂದಿತ್ತು. ಎರಡೂ ಕುಟುಂಬದವರ ಅಚ್ಚುಮೆಚ್ಚಿನ ಈ ಸಂಬಂಧ, ಬಾಲೆ ಕಸ್ತೂರ್‌ಳ ಮನದಲ್ಲಿ, ನೂರು ಆಸೆಗಳನ್ನು ಚಿಮ್ಮಿಸಿತ್ತು. ಆ ದಿನಗಳಲ್ಲಿ ಕೇಂದ್ರಬಿಂದುವಾಗಿರುವ ತಾನು ಚಿನ್ನದ ಆಭರಣಗಳು ಹೂವು ಅಲಂಕಾರಗಳಿಂದ ಸಂಭ್ರಮಿಸುವ ಚಿತ್ರಗಳು ಕಣ್ಣ ಮುಂದೋಡಿದ್ದವು. ಹಾಗೆಯೇ ನಿಶ್ಚಿತಾರ್ಥದ ದಿನವೂ ಬಂದಿತ್ತು. ಬಾಲ್ಯದ ಗೆಳೆಯ, ಯುವಕ ಮೋಹನದಾಸನನ್ನು ಕೈಹಿಡಿಯುವುದೂ 'ಬಾ'ಳಲ್ಲಿ ನೂರು ಸಂಭ್ರಮಗಳನ್ನು ಚಿಮ್ಮಿಸಿದ್ದವು. ಈ ಸಂಭ್ರಮಗಳ ನಡುವೆ ನಿಶ್ಚಿತಾರ್ಥದ ಶಾಸ್ತ್ರ ವಿಧಿಗಳಲ್ಲಿ "ಅವನ ಕಾಲು ಮುಟ್ಟಿ ನಮಸ್ಕಾರ ಮಾಡೋದು", ರೇಜಿಗೆಯ ವಿಷಯವೂ ಅವನಿಗಿಂದ 6 ತಿಂಗಳು ದೊಡ್ಡವಳಾದರೂ, ನಾನೇಕೆ ಅವನ ಪಾದಕ್ಕೆ ಶಿರಬಾಗಬೇಕೆಂಬ ಪ್ರಶ್ನೆಗಳು 'ಬಾ'ಳನ್ನು ಕೋಪತಾಪಕ್ಕೆ ಗುರಿಮಾಡಿತ್ತು. ಗೆಳತಿಯರೆಲ್ಲಾ ಜೊತೆಯಲ್ಲಿದ್ದರಿಂದ ಕೊಂಚ ಸಂತೋಷವೂ ಆಕೆಯಲ್ಲಿತ್ತು. ಆ ಸಂಭ್ರಮದ ನಂತರ, ಮೋಹನನ ಮನೆಯವರೆಲ್ಲಾ ರಾಜಕೋಟಕ್ಕೆ ತೆರಳಿದ್ದರು. ಸುಮಾರು ಆರು ವರ್ಷ ಆತನ ಸಂಪರ್ಕವಿಲ್ಲದೆ ಕಳೆದ ಬಾಲಕಿ ಕಸ್ತೂರ್, ಆಕೆ ಹದಿಮೂರು ವರ್ಷದವಳಾದಾಗ, ಮದುವೆಯ ಮನೆಯಲ್ಲೇ ಆತನನ್ನು ಭೇಟಿಯಾಗುತ್ತಾಳೆ.



ಮುಂದುವರಿಯುವುದು.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ - ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA
(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು...

ನಾವಿಂದು ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ಆತಂಕ, ಭಯ, ತಲ್ಲಣಗಳಲ್ಲಿ ಬದುಕುತ್ತಿದ್ದೇವೆ. ಕೋವಿಡ್ ಪಿಡುಗು ಜನವರಿ ತಿಂಗಳಲ್ಲಿ ಅಂತ್ಯದ ಹಾದಿಯಲ್ಲಿ ಕ್ರಮಿಸುತ್ತಿರುವಂತೆ, ಕೆಲವು ಸಮುದಾಯದವರ ತಲೆ ವಸ್ತ್ರದ ವಿವಾದವನ್ನೆಬ್ಬಿಸಿ ಹಲವು ಮಕ್ಕಳು ಶಾಲೆ, ಕಾಲೇಜುಗಳಿಗೆ ಹೋಗದಂತಾಯಿತು. ಕೆಲವು ವಿದ್ಯಾರ್ಥಿಗಳು ಅವರನ್ನು ದೂಷಿಸುವ ಕ್ರಮದಿಂದ ಹಲವು ಶಾಲಾ ಕಾಲೇಜುಗಳು ಬಂದ್ ಆದವು ಮತ್ತು ಕೆಲವು ಕಾಲೇಜುಗಳು ತೆರೆಯಲೇ ಇಲ್ಲ. ಇದರಿಂದಾಗಿ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಪ್ರಾಧ್ಯಾಪಕ ವೃಂದ, ಆಡಳಿತ ಮಂಡಳಿ, ಶಿಕ್ಷಣ ಇಲಾಖೆ, ಬಹು ಗೊಂದಲದಲ್ಲಿ ಸಿಕ್ಕಿ, ತತ್ಕಾಲದ ಕ್ರಮಕ್ಕೆ ಕೈ ಹಾಕಿ ಅನೇಕ ವಿವಾದಗಳಿಗೆ ಎಡೆಮಾಡಿಕೊಟ್ಟಿತು. ಆದ್ದರಿಂದ ಕೋವಿಡ್ ಸಾಂಕ್ರಾಮಿಕದಿಂದಾಗಿ 2 ವರ್ಷಗಳ ಶಾಲಾ ಕಾಲೇಜುಗಳ ಬಂದ್ ಮತ್ತೊಂದು ತಿಂಗಳು ಮುಂದುವರಿದು, 2022ರಲ್ಲೂ ಶಿಕ್ಷಣ ವ್ಯವಸ್ಥೆ ಸರಿಯಾದ ಕ್ರಮದಲ್ಲಿ ಆರಂಭವಾಗಲೇ ಇಲ್ಲ. ಮತ್ತು ಆನ್‌ಲೈನ್ ಪಾಠ ಮತ್ತು ಶಿಕ್ಷಕರ ವ್ಯಾಟ್ಸ್‌ಪ್ ಪಾಠ ಇತ್ಯಾದಿ ಯಾಂತ್ರಿಕ – ತಾಂತ್ರಿಕ ಪಾಠದಿಂದಾಗಿ, 12 ಕೋಟಿ ಮಕ್ಕಳು ಸರ್ಕಾರಿ ಶಾಲೆಯಿಂದ ಹೊರಗುಳಿಯಬೇಕಾಗಿದೆ. ಇದು ನಮ್ಮ ದೇಶದ ಯಾಂತ್ರಿಕ ಶಿಕ್ಷಣಾ ವ್ಯವಸ್ಥೆ ಎಲ್ಲಾ ಮಕ್ಕಳನ್ನು ತಲುಪುವ ಸ್ಥಿತಿಯಲ್ಲಿಲ್ಲ ಎಂಬುದನ್ನು ತಿಳಿಸುತ್ತದೆ. ಬಡ ಕುಟುಂಬಗಳ ಲಕ್ಷಾಂತರ ಮಕ್ಕಳಲ್ಲಿ ಸ್ಮಾರ್ಟ್‌ಫೋನ್‌ಗಳು ಮತ್ತು ಇಂಟರ್‌ನೆಟ್ ಸಂಪರ್ಕಗಳಿಲ್ಲ. ವಿಶ್ವ ಸಂಸ್ಥೆಯ ಮಕ್ಕಳು ನಿಧಿ ಮತ್ತು ಯುನೆಸ್ಕೋದ ಜಂಟಿ ಹೇಳಿಕೆಯಲ್ಲಿ, "ರೆಸ್ಟೋರೆಂಟ್‌ಗಳು, ಬಾರ್‌ಗಳು, ಸ್ಪಾಗಳು, ಸಿನಿಮಾ ಮಂದಿರಗಳು ತೆರೆದಾಗಲೂ, ಶಾಲೆಗಳನ್ನು ಮುಚ್ಚಿಯೇ ಇಡಲಾಯಿತು. ವಾಸ್ತವವಾಗಿ ಶಾಲೆಗಳನ್ನು ಎಲ್ಲಕ್ಕಿಂತ ಕೊನೆಗೆ ಮುಚ್ಚಬೇಕಾಗಿತ್ತು ಮತ್ತು ಎಲ್ಲಕ್ಕಿಂತ ಮೊದಲು ತೆರೆಯಬೇಕಾಗಿತ್ತು. ಆದರೆ ಇದು ವಿಚಿತ್ರವಾಗಿದೆ ಮತ್ತು ವಿವರಣೆಗೆ ನಿಲುಕದ್ದಾಗಿದೆ" ಎಂದಿತ್ತು. ಅದರಂತೆ ಕರ್ನಾಟಕದ ಆರ್ಥಿಕ ಸಮೀಕ್ಷೆ ಬಹಿರಂಗಪಡಿಸಿದ ವರದಿಯಂತೆ, ಕಳೆದ 10 ವರ್ಷಗಳ ಪ್ರಾಥಮಿಕ ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆ ಕುಸಿತ ಕಂಡಿದೆ. 2016ರಲ್ಲಿ ಮೊದಲ 3 ತರಗತಿಗಳಿಗೆ ಸೇರ್ಪಡೆಯಾಗುವ ಮಕ್ಕಳ ಸಂಖ್ಯೆ 11.6 ಲಕ್ಷವಿದ್ದದ್ದು, 2020ರಲ್ಲಿ 10.85 ಲಕ್ಷಕ್ಕೆ ಇಳಿಕೆಯಾಗಿದೆ ಎಂಬ ಅಂಶ ಬೆಳಕಿಗೆ ಬಂದಿದೆ. ಇದು ಭಾರತದ ಭವಿಷ್ಯದ ಪ್ರಜೆಗಳ ಸ್ಥಿತಿಯನ್ನು ಅಭಿವ್ಯಕ್ತಮಾಡುತ್ತಿದೆ. ಕರೋನ ಮತ್ತು ತಲೆವಸ್ತ್ರದ ವಿವಾದ ಮಕ್ಕಳನ್ನು "ಬರಬೇಡ ಬಾಲೆ ಶಾಲೆಗೆ", "ಶಾಲೆ ತೊರೆ ಮನೆಗೆ ನಡೆ", "ಪರೀಕ್ಷೆಗೆ ಗೈರಾದರೆ, ಇನ್ನೊಂದು ಅವಕಾಶ ನೀಡುವುದಿಲ್ಲ" ಎಂಬ ಧೋರಣೆಗಳು ಮಹಿಳೆಯರು, ಅಲ್ಪಸಂಖ್ಯಾತರು ಶಿಕ್ಷಣದಿಂದ ವಂಚಿತರಾದರೆ ಇಡೀ ಸಮಾಜಕ್ಕೆ ನಷ್ಟ ಮಾತ್ರವಲ್ಲದೆ, ಭಾರತದ ಅಭಿವೃದ್ಧಿ ಹಿನ್ನಡೆಯೂ ಆಗುವುದೆಂದು ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ರಾಷ್ಟ್ರದ ಮುಖಂಡರು ಮನಗಂಡು, ಶಿಕ್ಷಣ ಕ್ಷೇತ್ರವನ್ನು ಅಮೂಲಾಗ್ರವಾಗಿ ಪರಿವರ್ತಿಸುವ ಕಾರ್ಯಯೋಜನೆಗಳನ್ನು ಮಾಡಬೇಕಾಗಿದೆ.

ಇದರೊಂದಿಗೆ 3ನೇ ಮಹಾಯುದ್ಧದ ಕಡೆಗೆ ಮುನ್ನುಗ್ಗುತ್ತಿರುವ ರಷ್ಯಾ–ಉಕ್ರೇನ್ ಯುದ್ಧ, ಪ್ರಪಂಚದಲ್ಲಿರುವ ದೇಶಗಳು ಈ ಯುದ್ಧದಲ್ಲಿ ತನ್ನ ಪಾತ್ರ, ಆ ಎರಡು ರಾಷ್ಟ್ರಗಳ ಪರ–ವಿರೋಧವೋ, ತಟಸ್ಥವೋ ಎಂಬುದನ್ನು ತೀವ್ರವಾಗಿ ನಿರ್ಧರಿಸಿ ಬಹಿರಂಗಗೊಳಿಸಬೇಕಾದ ದುಃಸ್ಥಿತಿಯಲ್ಲಿದೆ. ಸರ್ವಾದಿಕಾರಿ ಧೋರಣೆಯಿಂದ, ಉಕ್ರೇನ್‌ನನ್ನು ಸರ್ವ ವಿನಾಶಕ್ಕೆ ದೂಡಿರುವ ರಷ್ಯಾವನ್ನು ವಿಶ್ವದ 75% ದೇಶಗಳು ಕಟುವಾಗಿ ವಿರೋಧಿಸಿವೆ. ರಷ್ಯಾದ ಪ್ರಜೆಗಳೇ, ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ರ ಈ ವಿನಾಶದ ಕ್ರಮವನ್ನು ತೀವ್ರವಾಗಿ ವಿರೋಧಿಸಿವೆ. ಸುಮಾರು 1.10 ಮಿಲಿಯನ್ ಉಕ್ರೇನ್‌ನ ಪ್ರಜೆಗಳು ಅಕ್ಕಪಕ್ಕದ ದೇಶಗಳಿಗೆ ವಲಸೆ ಹೋದರು. ಟಿ.ವಿ. ಮಾಧ್ಯಮಗಳಲ್ಲಿ ದಿನನಿತ್ಯ ಸಾಮಾನ್ಯ ಜನರು, ಮಹಿಳೆಯರು, ಮಕ್ಕಳು ಸಾವು ನೋವು, ವಲಸೆಯ ಚಿತ್ರಗಳು, ಷೆಲ್‌ದಾಳಿಗಳು, ಮಿಸೈಲ್‌ದಾಳಿಗಳು, ಡ್ರೋನ್ ದಾಳಿಗಳ ಭೀಭತ್ಸ ದೃಶ್ಯಗಳನ್ನು ಕಣ್ಣೆದುರಿಗೆ ಕಂಡು, ಜಗತ್ತು ವಿನಾಶದೆಡೆಗೆ ಸಾಗುತ್ತಿದೆ ಎಂಬ ಭೀತಿಯಲ್ಲಿದ್ದಾರೆ. ಈ ಯದ್ಧದಲ್ಲಾದ ಸಾವು ನೋವುಗಳು ಅಂಕೆಗೆ ಸಿಲುಕದ್ದಾಗಿದೆ.ಮತ್ತು ಹಲವು ಸುತ್ತಿನ ಮಾತುಕತೆಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು, ನ್ಯಾಟೋ, ವಿಶ್ವಸಂಸ್ಥೆ, ಸಾರ್ಕ್ ದೇಶಗಳು, ಐರೋಪ್ಯ ಒಕ್ಕೂಟದ ಪ್ರಯತ್ನಗಳು ಫಲ ನೀಡುತ್ತಿಲ್ಲದಿರುವುದು ಮಾನವೀಯತೆಯ ಅವಸಾನದ ಪಥ ಹಿಡಿದಿರುವುದು ಕಂಡು ಬರುತ್ತಿದೆ. ಉಕ್ರೇನ್‌ನ ಪ್ರಧಾನಿ ಝುಲೆನ್ಸ್ಕಿಯ ಸ್ವಾಭಿಮಾನ, ಧೈರ್ಯ ಸ್ಥೈರ್ಯ, ಕೆಚ್ಚು ವಿಶ್ವಕ್ಕೆ ಅನನ್ಯ ನಿದರ್ಶನವಾಗಿದೆ. "ಯುದ್ಧ ಬೇಡ – ವಿಶ್ವಶಾಂತಿ ಬೇಕು", "ಯುದ್ಧ ಸಾಕು – ಬುದ್ಧ ಬೇಕು" ಎಂಬ ಶಾಂತಿಯ ಧ್ವನಿ ವಿಶ್ವದಲ್ಲೆಡೆಯಿಂದ ಮೊಳಗಲಿ.

ಈ ಭೀಕರ ವಾತಾವರಣದ ಮಧ್ಯೆ ಪರಿಸರವು ನಮ್ಮ ಮೇಲೆ ಅವಕೃಪೆ ತೋರಿದಂತೆ ಗದಗ್ ಜಿಲ್ಲೆಯ ರಕ್ಷಿತಾರಣ್ಯ ಪ್ರದೇಶದಲ್ಲಿ ಬೆಂಕಿಯ ಜ್ವಾಲೆಗಳು ಭುಗಿಲೆದ್ದಿವೆ. ಹಾಗೆಯೇ ಶ್ರೀರಂಗಪಟ್ಟಣದ ಕರಿಘಟ್ಟ ಅರಣ್ಯವೂ ಜ್ವಾಲೆಯನ್ನು ಉಗುಳುತ್ತಿದೆ. 50 ಎಕರೆಗೂ ಮಿಕ್ಕಿ ಕಪ್ಪತಗುಡ್ಡ ಅಂತ್ಯ ಕಂಡಿದೆ. ಪರಿಸರ ಪ್ರೇಮಿಗಳು ಅರಣ್ಯ ಹೋರಾಟಗಾರರು ಧ್ವನಿ ಎತ್ತಿದಾಕ್ಷಣ, 14 ಜನರ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕೆಲವರನ್ನೂ ಬಂದಿಸಲಾದ ವರದಿ ಪ್ರಕಟಗೊಂಡಿದೆ. ಇನ್ನೊಂದು ಇಷ್ಟೇ ಭೀಕರ ಘಟನೆಯೆಂದರೆ ಮೈಸೂರಿನ ಯಾದವಗಿರಿ ರೈಲ್ವೇ ಕ್ವಾಟ್ರರ್ಸ್‌ನಲ್ಲಿ ಜಲಶುದ್ಧೀಕರಣಕ್ಕಾಗಿ ಇರಿಸಿದ ಕ್ಲೋರಿನ್ ಸಿಲಿಂಡರ್‌ನ ಅನಿಲ ಸೋರಿಕೆಯಿಂದಾಗಿ 13 ಮಕ್ಕಳೂ ಸೇರಿದಂತೆ, 40 ಜನರು ಅಸ್ವಸ್ಥರಾದ ಘಟನೆ ನಡೆದಿದೆ. ಅಗ್ನಿಶಾಮಕದಳ, ಜಿಲ್ಲಾಡಳಿತ, ರೈಲ್ವೆ ರಕ್ಷಣಾದಳಗಳ ತಕ್ಷಣದ ಸಂರಕ್ಷಣಾ ಕ್ರಮವಹಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಅವರಿಗೆ ನಮಿಸುತ್ತಾ ಎಲ್ಲಾ ಪ್ರದೇಶದ ಜನರು, ಪರಿಸರ, ಜಲಸಂಪನ್ಮೂಲ ಮತ್ತು ದೇಶವಾಸಿಗಳನ್ನೂ ರಕ್ಷಿಸುವುದೊಂದೇ ಅಲ್ಲದೆ, ಇಂಥಹ ಬೀಭತ್ಸತೆಗೆ ಜಗತ್ತನ್ನು ಕರೆದೊಯ್ಯದೆ, ನೆಮ್ಮದಿ, ಸಮೃದ್ಧಿ, ಸಂಬುದ್ಧಿಯೆಡೆಗೆ ಮನಸ್ಸುಗಳನ್ನು ಕಟ್ಟಲಿ ಎಂದು ಹಾರೈಸುತ್ತೇನೆ.

ವಂದನೆಗಳು...

ಪ್ರಿಟೋರಿಯಾಕ್ಕೆ ಹೋಗುವಾಗ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಾನು ಬಣ್ಣದ ಮನುಷ್ಯನೆಂಬುದು ಅವನ ಕಣ್ಣಿಗೆ ಬಿತ್ತು. ಅದರಿಂದ ಅವನಿಗೆ ಉದ್ರೇಕವುಂಟಾಯಿತು. ಆತ ಹೋಗಿ ಇಬ್ಬರು ರೈಲ್ವೆ ನೌಕರರನ್ನು ಕರೆದುಕೊಂಡು ಹಿಂದಿರುಗಿದ. ಆ ವೇಳೆಗೆ ಮತ್ತೊಬ್ಬ ಅಧಿಕಾರಿ ನನ್ನ ಬಳಿ ಬಂದು ಹೀಗೆ ಹೇಳಿದ. "ಹೊರಡು, ವ್ಯಾನ್ ಕೊನೆಯಲ್ಲಿರುವ ಗಾಡಿಗೆ ನೀನು ಹೋಗಬೇಕು." ನಾನು ಹೀಗೆ ಹೇಳಿದೆ, ಆದರೆ ನಾನು ಫಸ್ಟ್ ಕ್ಲಾಸ್ ಟಿಕೆಟ್ ತೆಗೆದು ಕೊಂಡಿದ್ದೇನೆ." "ಆತ, ಚಿಂತೆಯಿಲ್ಲ. ನನ್ನ ಮಾತನ್ನು ಕೇಳು. ನೀನು ಕೊನೆಯ ಗಾಡಿಗೆ ಹೋಗಲೇಬೇಕು" ಎಂದ. "ಇಲ್ಲಿ ಕೇಳಿ, ನಾನು ಈ ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡಲು ಡರ್ಬಾನಿನಲ್ಲಿ ಅವಕಾಶ ದೊರೆತಿದೆ. ನಾನು ಇದರಲ್ಲಿಯೇ ಪ್ರಯಾಣ ಮಾಡುವುದು ನಿಶ್ಚಯ. ಅಧಿಕಾರಿಯು "ಕೂಡದು, ಈ ಗಾಡಿಯಿಂದ ನೀನು ಇಳಿಯಲೇಬೇಕು. ಇಲ್ಲದಿದ್ದರೆ ಪೊಲೀಸ್ ಕಾನ್‌ಸ್ಟೆಬಲ್‌ನನ್ನು ಕರೆಯುತ್ತೇನೆ. ನಾನೇ ಕತ್ತು ಹಿಡಿದು ದಬ್ಬುತ್ತೇನೆ" ಎಂದ.

'ಸರಿ, ನೀನು ದಬ್ಬಬಹುದು. ನಾನಾಗಿಯೇ ಗಾಡಿ ಬಿಟ್ಟು ಇಳಿಯುವುದಿಲ್ಲ.' ಕಾನ್‌ಸ್ಟೇಬಲ್ ಬಂದನು. ಅವನು ನನ್ನ ಕೈಹಿಡಿದು ನನ್ನನ್ನು ಹೊರಕ್ಕೆ ತಳ್ಳಿದ. ನನ್ನ ಸಾಮಾನುಗಳನ್ನೂ ಹೊರಕ್ಕೆ ಹಾಕಿದ. ಬೇರೆ ಗಾಡಿಗೆ ಹೋಗಲು ನಾನು ತಿರಸ್ಕರಿಸಿದೆ. ರೈಲು ಹೊರಟು ಹೋಯಿತು. ನಾನು ಹೋಗಿ ಪ್ರತೀಕ್ಷಾಗೃಹ (ವೇಟಿಂಗ್ ರೂಂ)ದಲ್ಲಿ ಕುಳಿತೆ. ಕೈಚೀಲ ಮಾತ್ರ ನನ್ನ ಬಳಿ ಇತ್ತು. ಉಳಿದ ಸಾಮಾನುಗಳೆಲ್ಲ ಅವು ಬಿದ್ದ ಎಡೆಯಲ್ಲಿಯೇ ಇದ್ದವು. ರೈಲ್ವೇ ಅಧಿಕಾರಿಗಳು ಅವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಆಗ ಚಳಿಗಾಲವಾಗಿತ್ತು. ದಕ್ಷಿಣ ಆಫ್ರಿಕಾದ ಎತ್ತರದ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಚಳಿ ಅತಿ ತೀವ್ರ. ಮೆರಿಟ್ಸ್ ಬರ್ಗ್ ನಗರ ಉನ್ನತ ಪ್ರದೇಶ ದಲ್ಲಿರುವುದರಿಂದ ಚಳಿ ಸಹಿಸಲಾಗದಷ್ಟು ತೀವ್ರವಾಗಿದ್ದಿತು. ನನ್ನ ನಿಲುವಂಗಿ ನನ್ನ ಹಾಸಿಗೆಯ ಜತೆಯಲ್ಲಿತ್ತು. ಅದನ್ನು ಕೇಳಿದರೆ ಮತ್ತೆ ನನ್ನನ್ನು ಎಲ್ಲಿ ಅವಮಾನಗೊಳಿಸುವರೋ ಎಂಬ ಭಯದಿಂದ ಕೇಳಲು ನನಗೆ ಧೈರ್ಯ ಪುಂಟಾಗಲಿಲ್ಲ, ನಾನು ನಡುಗುತ್ತಾ ಮುದುರಿಕೊಂಡಿದ್ದೆ. ಅರ್ಧರಾತ್ರಿಯ ವೇಳೆಗೆ ಮತ್ತೊಬ್ಬ ಪ್ರಯಾಣಿಕ ಒಳಕ್ಕೆ ಬಂದ, ನನ್ನೊಂದಿಗೆ ಮಾತುಕತೆಯಾಡಲು ಬಹುಶಃ ಅವನಿಗೆ ಇಷ್ಟವಿದ್ದಿತೇನೊ, ಆದರೆ ನನಗೆ ಮಾತನಾಡಲು ಬೇಕಿರಲಿಲ್ಲ. ನನ್ನ ಕರ್ತವ್ಯವೇನೆಂದು ನಾನು ಯೋಚಿಸತೊಡಗಿದೆ. ನನ್ನ ಹಕ್ಕುಗಳಿಗಾಗಿ ನಾನು ಹೋರಾಡಲೇ ಅಥವಾ ಭಾರತಕ್ಕೆ ಹಿಂದಿರುಗಿ ಹೋಗಲೇ ಅಥವಾ ನನಗಾದ ಅವಮಾನವನ್ನು ಮರೆತು, ಪ್ರಿಟೋರಿಯಾಕ್ಕೆ ಹೋಗಿ, ಮೊಕದ್ದಮೆ ಮುಗಿದ ನಂತರ ಭಾರತಕ್ಕೆ ಹಿಂದಿರುಗಲೇ? ನನ್ನ ಹೊಣೆಗಾರಿಕೆಯನ್ನು ನಿರ್ವಹಿಸದ ಭಾರತಕ್ಕೆ ಹಿಂದಿರುಗುವುದು ಹೇಡಿತನ, ನನಗೆ ಸಂಭವಿಸಿದ ಕಷ್ಟಗಳೆಲ್ಲ ಬರಿ ಮೇಲಿನ ಹುಣ್ಣು. ಆಳವಾಗಿರುವ ವರ್ಣದ್ವೇಷವೆಂಬ ರೋಗದ ಬಾಹ್ಯ ಸಂಕೇತ. ನಾನು, ಸಾಧ್ಯವಾದರೆ ಈ ರೋಗವನ್ನು ಬುಡಸಹಿತ ಕಿತ್ತು ಒಗೆಯಬೇಕು. ಆ ಪ್ರಯತ್ನದಲ್ಲಿ ಒದಗುವ ಕಷ್ಟಗಳನ್ನೆಲ್ಲ ಸಹಿಸಬೇಕು. ಈ ವರ್ಣದ್ವೇಷವನ್ನು ಹೋಗಲಾಡಿಸಲು ಎಷ್ಟರ ಮಟ್ಟಿಗೆ ಅವಶ್ಯಕವೋ ಅಷ್ಟರಮಟ್ಟಿಗೆ ಮಾತ್ರ ನಾನು ಅನ್ಯಾಯಗಳಿಗೆ ಪರಿಹಾರಗಳನ್ನು ಹೊಂದಲು ಯತ್ನಿಸಬೇಕು. ಹೀಗೆ ನಾನು ಮುಂದಿನ ರೈಲಿನಲ್ಲಿ ಪ್ರಿಟೋರಿಯಾಕ್ಕೆ ಹೋಗುವುದೆಂದು ನಿರ್ಣಯಿಸಿದ.

ಮರುದಿನ ಬೆಳಗ್ಗೆ ನಾನು ರೈಲ್ವೆಗಳ ಜನರಲ್ ಮ್ಯಾನೇಜರ್ ಅವರಿಗೆ ವಿಷಯಗಳನ್ನೆಲ್ಲ ತಿಳಿಸಿ ಒಂದು ಉದ್ದವಾದ ತಂತಿ ಸಮಾಚಾರ ಕಳುಹಿಸಿದೆ. ಅಬ್ದುಲ್ಲಾ ಸೇಠರಿಗೂ ಸುದ್ದಿ ತಿಳಿಸಿದೆ. ಸೇಠರು ಕೂಡಲೇ ಹೋಗಿ ಜನರಲ್ ಮ್ಯಾನೇಜರರನ್ನು ಸಂಧಿಸಿದರು. ಜನರಲ್ ಮ್ಯಾನೇಜರು, ರೈಲ್ವೆ ಅಧಿಕಾರಿಗಳ ವರ್ತನೆಯನ್ನೇ ಸಮರ್ಥಿಸಿದರು. ಸ್ಟೇಷನ್ ಮಾಸ್ಟರಿಗೆ ಗಾಂಧಿಯನ್ನು ಸೌಖ್ಯವಾಗಿ ಅವರ ಗುರಿಗೆ ಮುಟ್ಟಿಸುವಂತೆ ಆಗಲೇ ತಿಳಿಸಿದ್ದೇನೆ" ಎಂದು ಹೇಳಿದರು. ಅಬ್ದುಲ್ಲಾ ಸೇಠರು ಮೆರಿಟ್ಸ್‌ಬರ್ಗ್‌ನಲ್ಲಿ ಭಾರತೀಯ ವರ್ತಕರಿಗೂ ಇತರ ಸ್ಥಳಗಳಲ್ಲಿಯ ಸ್ನೇಹಿತರಿಗೂ ನನ್ನನ್ನು ಸಂಧಿಸುವಂತೆಯೂ ನನ್ನ ಕ್ಷೇಮವನ್ನು ನೋಡಿಕೊಳ್ಳುವಂತೆಯೂ ತಂತಿ ಕೊಟ್ಟರು. ವರ್ತಕರು ರೈಲ್ವೆ ಸ್ಟೇಷನ್ನಿನಲ್ಲಿ ಬಂದು ನನ್ನನ್ನು ಎದುರುಗೊಂಡರು. ತಮಗೆ ಸಂಭವಿಸಿದ್ದ ಕಷ್ಟಗಳನ್ನೆಲ್ಲ ವಿವರಿಸಿ, ಉಂಟಾದ ಕಷ್ಟಗಳು ಅಸಾಧಾರಣವಾದ ವಿಷಯವಲ್ಲವೆಂದು ಹೇಳಿ ನನ್ನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು. ಮೊದಲನೆಯ ಮತ್ತು ಎರಡನೆಯ ತರಗತಿಗಳಲ್ಲಿ ಪ್ರಯಾಣ ಮಾಡುವ ಭಾರತೀಯರು, ರೈಲ್ವೇ ನೌಕರರಿಂದಲೂ ಬಿಳಿಯ ಪ್ರಯಾಣಿಕರಿಂದಲೂ ತೊಂದರೆಯನ್ನು ನಿರೀಕ್ಷಿಸಬೇಕೆಂದೂ ಅವರು ಹೇಳಿದರು. ಆ ಮುಖದ ಕತೆಗಳನ್ನು ಕೇಳುವುದರಲ್ಲಿಯೇ ಆ ದಿನ ಕಳೆದು ಹೋಯಿತು. ಸಾಯಂಕಾಲದ ರೈಲು ಬಂತು. ಅದರಲ್ಲಿ ನನಗಾಗಿ ಒಂದು ಮಲಗುವ ಸ್ಥಳವನ್ನು ಕಾದಿರಿಸಿದ್ದರು. ನಾನು ಅದನ್ನು ಡರ್ಬಾನಿನಲ್ಲಿ ಕೊಳ್ಳಲು ತಿರಸ್ಕರಿಸಿದ್ದರೂ ಮೆರಿಟ್ಸ್‌ಬರ್ಗ್‌ನಲ್ಲಿ ಒಂದು ಹಾಸಿಗೆ ಟಿಕೆಟನ್ನು ಕೊಂಡುಕೊಂಡೆ. ರೈಲು ನನ್ನನ್ನು ಚಾರ್ಲ್ಸ್‌ಟೌನ್‌ಗೆ ಕರೆದುಕೊಂಡು ಹೋಯಿತು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇದು ತಪ್ಪು ಎಂದು ಹೇಳಿದೆ. ಆದರೆ ನನ್ನದೇ ಸರಿ, ಉಳಿದವರು ತಪ್ಪು ಎಂಬ ಭಾವನೆಯು ಅಳಿಯಬೇಕು. ಜಗತ್ತಿನಲ್ಲಿ ಬೇರೆ ಬೇರೆ ಮನೋಧರ್ಮ ಇರುವವರೆಗೆ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಆದರೆ ಸಹನೆಯನ್ನು ಹೆಚ್ಚಿಸಲು ನಾವು ಎಲ್ಲವನ್ನೂ ಅಪ್ಪಿಕೊಳ್ಳುತ್ತೇವೆ. ಇದು ಅಹಿಂಸೆಯ ಒಂದು ಅಂಗ. ಆದರೆ ನಾನು ಹೇಳಿದ ಹಾಗೆ ಇದು ಚಿಕ್ಕ ವಿಷಯ. ಈ ಪ್ರತಿಜ್ಞೆಯಲ್ಲಿ ಮುಖ್ಯ ವಿಷಯ ರಾಟೆ. ಚರಖಾಶಾಸ್ತ್ರದಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ, ಖಾದಿಯಲ್ಲಿ ನಿಮಗೆ ಶ್ರದ್ಧೆ ಇಲ್ಲದಿದ್ದರೆ, ಈ ಹೊಸ ಮತದಾನ ಪದ್ಧತಿ ಕಾಂಗ್ರೆಸ್ಸನ್ನು ದುರ್ಬಲಗೊಳಿಸುತ್ತದೆ ಎಂದು ನಿಮಗನಿಸಿದರೆ, ರಾಟೆಯನ್ನು ಕೈಬಿಡಿ ಎನ್ನುತ್ತೇನೆ.

ಸೋದರರೇ, ಈ ಕೆಲಮಾತನ್ನು ನನ್ನ ಹರಕುಮುರುಕು ಹಿಂದಿಯಲ್ಲಿ ಹೇಳಿದ್ದೇನೆ. ಕರ್ನಾಟಕದ, ದಕ್ಷಿಣ ಭಾರತದ ಕೆಲವರು ಇಂಗ್ಲೀಷಿನಲ್ಲಿ ಮಾತನಾಡಿ ಎನ್ನುತ್ತಿದ್ದೀರಿ. ಇದರಿಂದ ನನಗೆ ನೋವಾಗುತ್ತದೆ. ನಾನು ಭಾರತಕ್ಕೆ ಬಂದಾಗಿನಿಂದ ಕನಿಷ್ಠಪಕ್ಷ ಕಾಂಗ್ರೆಸ್ಸಿನಲ್ಲಾದರೂ ಸ್ವರಾಜ್ಯದ ಮಾತನಾಡುವಾಗ, ಹಿಂದಿಯಲ್ಲೇ ಮಾತನಾಡೋಣ ಎನ್ನುತ್ತಿದ್ದೇನೆ. ನಮ್ಮ ದುರ್ದೈವ. ನಮ್ಮ ಶಿಕ್ಷಣ ಬಹಳ ತಪ್ಪು. ಅದರ ತುಂಬ ಸೋಮಾರಿತನ ಸೇರಿಕೊಂಡಿದೆ. ಇದಕ್ಕಾಗಿ ಎಷ್ಟು ಪ್ರಯತ್ನ ಮಾಡಬೇಕೋ ಅಷ್ಟು ಪ್ರಯತ್ನ ಮಾಡುತ್ತಿಲ್ಲ. ಈಗಲೂ ಕೂಡ ನನ್ನ ಹರಕುಮುರುಕು ಹಿಂದಿ ತಮಿಳುನಾಡಿನ, ಕರ್ನಾಟಕದ ಸೋದರರಿಗೆ ಅರ್ಥವಾಗುತ್ತದೆ ಸ್ವಲ್ಪಮಟ್ಟಿಗೆ ಎಂದು ನನಗೆ ಮನವರಿಕೆಯಾದರೆ ನಾನು ಸಮಾಧಾನಗೊಂಡು ಹೋಗುತ್ತೇನೆ. ಆದರೆ ಪರಿಸ್ಥಿತಿ ಹಾಗಿಲ್ಲ. ದೇಶಬಂಧು ದಾಸರನ್ನು ನಾನು ಮರೆಯುತ್ತಿದ್ದೇನೆ. ಈ ಪಾಪಕ್ಕೆ ಬಂಗಾಲದ್ದೂ ಕಾಣಿಕೆ ಇದೆ. ರವೀಂದ್ರನಾಥ ಠಾಕೂರರು ಅಂಥ ಅದ್ಭುತ ಸಾಹಿತ್ಯ ಸೃಷ್ಟಿಸಿರುವ ಆ ಭಾಷೆಯನ್ನು ಕಲಿಯಲು ದೇವರು ನನಗೆ ಶಕ್ತಿ ಕೊಟ್ಟಿದ್ದರೆ ಚೆನ್ನಾಗಿತ್ತು. ನನ್ನ ಬಂಗಾಳಿ ಸೋದರರಿಗೆ ಆ ಭಾಷೆಯಲ್ಲಿ ಹೇಳಬಹುದಾಗಿತ್ತು.

ಇನ್ನು ಒಂದೇ ಒಂದು ಬಿನ್ನಹ. ಚೆನ್ನಾಗಿ ತಿಳಿದುಕೊಳ್ಳಿ. ನಾನು ಹೇಳಬೇಕಾದ್ದನ್ನೆಲ್ಲ ಹಿಂದಿಯಲ್ಲಿ ಹೇಳಿದ್ದೇನೆ. ನಿಮಗೂ ಅರ್ಥವಾಗಿದೆ. ದಾಸರು ಬಂದು ತಮಗೆ ಬೇಕಾದದ್ದನ್ನು ಹೇಳುತ್ತಾರೆ. ದಾಸರು ಗೊತ್ತುವಳಿಯನ್ನ ಓದುವುದಿಲ್ಲ. ಓದಲು ಒತ್ತಾಯ ಮಾಡಬೇಡಿ. ನೀವು ಓದಿರದಿದ್ದರೆ ನಾಳೆ ಪತ್ರಿಕೆಗಳಲ್ಲಿ ಓದಿ. ಅದರಲ್ಲಿ ಇರುವುದು ಇಷ್ಟೇ. ಪರಿವರ್ತನವಾದಿಗಳು, ಅಪರಿವರ್ತನವಾದಿಗಳು ಏಕಮತದಿಂದ ಇರಬೇಕು ಎಂಬುದು ಆಶಯ. ನಮ್ಮ ಅಭಿಪ್ರಾಯಗಳೂ ಬೇರೆ ಬೇರೆ. ಆದರೆ ನಮ್ಮ ಹೃದಯ ಒಂದೇ. ನೀವು ಅಪರಿವರ್ತನವಾದಿಗಳಾಗಿದ್ರೆ ನಿಮ್ಮ ಹೃದಯದಲ್ಲಿ ನನಗಿರುವಷ್ಟು ಸ್ಥಾನವೇ ದೇಶಬಂಧು ದಾಸರಿಗೆ, ಪಂಡಿತ್ ಮೋತಿಲಾಲರಿಗೆ, ಕೇಳಕರರಿಗೆ, ಇತರರಿಗೆ ಇರಬೇಕು. ನಿಮ್ಮ ನಾಯಕರುಗಳಿಗೆ ಕೊಡುವಷ್ಟು ಗೌರವವನ್ನು ನನಗೂ ಕೊಡಬೇಕು. ಇದೇ ಹಿಂದೂಮುಸ್ಲಿಮ್ ಐಕ್ಯತೆ. ಹಿಂದೂ ಮುಸ್ಲಿಮ್ ಐಕ್ಯ ಎಂದರೆ ನಾನು ಸನಾತನ ಇದ್ದರೆ ನನ್ನ ಹೃದಯದಲ್ಲಿ ಮಾಲವೀಯ ಅವರಿಗೆ ಯಾವ ಸ್ಥಾನವಿದೆಯೋ ಮೌಲಾನ ಮಹಮದಾಲಿ, ಶೌಕತಾಲಿ ಮತ್ತು ಇತರ ಮುಸಲ್ಮಾನರ ಬಗ್ಗೆಯೂ ಅದೇ ಸ್ಥಾನ ಇರಬೇಕು. ಅವರು ನಮ್ಮನ್ನು ಶತ್ರುಗಳೆಂದು ತಿಳಿದರೂ ಕೂಡ ನಮ್ಮ ಈ ಭಾವ ಕದಲಕೂಡದು; ವಿಚಿತ್ರ ಅಲ್ಲವೇ ಇದು. ಮಾಲವೀಯರೊಂದು ಕಡೆ, ನಮ್ಮನ್ನು ಶತ್ರು ಎಂದು ತಿಳಿದ ಮುಸಲ್ಮಾನ ಒಂದು ಕಡೆ. ಆದರೆ ಈ ಗೀತೆ ಭಾಗವತ, ರಾಮಾಯಣಗಳ ಅಭ್ಯಾಸದಿಂದ ನಾನು ಏನಾದರೂ ಕಲಿತಿದ್ದರೆ ಅದು ಇದೇ.

ಇನ್ನು ನೀವು ಗೊತ್ತುವಳಿ ಓದಿಕೊಳ್ಳಿ ಮತ್ತು ದಾಸರು ಹೇಳುವದನ್ನು ಕೇಳಿಕೊಳ್ಳಿ. ದಾಸರಿಗೆ ಗೊತ್ತುವಳಿ ಓದಲು ಒತ್ತಾಯಪಡಿಸಬೇಡಿರಿ.

ಅಧ್ಯಕ್ಷರು ಇಂಗ್ಲೀಷಿನಲ್ಲಿ ಭಾಷಣ ಮುಂದುವರಿಸಿದರು:

ಹತ್ತು ನಿಮಿಷಕ್ಕಿಂತ ಹೆಚ್ಚಾಗಿ ಮಾತನಾಡುವುದಿಲ್ಲ. ಅರ್ಧ ಗಂಟೆ ಎಂದುಕೊಂಡಿದ್ದೆ. ಅದರಲ್ಲೇ ಆಗಲೇ ಹಿಂದೂಸ್ತಾನೀ ಭಾಷಣಕ್ಕೆ ತುಂಬಾ ಹೊತ್ತು ತೆಗೆದುಕೊಂಡೆ. ನನ್ನ ಭಾಷಣ ನಿಮಗೆ ಆಗಲೇ ಸಿಕ್ಕಿದೆ. ಅದನ್ನು ನಾನು ಈಗ ಓದುವುದಿಲ್ಲ. ಅದರಿಂದ ನಿಮಗೂ ಕಾಲಹರಣ, ನನಗೂ ಕಾಲಹರಣ. ನಿಮಗೆ ಬೇಸರ, ಆದ್ದರಿಂದ ಭಾಷಣ ಓದುವುದಿಲ್ಲ. ಆದಷ್ಟು ಕೆಲಸಕ್ಕೆ ತೊಡಗಬೇಕು ದೇಶಬಂಧು ದಾಸರು ಮುಖ್ಯ ಗೊತ್ತುವಳಿಯನ್ನು ಮಂಡಿಸುತ್ತಾರೆ. ನೀವು ಆ ಗೊತ್ತುವಳಿಯನ್ನು ತಿರಸ್ಕರಿಸಿದರೆ, ನಿಮ್ಮ ದಾರಿ ನೀವು ಹಿಡಿದು, ದೇಶಕ್ಕೂ, ನಿಮಗೂ ಯಾವುದು ಉತ್ತಮ ಎನಿಸುತ್ತದೆಯೋ ಆ ರೀತಿ ನೀವು ಮಾಡಬೇಕು; ನಾನು ಉತ್ತಮ ಎಂದು ತಿಳಿದುಕೊಂಡ ಕೆಲಸವನ್ನು, ಎಂದರೆ ನೂಲುವುದನ್ನು ಮಾಡಲು ನನಗೆ ಅನುಮತಿ ಕೊಡಬೇಕು. ನಿಮ್ಮ ಮುಂದೆ ಬರುವ ಗೊತ್ತುವಳಿಯನ್ನು ನೀವೆಲ್ಲರೂ, ಪ್ರತಿಯೊಬ್ಬರು ಚೆನ್ನಾಗಿ ಪರ್ಯಾಲೋಚಿಸಿ ಎಂದು ಕೇಳಿಕೊಳ್ಳುತ್ತೇನೆ.

ರಾಷ್ಟ್ರದ ಮುಂದೆ ಒಂದು ಕ್ರಾಂತಿಕಾರಿ ಪರಿವರ್ತನೆಯ ವಿಚಾರವನ್ನು ಮಂಡಿಸಲಾಗುತ್ತಿದೆ. ಲಾಲಾಜಿ ಹೇಳಿದಂತೆ ಕಲ್ಕತ್ತೆಯ ವಿಶೇಷ ಅಧಿವೇಶನದಲ್ಲಿ – 1920ರಲ್ಲಿ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರ ಕೈಕೊಂಡ ಪರಿವರ್ತನೆಯಷ್ಟೇ ಇದೂ ಕ್ರಾಂತಿಕಾರಿ ಎನ್ನುತ್ತೇನೆ. ನಾನು ದೇಶದ ಮುಂದಿಟ್ಟಿರುವ ಈ ಬದಲಾವಣೆಯು ಅದಕ್ಕಿಂತಲೂ ಹೆಚ್ಚು ಕ್ರಾಂತಿಕಾರಿ ಎಂದು ಹೇಳಿದ ಅವರ ಮಾತಿಗೆ ದನಿಗೂಡಿಸುತ್ತೇನೆ.

ಮುಂದುವರಿಯುವುದು...

ಡಾ. ಬಾಬು ಜಗಜೀವನರಾಮ್ : (05.04.1908 – 06.07.1986)

ಜೀವನದ ಪ್ರಮುಖ ಘಟನಾವಳಿಗಳು

ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮೇ 1936 : ಹಮಂಡ್ ಆಯೋಗದ ಮುಂದೆ ಸಾಕ್ಷಿ ಮಂಡನೆ.

ಆಗಸ್ಟ್ 1936 : ನಿಮ್ನ ವರ್ಗಗಳ ಒಕ್ಕೂಟದ ಚುನಾವಣೆ ಪ್ರಣಾಳಿಕೆ ಬಿಡುಗಡೆ.

ಆಗಸ್ಟ್ 1937 : ದೆಹಲಿಯಲ್ಲಿ ನಡೆದ ಎ.ಐ.ಸಿ.ಸಿ. ಸಭೆಯಲ್ಲಿ ಭಾಗಿ. ಬಿಹಾರದಲ್ಲಿ ಕಾಂಗ್ರೆಸ್ ಪಕ್ಷ ಸರ್ಕಾರ ಸ್ಥಾಪಿಸಿದಾಗ ಶ್ರೀ ಚೌಗಲಾಲ್ ಚೌಧರಿ ಪರವಾಗಿ ಮಂತ್ರಿ ಪದವಿ ತ್ಯಜಿಸಿ, ಸಂಸದೀಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕಾರ.

1938 : ಹಿರಾಪುರದಲ್ಲಿ ನಡೆದ ಎ.ಐ.ಸಿ.ಸಿ. ಸಭೆಗೆ ಪ್ರತಿನಿಧಿಯಾಗಿ ಆಯ್ಕೆ. ಬಿಹಾರ ರಾಜ್ಯ ಶಾಖೆ ಸೌಟ್ ಪ್ರಾಂತೀಯ ಉಪ ಆಯುಕ್ತರಾಗಿ ನೇಮಕ, ಭಾರತ ಬ್ರಿಟಿಷ್ ಜಾಗತಿಕ ಯುದ್ಧದಲ್ಲಿ ಭಾಗವಹಿಸುವುದನ್ನು ವಿರೋಧಿಸಿ ಪ್ರಾಂತೀಯ ಕಾಂಗ್ರೆಸ್ ಸರಕಾರಕ್ಕೆ ರಾಜೀನಾಮೆ.

ಜುಲೈ 1939 : ಪರಿಶಿಷ್ಟರ ಉದ್ಧಾರಕ್ಕೆ ಕೆಲವು ಕಾರ್ಯಕ್ರಮಗಳ ಆಯೋಜನೆ, ಬಿಹಾರ, ಒರಿಸ್ಸಾ ಮತ್ತು ಗುಜರಾತ್ ರಾಜ್ಯಗಳಲ್ಲಿ ಭೂರಹಿತ ಕೃಷಿ ಕಾರ್ಮಿಕರ ಒಕ್ಕೂಟ ಸ್ಥಾಪನೆ.

1940 : ಎ.ಐ.ಸಿ.ಸಿ. ಸದಸ್ಯರಾಗಿ ಆಯ್ಕೆ, ಬಿಹಾರ ಪ್ರಾಂತ ಕಾಂಗ್ರೆಸ್ ಸಮಿತಿಗೆ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ, ಬಾಂಬೆ ಮತ್ತು ಪೂನಾಗಳಲ್ಲಿ ನಡೆದ ಎ.ಐ.ಸಿ.ಸಿ. ಸಭೆಗೆ ಭಾಗಿ. ಗಾಂಧೀಜಿ ಅವರ ಕರೆ ಮೇರೆಗೆ ವೈಯಕ್ತಿಕ ಸತ್ಯಾಗ್ರಹ ಆಚರಣೆ.

ಡಿಸೆಂಬರ್ 1940 : ಪೆರುವಿನಲ್ಲಿ ಬಂಧನ ಆರ್‍ರಾನಗರದಲ್ಲಿ ವಿಚಾರಣೆ, ಹಜಾರಿಬಾಗ್ ಜೈಲಿನಲ್ಲಿ ಒಂದು ವರ್ಷ ಸೆರೆಮನೆ ವಾಸ, ಕಾರ್ಲ್ ಮಾರ್ಕ್ಸ್ ಸಾಹಿತ್ಯ, ಧರ್ಮಶಾಸ್ತ್ರಗಳ ಅಧ್ಯಯನ.

1941 : ಸೆರೆಮನೆಯಿಂದ ಬಿಡುಗಡೆ ಗಾಂಧೀಜಿಯ ಅವರೊಡನೆ ರಾಷ್ಟ್ರೀಯ ಮತ್ತು ಪರಿಶಿಷ್ಟರ ಸಮಸ್ಯೆಗಳನ್ನು ಕುರಿತು ವಾರ್ಧಾದಲ್ಲಿ ಚರ್ಚೆ.

1942 : ಮೀರತ್‌ನಲ್ಲಿ ನಿಮ್ನ ವರ್ಗಗಳ ಒಕ್ಕೂಟದ ಸಭೆಯಲ್ಲಿ ಭಾಷಣ. ಬೊಂಬಾಯಿ ಎ.ಐ.ಸಿ.ಸಿ. ಅಧಿವೇಶನದಲ್ಲಿ ಭಾಗಿ, ಗಾಂಧೀಜಿ ಅವರ ಕರೆಯ ಮೇರೆಗೆ ಬಂಧನ ತಪ್ಪಿಸಿಕೊಳ್ಳಲು ತಲೆಮರೆಸಿಕೊಂಡು ಪಾಟ್ನಾ ತಲುಪಿ ಗಾಂಧೀಜಿ ಅವರ ಸಂದೇಶವನ್ನು ಜನರಲ್ಲಿ ಸಾರಿದರು.

ಆಗಸ್ಟ್ 1942 : ಪಾಟ್ನಾದಲ್ಲಿ ಬಂಧನಕ್ಕೊಳಗಾಗಿ ಡಾ. ರಾಜೇಂದ್ರ ಪ್ರಸಾದ್, ಎ.ಎಸ್. ಸಿನ್ಹ ಮುಂತಾದವರ ಜೊತೆಗೆ ಬಂಕಿಪುರ ಜೈಲುವಾಸ,

ಸೆಪ್ಟೆಂಬರ್ 1942 : ಹಜಾರಿಬಾಗ್ ಜೈಲಿಗೆ ಸ್ಥಳಾಂತರ.

ಅಕ್ಟೋಬರ್ 1943 : ಸೆರೆಮನೆವಾಸದಿಂದ ಬಿಡುಗಡೆ.

ಸೆಪ್ಟೆಂಬರ್ 1944 : ಮಧ್ಯ ಪ್ರದೇಶ, ಬಾಂಬೆ ಮತ್ತು ನಾಗಪುರದಲ್ಲಿ ನಡೆದ ಭಾರತೀಯ ನಿಮ್ನ ವರ್ಗಗಳ ಒಕ್ಕೂಟದ ಸಭೆಯಲ್ಲಿ ಭಾಷಣ ಮತ್ತು ಸಮಿತಿಗೊಪ್ಪಿಸಲು ಮನವಿ ಪತ್ರ ತಯಾರಿಕೆ.

1946 : ಸುಪುತ್ರಿ ಮೀರಾ ಜನನ.

1946 : ಸಚಿವ ಸಂಪುಟ ನಿಯೋಗದ ಮುಂದೆ ಪರಿಶಿಷ್ಟ ಜಾತಿಗಳ ಅಭಿಪ್ರಾಯ ಮಂಡನೆ.

ಜೂನ್ 1946 : ಕೇಂದ್ರದಲ್ಲಿ ಮಂತ್ರಿ ಮಂಡಲ ರಚಿಸುವಂತೆ ವೈಸರಾಯ್‌ರವರಿಂದ ನೆಹರು ಅವರಿಗೆ ಕರೆ.


ಮಧ್ಯಂತರ ಸರ್ಕಾರದಲ್ಲಿ ಶ್ರೀಯುತರಾದ ಜವಾಹರಲಾಲ್ ನೆಹರು, ಸರದಾರ್ ವಲ್ಲಭಾಯ್ ಪಟೇಲ್, ಡಾ. ರಾಜೇಂದ್ರ ಪ್ರಸಾದ್, ಆಸಫ್ ಆಲಿ, ರಾಜಗೋಪಾಲಾಚಾರಿ, ಶರತ್ ಚಂದ್ರ, ಡಾ. ಜಾನ್ ಮಥಾಯ್, ಸರದಾರ್ ಬಲದೇವ್ ಸಿಂಗ್, ಸರ್ ಷಾಫತ್ ಅಹಮದ್ ಖಾನ್, ಜಗಜೀವನ್ ರಾಮ್, ಸಯ್ಯದ್ ಅಲಿ ಜಮೀಲ್ ಖಾನ್, ಸಿ.ಹೆಚ್ ಬಾಬಾ ಇವರುಗಳನ್ನೊಳಗೊಂಡ ಮಂತ್ರಿ ಮಂಡಲ ರಚಿಸಲು ನೆಹರೂ ಅವರ ಶಿಫಾರಸು.

ಸೆಪ್ಟೆಂಬರ್ 1946 : ಮಧ್ಯಂತರ ರಾಷ್ಟ್ರೀಯ ಸರ್ಕಾರದ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ, ಕಾರ್ಮಿಕ ಖಾತೆ ನಿರ್ವಹಣೆಯ ಕಾರ್ಯಭಾರ.

ಮುಂದುವರಿಯುವುದು...



ಕಾಮಿಕ ಇಲಾಖೆಯ ಸಭೆಯಲ್ಲಿ ಭಾಷಣ 14.10.1946



ಕಾರ್ಮಿಕ ಸಚಿವರಾಗಿ ಬಾಬೂಜಿ – 1946

ಗಾಂಧೀಜಿ ಅವರ ದೃಷ್ಟಿಯಲ್ಲಿ ಸುಭಾಷ್‌ಚಂದ್ರ ಬೋಸ್



(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನೆಹರೂ ಅವರಿಗೆ ಸುಭಾಷ್ ತಮಗೆ ಸಮರ್ಥ ಪ್ರತಿಸ್ಪರ್ಧಿ ಆಗುತ್ತಾರೆ ಎನ್ನುವ ಭಯ ಇತ್ತು ಎನ್ನುವ ಮಾತುಗಳನ್ನೂ ನಾನು ಕೇಳಿದ್ದೇನೆ. ಭಾರತ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿಯಾಗಿಯೇ ಇರಬೇಕು. ಮುಖ್ಯವಾಗಿ ಎಲ್ಲರಿಗೂ ವ್ಯಕ್ತಿ ಸ್ವಾತಂತ್ರ್ಯ ಇರಬೇಕು. ಎಲ್ಲರೂ ತಮ್ಮ ಧರ್ಮಗಳನ್ನು ಆಚರಿಸಲಿ. ಹಿಂದೂಗಳಾಗಲೀ ಮುಸ್ಲಿಮರಾಗಲೀ ಅವರ ಧರ್ಮಗಳನ್ನು ತಮ್ಮ ಮನೆಯಲ್ಲಿ, ದೇವಾಲಯ, ಮಸೀದಿಗಳಲ್ಲಿ ಆಚರಿಸಲಿ. ಧರ್ಮವನ್ನು ರಾಜಕೀಯಕ್ಕೆ ಬಳಸುವ ಕೆಲಸ ಮಾಡಬಾರದು. ಧರ್ಮವು ರಾಜಕೀಯದಿಂದ ಸಮಾನಾಂತರ ಕಾಯ್ದುಕೊಳ್ಳಬೇಕು. ರಾಜಕೀಯದಲ್ಲಿ ಧರ್ಮ ಬೆರೆಸುವ ಕೆಲಸ ಎಳ್ಳಷ್ಟೂ ಸರಿಯಲ್ಲ. ಆಡಳಿತ ಜಾತ್ಯತೀತ ರೀತಿಯಲ್ಲಿ ನಡೆಯಬೇಕು. ಗಾಂಧೀಜಿ ಅವರು ರಾಜಕೀಯದಲ್ಲಿ ಧರ್ಮದೃಷ್ಟಿ ಇರಬೇಕು ಎಂದು ಹೇಳಿದ್ದು ಬೇರೆ ಅರ್ಥದಲ್ಲಿ. ಅವರ ಧರ್ಮದ ಪರಿಕಲ್ಪನೆ ವಿಶಾಲವಾದ ಮಾನವೀಯತೆಯ, ಎಲ್ಲರನ್ನೂ ಒಳಗೊಳ್ಳುವ ಮೌಲ್ಯಗಳ ದೃಷ್ಟಿ. ಯಾವ ಧರ್ಮವೂ ಹಿಂಸೆಯನ್ನು ಆರಾಧಿಸುವುದಿಲ್ಲ. ಅರಬಿಂದೊ ಅವರು ಹೇಳಿದ ಹಾಗೆ ಇಷ್ಟೊಂದು ಧರ್ಮಗಳು ಏಕೆ ಹುಟ್ಟಿಕೊಂಡಿವೆ ಅಂದರೆ, ಒಂದು ಧರ್ಮದಲ್ಲಿ ಸ್ವಲ್ಪ ಕೊರತೆ, ಗ್ಲಾನಿ ಕಂಡುಬಂದಾಗ ಇನ್ನೊಬ್ಬ ಜ್ಞಾನಿ ಬಂದು ಇನ್ನೊಂದು ಧರ್ಮವನ್ನು ಸ್ಥಾಪನೆ ಮಾಡಿದ ಎಂದು ಅರವಿಂದರು ಹೇಳುತ್ತಾರೆ. ಮಾನವರನ್ನು ಒಂದುಗೂಡಿಸುವ ಕೆಲಸವನ್ನೇ ಎಲ್ಲ ಧರ್ಮಗಳು ಮಾಡುತ್ತವೆ. ಗಾಂಧೀಜಿ ಅವರ ಧರ್ಮದ ದೃಷ್ಟಿಕೋನ ಸರ್ವಕಾಲೀನ ಮತ್ತು ಇಡೀ ಪ್ರಪಂಚಕ್ಕೇ ಸಂಬಂಧಪಟ್ಟ ವಿಶ್ವಮಾನವತ್ವವನ್ನು ಬೋಧಿಸುವಂತಹದು. ಅದರಲ್ಲಿ ಈ ಜಾತಿ, ಆ ಜಾತಿ, ಈ ದೇಶ, ಆ ದೇಶ ಎನ್ನುವ ಯಾವಪ್ರಶ್ನೆಯೂ ಬರುವುದಿಲ್ಲ. ಬಿ. ಎಂ. ಹನೀಫ್ ಅವರು ಸುಭಾಷ್‌ಚಂದ್ರ ಬೋಸರ ಕುರಿತು ಬರೆದಿರುವ ಪುಸ್ತಕ ಈ ಕಾಲಕ್ಕೆ ಅಗತ್ಯವಾಗಿದೆ. ರಾಷ್ಟ್ರೀಯತೆ ಮತ್ತು ಸರ್ವಧರ್ಮ ಸಮಭಾವದ ಕುರಿತು ಸಾಕಷ್ಟು ಗೊಂದಲಗಳನ್ನು ಕೆಲವರು ಸೃಷ್ಟಿಸುತ್ತಿರುವ ಈ ಕಾಲಘಟ್ಟದಲ್ಲಿ ಸುಭಾಷರ ರಾಷ್ಟ್ರೀಯತೆಯ ಮತ್ತು ಸರ್ವಧರ್ಮ ಸಮಭಾವದ ಕುರಿತ ವಿಚಾರಗಳು ಹೆಚ್ಚು ಹೆಚ್ಚು ಜನರಿಗೆ ತಲುಪಬೇಕು. ಈ ವಿಚಾರಗಳನ್ನು ಹೆಚ್ಚು ಹೆಚ್ಚು ಪ್ರಚಾರ ಮಾಡಬೇಕು.

ಮುಂದುವರಿಯುವುದು...

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಯುದ್ಧ ಮತ್ತು ಶಾಂತಿ : ಬಾಪುವಿನ ದೃಷ್ಟಿಕೋನ

ಪ್ರಾಯಶಃ ಬಾಪು ಇದೆಲ್ಲಾ ನೋಡುತ್ತಾ ಕಣ್ಮುಚ್ಚಿ ಮೌನಧರಿಸಿ ಧ್ಯಾನಸ್ಥರಾಗುತ್ತಿದ್ದರೇನೊ!? ರಷ್ಯಾ–ಉಕ್ರೇನ್ ಸಮರದಲ್ಲಿ ತೊಡಗಿಕೊಂಡಿವೆ. ಬಲಾಢ್ಯ ದೇಶವೊಂದು ಸಾಮಾನ್ಯ ದೇಶವೊಂದರ ಮೇಲೆ ಯುದ್ಧ ಸಾರಿದೆ. ಉಕ್ರೇನ್ ಕೂಡ ತನ್ನ ಸಾರ್ವಭೌಮತ್ವದ ಕುರುಹಾಗಿ ಹಠವಿಡಿದು ತನ್ನನ್ನು ತಾನು ರಕ್ಷಿಸಿಕೊಳ್ಳಲು ಹೆಣಗಾಡುತ್ತಲೆ ಸಮರಾಗ್ನಿಗೆ ತುಪ್ಪ ಉಣಿಸುತ್ತಿದೆ. ಟಿ.ವಿ –ಮೊಬೈಲ್ ಪರದೆಗಳ ಮೇಲೆ ಬಾಂಬುಗಳ ಆರ್ಭಟ, ಮಿಸೈಲ್ ದಾಳಿಗಳಿಗೆ ಉರುಳಿ ಬೀಳುತ್ತಿರುವ ಕಟ್ಟಡಗಳು, ಸುಟ್ಟು ಕರಕಲಾದ ದೇಹಗಳು, ಆಶ್ರಯ ಹೀನರಾಗಿ ಜೀವ ಉಳಿಸಿಕೊಳ್ಳಲು ಬೇರೆಯ ಅಥವಾ ಸ್ವಂತ ದೇಶಗಳಿಗೆ ಪಲಾಯನ ಮಾಡಲು ಹವಣಿಸುತ್ತಿರುವ ಜೀವಗಳು, ಅನ್ನಕ್ಕಾಗಿ ಅಂಗಲಾಚುತ್ತಿರುವ ಕೈಗಳು, ತಮ್ಮವರನ್ನು ಕಳೆದುಕೊಂಡು ರೋಧಿಸುತ್ತಿರುವ ಕಣ್ಣುಗಳ ಕಣ್ಣೀರು ಧಾರೆಯಾಗಿ ಹರಿಯುತ್ತಿವೆ. ಇಡಿ ಜಗತ್ತೇ ಯುದ್ಧದ ಕುರಿತಾಗಿ ಆತಂಕಿತ ದನಿಯಲ್ಲಿ ಚರ್ಚೆ ನಡೆಸುತ್ತಿದೆ. ರಷ್ಯಾ ದೇಶವು ನಡೆಸಿರುವ ಉಕ್ರೇನ್ ಮೇಲಿನ ದಾಳಿಯನ್ನು ಶಾಂತಿಪ್ರಿಯರಲ್ಲದವರೂ ಖಂಡತುಂಡವಾಗಿ ಕೆಂಡಕಾರುತ್ತಿದ್ದಾರೆ. ಆದರೆ ಅವರೆಲ್ಲಾ ಅಸಹಾಯಕರಾಗಿದ್ದಾರೆ. ಸ್ವತಃ ಬಾಪೂ ಕೂಡ ಅಸಹಾಯಕತೆಯಿಂದ ಯಾರಿಗೂ ಏನೂ ಹೇಳದೆ ನಿರ್ಲಿಪ್ತರಾಗಿ ಧ್ಯಾನಸ್ಥರಾಗಿರುವ ಹಾಗೆ. ವರ್ತಮಾನದ ಈ ಹಠ ಮತ್ತು ಪ್ರತಿಷ್ಠೆಯ ಜಿಡ್ಡು ಮೆತ್ತಿಕೊಂಡ ಮನಸ್ಸುಗಳಿಂದ ಜಾಗತಿಕವಾಗಿ ಎದ್ದಿರುವ ಹಿಂಸೆಯ ತಲ್ಲಣ ನಿಜಕ್ಕೂ ಬಾಪುರವರನ್ನ ಕೆಂಗೆಡಿಸುತ್ತಿದ್ದುದ್ದೇನೊ. ವಾಸ್ತವದ ಬದುಕಿನಲ್ಲಿ ಅವರು ಭೌತಿಕವಾಗಿ ಇದ್ದಿದ್ದರೆ ಅವರ ಮಾತುಗಳು ಅಪ್ರಸ್ತುತವಾಗಿಬಿಡುತ್ತಿದ್ದವೇನೊ. ಸದ್ಯದ ತಮ್ಮ ಕಣ್ಣುಗಳಿಂದ ದ್ವೇಷ ಮತ್ತು ಹಿಂಸೆಯ ಉರಿ ಉಗುಳುವ ಸಾಮ್ರಾಜ್ಯ ವಿಸ್ತರಣಾ ಸರ್ವಾಧಿಕಾರಿ ಮನೋಸ್ಥಿತಿಯ ನಾಯಕರುಗಳ ಅಸ್ತ್ರಾರ್ಭಟಕ್ಕೆ ಮೌನ ಮಾತ್ರವಾಗಿರದೆ ಬಾಪುಗೆ ಅನ್ಯ ಮಾರ್ಗ ಇರುತ್ತಿರಲಿಲ್ಲವೋ ಏನೋ? ಆದರೂ ಅವರು ಪ್ರತಿಪಾದಿಸಿದ ಈ ಸಂದರ್ಭಕ್ಕೆ ಒಗ್ಗುವ ಅವರ ಚಿಂತನೆಗಳ ಪ್ರಸ್ತುತತೆಯನ್ನು ಮಾತ್ರ ಚರ್ಚಿಸಬಹುದಾಗಿದೆ. ಅಷ್ಟೇ ಅಲ್ಲದೆ ಯುವಮನಸ್ಸುಗಳಿಗೆ ಅವರ ಶಾಂತಿ ಮತ್ತು ಅಹಿಂಸೆಯ ನುಡಿಗಳನ್ನು ತಲುಪಿಸುವುದು ಎಲ್ಲರ ಹೊಣೆಗಾರಿಕೆಯಾಗಿದೆ. ಪ್ರಸ್ತುತ ಸಮರಕ್ಕೆ ಕಾಲುಕೆರೆದು ಅಣಿಯಿಟ್ಟ ಆ ದೇಶದ ವಿರುದ್ಧ ಜಾಗತಿಕ ಪ್ರತಿರೋಧ ವ್ಯಕ್ತವಾಗುತ್ತಿದೆ. ವಿಶ್ವಸಂಸ್ಥೆ, ಜಗತ್ತಿನ ಬಲಾಢ್ಯ ಎನಿಸಿಕೊಂಡವು ಹಾಗೂ ಸಣ್ಣ ಪುಟ್ಟವೂ ಸೇರಿದಂತೆ ಅನೇಕ ರಾಷ್ಟ್ರಗಳು ಯುದ್ಧ ಬೇಡ ಅಥವಾ ಕೈಬಿಡಿ ಎಂದು ರಷ್ಯಾದ ಮೇಲೆ ಒತ್ತಡ ಹೇರಿವೆ. ಈ ಲೇಖನ ಬರೆಯುವ ಹೊತ್ತಿಗೆ ಎಲ್ಲಾ ಶಾಂತಿ ಸ್ಥಾಪಿಸುವ ಪ್ರಯತ್ನಗಳು ವಿಫಲಗೊಂಡಿವೆ. ನಾವೂ ಹಾಗೂ ಇಂದಿನ ಯುವಜನರು ಶಾಲಾ ಪಠ್ಯಗಳಲ್ಲಿ ಚರಿತ್ರೆಯ ಪುಟಗಳಲ್ಲಿ ಮಾತ್ರ ಯುದ್ಧದ ಭೀಕರತೆಯನ್ನು ಓದುತ್ತಾ ಕಣ್ಮುಂದೆ ಕಲ್ಪಿಸಿಕೊಳ್ಳುತ್ತಿದ್ದ ಕಾಲ ಈಗ ಇಲ್ಲ. ದೇಶವೊಂದರ ಒಳಗೆ ಆಂತರಿಕವಾಗಿ ನಡೆಯುವ ಸಾಮಾನ್ಯ ಸಂಘರ್ಷಗಳೂ ಈಗ ಯುದ್ಧದ ಸ್ವರೂಪ ಪಡೆದುಕೊಳ್ಳುತ್ತವೆ. ಆ ಮೂಲಕ ಆಂತರಿಕ ಹಾಗೂ ಬಾಹ್ಯವಾಗಿ ಶಾಂತಿ ಕದಡಿಹೋಗುತ್ತದೆ. ಜಗತ್ತು ಹಿಂಸೆಯಿಂದ ನಲುಗಿ ಶಾಂತಿ ಮರೀಚಿಕೆಯಾಗುತ್ತದೆ.

ಮುಂದುವರಿಯುವುದು..

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ರೈಂಡ್ ಮತ್ತು ಅವನ ಸೈನಿಕರು ಪ್ಲೇಗ್ ಪಿಡುಗಿನ ವಿರುದ್ಧ ಹೋರಾಟದ ಹೆಸರಿನಲ್ಲಿ ಮುಗ್ಧ ಜನತೆಯ ಮೇಲೆ ಎಸಗುತ್ತಿದ್ದ ದೌರ್ಜನ್ಯವನ್ನು ಟಿಳಕರು ಉಗ್ರವಾಗಿ ಪತ್ರಿಕೆ 'ಕೇಸರಿ'ಯಲ್ಲಿ ಟೀಕಿಸಿದರು. ಜನತೆಯ ನಿಯೋಗವೊಂದನ್ನು ರೈಂಡನಲ್ಲಿಗೆ ಒಯ್ದರು. ನಿಯೋಗವನ್ನೇನೋ ರೈಂಡ – ಸೌಜನ್ಯದಿಂದ ಬರಮಾಡಿಕೊಂಡ. ಆದರೆ ತನ್ನ ಧೋರಣೆಯನ್ನು ಮಾತ್ರ ಬದಲಿಸಲಿಲ್ಲ. ಟಿಳಕರು 'ಕೇಸರಿ'ಯಲ್ಲಿ ಸರ್ಕಾರವನ್ನು ಹೀಗೆ ಎಚ್ಚರಿಸಿದರು. "ಇಂತಹ ಹುಚ್ಚು ಹಿಂಸೆಯನ್ನು ಭೂಮಿಯ ಮೇಲಿನ ಯಾವುದೇ ಜನತೆ ತಡೆದುಕೊಳ್ಳಲಾರದು". ಭಾರತೀಯರನ್ನು ಗೌರವದಿಂದ ಕಾಣಬೇಕೆಂದು ಅವರು ಪ್ಲೇಗ್ ಸಮಿತಿಗೆ ವಿನಂತಿಸಿದರು. 1897ರ ಮೇ ಸಂಚಿಕೆಯಲ್ಲಿ ರೈಂಡ್ ಆಡಳಿತ ನಡೆಸಿದ ದೌರ್ಜನ್ಯಗಳನ್ನು ಕುರಿತು 'ಕೇಸರಿ' ಲೇಖನ ಪ್ರಕಟಿಸಿತು. ಮುಂಬೈ ಸರ್ಕಾರ ಜಾಗರೂಕವಾಗಿರಬೇಕು ಎಂಬುದು ಟಿಳಕರ ವಾದವಾಗಿತ್ತು. ಹಿಂದೂ ಆಸ್ಪತ್ರೆ ಪ್ರಾರಂಭಿಸಿದ್ದು ಟಿಳಕರ ಒಂದು ಮಹತ್ಸಾಧನೆ. ಸಾರ್ವಜನಿಕ ವ್ಯಕ್ತಿಗಳಂತೆ ಪಲಾಯನ ಹೇಳದೆ, ಸಾಂಕ್ರಾಮಿಕ ಪಿಡುಗಿನ ಮಧ್ಯೆ ತಮ್ಮ ಜೀವನವನ್ನೇ ಪಣವಾಗಿಟ್ಟು ಅವರು ದುಡಿದರು. ದಿನಕ್ಕೆರಡು ಬಾರಿ ಪ್ಲೇಗ್ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳನ್ನು ವಿಚಾರಿಸಿಕೊಳ್ಳುತ್ತಿದ್ದರು. ಪ್ಲೇಗಿಗೆ ಸಂಬಂಧಿಸಿದಂತೆ ಪ್ರತ್ಯೇಕ ಶಿಬಿರ ನಿರ್ಮಿಸಿ, ಅಲ್ಲಿ ಜನರಿಗೆ ಅಡಿಗೆ ಮಾಡಿಕೊಳ್ಳುವುದು, ಮತ್ತು ಎರಡು ಆಣೆಗೆ ಒಂದು ಊಟ ದೊರೆಯುವ ವ್ಯವಸ್ಥೆ ಮಾಡಿದರು. ಸಾಂಕ್ರಾಮಿಕ ಪಿಡುಗು ಮುಗಿದ ಬಳಿಕವೇ ಅವರು ಸ್ವಲ್ಪಕಾಲ ಸಿಂಹಘಡದಲ್ಲಿ ವಿಶ್ರಾಂತಿ ಪಡೆದದ್ದು.

ರೈಂಡನ ಆಡಳಿತ ನಡೆಸುತ್ತಿದ್ದ ದೌರ್ಜನ್ಯವನ್ನು ಸಹಿಸದ ಪುಣೆಯ ತರುಣರ ಗುಂಪು ಗುಪ್ತವಾಗಿ ಸಿದ್ಧತೆಯಲ್ಲಿ ತೊಡಗಿದರು. ರಾಣಿ ವಿಕ್ಟೋರಿಯಾ ಪಟ್ಟವೇರಿದ್ದರ ವಜ್ರ ಮಹೋತ್ಸವದ ಸಂದರ್ಭದಲ್ಲಿ ಅತಿಥಿ ಗೃಹದಿಂದ ರಾತ್ರಿ ಊಟ ಮುಗಿಸಿ ರೈಂಡ್ ಮತ್ತು ಅವನ ಲೆಫ್ಟಿನೆಂಟ್ ಆಯರಸ್ಟ್ ಬರುತ್ತಿದ್ದಾಗ ಅವರನ್ನು ಗುಂಡಿಟ್ಟು ಕೊಲ್ಲಲಾಯಿತು. ಗಾಡಿಯಲ್ಲಿ ಶ್ರೀಮತಿ ರೈಂಡ್ ಕೂಡ ಇದ್ದರು. ಅವರು ಕಿರುಚಿಕೊಂಡರು. ಆದರೆ ಕೊಲೆಗಾರರು ಮಧ್ಯರಾತ್ರಿ ಪಲಾಯನ ಮಾಡಿದ್ದರು. ರೈಂಡನ ಕೊಲೆ ಸುದ್ದಿ ಕಾಡಿಚ್ಚಿನಂತೆ ಹರಡಿತು. ಗೂಢಚಾರರು ನಗರಕ್ಕೆ ಆಗಮಿಸಿದರು. ಟಿಳಕರ ಪ್ರತಿಕ್ರಿಯೆ ಅರಿಯುವುದೇ ಅವರ ಉದ್ದೇಶವಾಗಿತ್ತು. ಒಬ್ಬ ಗೂಢಚಾರಿ ಅವರ ಮನೆಗೆ ತೆರಳಿ ಕೊಲೆಯ ಸುದ್ದಿ ನೀಡಿದ. ರೈಂಡನ ಹತ್ಯೆಯಲ್ಲಿ ಟಿಳಕರ ಕೈವಾಡವಿದೆ ಎಂಬುದನ್ನು ಸಿದ್ಧಪಡಿಸುವುದು ಸರ್ಕಾರಿ ಅಧಿಕಾರಿಗಳ ಪಿತೂರಿಯಾಗಿತ್ತು. ತಾವು ರಾತ್ರಿ ಅತಿಥಿಗೃಹಕ್ಕೆ ಭೋಜನಕ್ಕೆ ತೆರಳಿದ್ದಾಗಿಯೂ ಆದರೆ ಅಲ್ಲೇನೂ ನಡೆಯಲಿಲ್ಲವೆಂದು ಟಿಳಕರು ತಿಳಿಸಿದರು. 'ಕೇಸರಿ'ಯಲ್ಲಿ ರೈಂಡ್ ಆಡಳಿತದ ವಿರುದ್ಧ ಪ್ರಕಟವಾದ ಹಲವು ಲೇಖನಗಳು ಅವನ ಕೊಲೆಗೆ ಪ್ರಚೋದನೆ ನೀಡಿದವೆಂದು ಸರ್ಕಾರ ಭಾವಿಸಿತು.



ಕೆಲ ದಿನಗಳ ಬಳಿಕ ಕೊಲೆಯ ಆಪಾದನೆಯ ಮೇಲೆ ದಾಮೋದರ ಚಾಪೇಕರ ಎಂಬುವನನ್ನು ಬಂಧಿಸಿ ಗಲ್ಲು ಶಿಕ್ಷೆ ವಿಧಿಸಲಾಯಿತು. ಟಿಳಕರನ್ನು ಸರ್ಕಾರ ಸಂಶಯದ ದೃಷ್ಟಿಯಿಂದ ನೋಡಲಾರಂಭಿಸಿತು. ಸುಧಾರಣಾವಾದಿಗಳು ಸಾರ್ವಜನಿಕ ಸಭೆ ನಡೆಸಿ ರೈಂಡನ ಕೊಲೆ ಖಂಡಿಸಿದರು. ಟಿಳಕರು ರೈಂಡನ ಕೊಲೆ ಖಂಡಿಸಿದರಾದರೂ ಸಭೆಯಲ್ಲಿ ಪಾಲ್ಗೊಳ್ಳಲಿಲ್ಲ. ಇದೇ ವೇಳೆಯಲ್ಲಿ ಲಂಡನ್ನಿನಲ್ಲಿದ್ದ ಪ್ರೊ. ಗೋಪಾಲಕೃಷ್ಣ ಗೋಖಲೆ ಸಂದರ್ಶನವೊಂದರಲ್ಲಿ ಕೊಲೆಗೆ ಬ್ರಿಟಿಷ್ ಸೈನಿಕರ ದೌರ್ಜನ್ಯವೇ ಕಾರಣ ಎಂದು ನುಡಿದರು. ಗೋಖಲೆಯವರ ಈ ಹೇಳಿಕೆ ಬ್ರಿಟನ್ನಿನಾದ್ಯಂತ ಕುತೂಹಲ ಕೆರಳಿಸಿತು. ರೈಂಡ್ ಕೊಲೆಯ ಬಳಿಕ ಮುಂಬೈ ಸರ್ಕಾರ ಸೇಡಿನ ಮನೋಭಾವ ತಳೆಯಿತು. ಪ್ಲೇಗು ಸಂದರ್ಭದಲ್ಲಿ ಜನ ಅನುಭವಿಸಿದ ದೌರ್ಜನ್ಯಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ಟಿಳಕರು ಜನರಲ್ಲಿ ಮನವಿ ಮಾಡಿಕೊಂಡರು. 'ಕೇಸರಿ'ಯಲ್ಲಿ ಪ್ರಕಟವಾದ ಎರಡು ಲೇಖನಗಳೂ ಸರ್ಕಾರವನ್ನು ಕೆರಳಿಸಿತು. 'ಸರ್ಕಾರ ತನ್ನ ತಲೆ ಕಳೆದುಕೊಂಡಿದೆಯೇ? 'ಆಡಳಿತ ನಡೆಸುವುದು ಸೇಡುತೀರಿಸಿಕೊಳ್ಳಲು ಅಲ್ಲ' ಎಂಬುದೇ ಆ ಲೇಖನಗಳ ಶೀರ್ಷಿಕೆಗಳಾಗಿದ್ದುವು. ಟಿಳಕರು ಲೇಖನದಲ್ಲಿ ಬಳಸಿದ ಉಗ್ರಭಾಷೆಯಿಂದ ಅವರು ತೊಂದರೆಗೆ ಸಿಲುಕಿಕೊಳ್ಳಬಹುದೆಂದು ಅವರ ಅನೇಕ ಸ್ನೇಹಿತರು ಎಚ್ಚರಿಕೆ ನೀಡಿದ್ದುಂಟು. ಅದಕ್ಕೆ ಟಿಳಕರು ನೀಡಿದ ಉತ್ತರವಿದು "ನಾನು ಉಪಯೋಗಿಸುತ್ತಿರುವುದು ಕುಟುವಾದ ಭಾಷೆ. ಆದರೆ ಜನರಿಗೆ ಆದ ಅನ್ಯಾಯಗಳನ್ನು ನೆನೆದಾಗ ನನ್ನ ಹೃದಯ ಕುದಿಯುತ್ತಿದೆ. ಅದನ್ನು ಅಭಿವ್ಯಕ್ತಿಸುವಾಗ ಶಬ್ದಗಳು ನಿರರ್ಗಳವಾಗಿ ಬರುತ್ತವೆ. ಸರ್ಕಾರದ ಕ್ರಮಗಳನ್ನು ಟೀಕಿಸುವಾಗ ನಾನು ಕಾನೂನಿನ ಚೌಕಟ್ಟಿನಲ್ಲಿಯೇ ಇರುವೆನೆಂಬುದರ ಅರಿವು ನನಗಿದೆ" ಎಂದರು.

ಮುಂದುವರಿಯುವುದು....



ಅಕ್ಷರದವ್ವ : ಸಾವಿತ್ರಿಬಾ ಫುಲೆ

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

1868ರಲ್ಲಿ ಸಾವಿತ್ರಿ ಬಾಗೆ ಆರೋಗ್ಯ ಸರಿಯಿಲ್ಲದಾಗ ತಾಯಿಯ ಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳೋಣವೆಂದು ಪುಣೆಯಿಂದ ಖಂಡಾಲಾ ಪ್ರದೇಶದ ನಯಗಾಂವ್‌ಗೆ ಹೋದಳು. ಆ ಗ್ರಾಮದಲ್ಲಿ ಗಣೇಶ್ ಎಂಬ ಬ್ರಾಹ್ಮಣ ಯುವಕ ಶಾರದಾ ಎಂಬ ಮಹರ್ ಜಾತಿಯ ಹೆಣ್ಣು ಮಗಳನ್ನು ಪ್ರೀತಿಸಿದ. ಇದು ಧರ್ಮವಿರುದ್ಧವಾದ ಕೆಲಸವೆಂದೇ ಸಂಪ್ರದಾಯವಾದಿಗಳ ನಿರ್ಧಾರ. ಎಷ್ಟೋ ಮಂದಿ ಮೇಲ್ಜಾತಿಯವರು ದಲಿತ ಯುವತಿಯರೊಂದಿಗೆ ಮರೆಯಲ್ಲಿ ಲೈಂಗಿಕ ಸಂಬಂಧಗಳನ್ನು ಇಟ್ಟುಕೊಳ್ಳುವರೇ ಹೊರತು ಎರಡು ಜಾತಿಗಳ ನಡುವೆ ಪ್ರೀತಿಪೂರ್ವಕ ಸಂಬಂಧಗಳು ಬೆಸೆಯುವುದನ್ನು ಸಹಿಸರು. ಅದರಿಂದ ಗ್ರಾಮದಲ್ಲಿ ಗಲಭೆ ಹುಟ್ಟಿತು. ಜಾತಿ ಹಿರಿಯರೆಲ್ಲರೂ ಕೋಪಗೊಂಡು ಆ ಪ್ರೇಮಿಗಳನ್ನು ಕೊಂದು ಹಾಕಿದರೆ ಮಾತ್ರ ಇನ್ನು ಮುಂದೆ ಇಂತಹ ವಿಪರೀತಗಳು ತಲೆಯೆತ್ತದಂತೆ ಇರುತ್ತದೆಂದು ನಿರ್ಧರಿಸಿದರು. ಕೊಲೆಗೆ ಯೋಜನೆ ಸಿದ್ಧಮಾಡಿದ್ದರು. ಅವರಿಬ್ಬರನ್ನು ಕೊಲ್ಲುತ್ತಾರೆಂಬ ಸಂಗತಿ ಸಾವಿತ್ರಿ ಅವರ ಕಿವಿಗೆ ಬಿದ್ದ ಕೂಡಲೆ ಅಲ್ಲಿಗೆ ಓಡಿದ್ದರು. ಅವರನ್ನು ಕೊಂದರೆ ಬ್ರಿಟಿಷ್ ಸರ್ಕಾರದ ಶಿಕ್ಷೆಗೆ ತುತ್ತಾಗುತ್ತೀರೆಂದು ಎಚ್ಚರಿಸಿದರು. ಅದರಿಂದಾಗಿ ಅವರು ಕೊಲೆ ಪ್ರಯತ್ನವನ್ನು ಕೈಬಿಟ್ಟರು. ಅಬರಿಬ್ಬರು ಗ್ರಾಮವನ್ನು ತೊರೆಯಲು ಸಾಧೂ ಭಾವು ಆದೇಶಿಸಿದ. ಆ ಜೋಡಿಗಳು ಅಂಗೀಕರಿಸಿದರು. "ನಾನು ಅಲ್ಲಿಗೆ ಹೋಗದಿದ್ದರೆ ತಮ್ಮ ಪ್ರಾಣ ಉಳಿಯುತ್ತಿರಲಿಲ್ಲವೆಂದು ಅವರು ನನ್ನ ಕಾಲಿಗೆ ಬಿದ್ದು ಕಣ್ಣೀರು ಹಾಕಿದರು. ಅವರನ್ನು ಸಂತೈಸಿ ಧೈರ್ಯ ಹೇಳಿದೆ. ಅವರಿಬ್ಬರನ್ನು ಈಗಲೇ ನಿಮ್ಮ ಬಳಿಗೆ ಕಳುಹಿಸುತ್ತಿದ್ದೇನೆ." ಎಂದು ಜ್ಯೋತಿಬಾ ಅವರಿಗೆ ಪತ್ರ ಬರೆದು ತಿಳಿಸಿದ್ದರು.

ಇಷ್ಟರಲ್ಲಾಗಲೇ ಫುಲೆ ದಂಪತಿಗಳ ಕ್ರಾಂತಿಕಾರಿ ಹೆಜ್ಜೆಗಳು ಜನಪ್ರಿಯತೆ ಗಳಿಸಿದ್ದವು. 1851ರಲ್ಲಿ ಮುಸ್ಲಿಂರೊಬ್ಬರಿಗೆ ಸೇರಿದ ಕಟ್ಟಡವೊದರಲ್ಲಿ ಶಾಲೆಯನ್ನು ಬದಲಾಯಿಸುತ್ತಾರೆ. ಮೋರೋ ವಿಠಲ್ ವಾಲ್ವೇಕರ್ ಮತ್ತು ದೀರೋ ಘೋಸರ್ ಅವರು ಈ ಶಾಲೆಯನ್ನು ನಡೆಸಲು ಆಡಳಿತಾತ್ಮಕವಾಗಿ ಸಹಾಯ ಮಾಡುತ್ತಾರೆ. ಪುಣೆಯ ಶಿಕ್ಷಣತಜ್ಞ ಮೇಜರ್ ಕ್ಯಾಂಡಿ ಪುಸ್ತಕಗಳನ್ನು ದಾನವಾಗಿ ಕೊಡುತ್ತಾರೆ. ಫುಲೆ ದಂಪತಿಗಳು ಸಂಬಳವಿಲ್ಲದೇ ಕೆಲಸ ಮಾಡುತ್ತಾರೆ. ಈ ಶಾಲೆಯ ವಾರ್ಷಿಕ ರಿಪೋರ್ಟ್‌ನಲ್ಲಿ "ನಮ್ಮ ಶಾಲೆಯ ಹಣಕಾಸಿನ ಈಗಿನ ಸುಧಾರಿತ ಪರಿಸ್ಥಿತಿಯಲ್ಲಿ ಶಿಕ್ಷಕಿಯರಿಗೆ ಸಣ್ಣ ಪ್ರಮಾಣದಲ್ಲಿ ಸಂಬಳವನ್ನು ಕೊಡಲು ನಿರ್ಧರಿಸಿದೆ. ಸಾವಿತ್ರಿಬಾಯಿ ಫುಲೆಯವರು ಸಂಬಳವನ್ನು ಸ್ವೀಕರಿಸದೆಯೇ ಬಾಲಕಿಯರ ಶಿಕ್ಷಣಕ್ಕಾಗಿ ದುಡಿಯುತ್ತಿದ್ದಾರೆ. ಅವರು ಇದರ ಆಧಾರಸ್ತಂಭ, ಮುಂದೊಂದು ದಿನ ಈ ದೇಶದ ಜನತೆ ಬಾಲಕಿಯರ ಶಿಕ್ಷಣದ ಮಹತ್ವವನ್ನು ಅರಿತುಕೊಳ್ಳುತ್ತಾರೆ ಎನ್ನುವ ವಿಶ್ವಾಸ ನಮಗಿದೆ" ಎಂದು ನಮೂದಿಸಲಾಗಿದೆ. 1852, ನವೆಂಬರ್ 16ರಂದು ಶಿಕ್ಷಣ ಇಲಾಖೆಯು ಫುಲೆ ದಂಪತಿಗಳಿಗೆ ಸಾರ್ವಜನಿಕವಾಗಿ ಸನ್ಮಾನಿಸುತ್ತದೆ. ತಮ್ಮ ಭಾಷಣದಲ್ಲಿ ಫುಲೆ ಅವರು 'ತಾವಿಬ್ಬರೂ ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸಿರುವುದಾಗಿ' ಹೇಳುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯು ದಿನಾಂಕ 12, ಫೆಬ್ರವರಿ 1853ರಂದು ಈ ಬಾಲಕಿಯರ ಶಾಲೆಯ ಲೆಕ್ಕ ಪರಿಶೋಧನೆ ಮಾಡಿ, ನೀಡಿದ ವರದಿಯ ಸಾರಾಂಶ ಹೀಗಿದೆ "ಬಾಲಕಿಯರ ಶಿಕ್ಷಣದ ಕುರಿತಾದ ಪೂರ್ವಗ್ರಹಪೀಡಿತ ಅಭಿಪ್ರಾಯ ಇಂದು ನಿಧಾನವಾಗಿ ಕಣ್ಮರೆಯಾಗುತ್ತಿದೆ. ಈ ಶಾಲೆಯ ಶಿಕ್ಷಕಿಯರ ಸಮರ್ಪಣಾ ಮನೋಭಾವ, ಕೆಲಸಗಾರರ ವೃತ್ತಿಪರತೆ ಮತ್ತು ಪೋಷಕರ ಸಹಕಾರದಿಂದಾಗಿ ಈ ಬಾಲಕಿಯರ ಶಾಲೆ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿಯರ ನಡುವಿನ ಸೌಹಾರ್ದಯುತ ಸಂಬಂಧ ಇತರರಿಗೂ ಮಾದರಿ" ಎಂದಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯುವುದಕ್ಕೆ ಎಷ್ಟೋ ಬೈಗುಳವನ್ನು, ಅವಮಾನವನ್ನು, ದಾಳಿಯನ್ನು ಎದುರಿಸಬೇಕಾಗಿ ಬಂದರೂ ಹಿಂಜರಿಯದೆ ಸಾವಿತ್ರಿ ಬಾಯಿ ಈ ಹೋರಾಟಗಳನ್ನು ನಡೆಸಿದ್ದಾಳೆ. ಮಹಾರಾಷ್ಟ್ರಕ್ಕೆ ಸೇರಿದ ಮಹಿಳಾ ಚಳವಳಿಯ ನಾಯಕಿಯರು ಡಾ. ಅನಂತಬಾಯಿ, ಗೋಪಾಲ ಜೋಶಿ, ಪಂಡಿತ ರಮಾಬಾಯಿ, ತಾರಾಬಯಿ ಶಿಂದೆ, ರಮಾಬಾಯಿ ರಾನಡೆಯಂತಹ ಹಲವು ಮಂದಿ ಸಾವಿತ್ರಿಬಾಯಿಯಿಂದ ಸ್ಫೂರ್ತಿ ಪಡೆದವರಾಗಿದ್ದಾರೆ.



ಮುಂದುವರಿಯುವುದು...

HOW INDEPENDENT INDIA'S FIRST WOMAN PILOT RESCUED INDIANS DURING PARTITION



Usha Sundaram was the first woman pilot of Independent India, and while only in her twenties, facilitated several important events and missions that leaders of the freedom struggle embarked upon. In the late 1940s, when Sardar Patel was traveling across the country in his historical effort to unify post-Independence India, Usha Sundaram was often one of the pilots for his flights. At a time when Indian women planes were still a rarity, Usha took to the skies at a young age soon after she married V Sundaram in July 1941, becoming the first graduate of the flying club at Bengaluru's Jakkur. Sundaram was an accomplished pilot and an instructor at the Madras Flying Club. He and Usha became the pilots of the Maharaja of Mysore's personal plane, a Dakota DC-3, that was utilized by dignitaries like Pandit Nehru, Sardar Patel and Dr Rajendra Prasad to fly to different corners of India. In 1947, during the Partition, Usha also daringly flew into Pakistan on a few occasions to rescue people stranded due to widespread violence and brought them back safely to Indian soil on her plane. In 1951, Usha and Sundaram flew from London to Bombay in 27 hours to set a world record. The record still stands. ***Couracy : The Better India...***

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು

ಡಾ. ಗಣನಾಥಶೆಟ್ಟಿ ಎಕ್ಕಾರು

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

ಭಾಗೀರಥಿಬಾಯಿ ಹನುಮಂತ ಪುರಾಣಿಕ

ಸರಕಾರದ ಬಗ್ಗೆ ಭೀತಿ ಹುಟ್ಟಿಸಲು ಊರಲ್ಲಿಯ ಸಾಧು ಸ್ವಭಾವದ ಜನರ ಮನೆ ಜಪ್ತಿಮಾಡಿ ಕರನಿರಾಕರಣೆಗಾಗಿ ಅವರನ್ನು ಬಂಧಿಸಿದರೆ ತಮಗೆ ಪ್ರತಿರೋಧ ಕಡಿಮೆ ಎಂದು ಅಧಿಕಾರಿಗಳು ಭಾವಿಸಿದರು. ಶ್ರೀ ಹನುಮಂತ ಪುರಾಣಿಕರನ್ನು 28 ಫೆಬ್ರುವರಿ 1932 ರಂದುಬಂಧಿಸಲು ವಾರಂಟ ತಂದಿದ್ದರು. ಅಂದು ಸಂಜೆ ಉಗ್ರಾಣಿಯೊಡನೆ ಶಾನುಭೋಗರು ಪುರಾಣಿಕರ ಮನೆಗೆ ಹೋಗಿ, ತೀರ್ವ ಬಾಕಿ ಒಂದು ರೂಪಾಯಿ ಏಳು ಆಣೆ ಕೂಡಲೆ ಪಾವತಿಸದಿದ್ದರೆ ಅರೆಸ್ಟಮಾಡಿ ಮನೆ ಜಪ್ತಿ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. "ನಾನು ಕರಬಂದಿ ಪ್ರತಿಜ್ಞೆಗೆ ಸಹಿ ಹಾಕಿದ್ದೇನೆ. ದರೋಡೆಕೋರ ಸರಕಾರಕ್ಕೆ ಒಂದು ಬಿಡಿಕಾಸು ಕೊಡೋದಿಲ್ಲ. ನಾನು ಈಗಲೇ ಜೈಲಿಗೆ ಹೊರಟೆ" ಎನ್ನುತ್ತ ಮನೆಯಿಂದ ಹೊರಬಂದರು. ಪೋಲೀಸರು ಅವರನ್ನು ಬಂಧಿಸಿ, ಸಿದ್ದಾಪುರಕ್ಕೆ ಕರೆದೊಯ್ದರು.

ಮಕ್ಕಳಿಗೆ ಜ್ವರ ಬಂದರೆ ಔಷಧಿ ಕೊಡುವುದು, ವಿಭೂತಿ ಕೊಡುವುದು, ಯಂತ್ರ ಮಂತ್ರಿಸಿ ಕೊಡುವುದು ಪುರಾಣಿಕರ ಕಾಯಕವಾಗಿತ್ತು. ಅವರು ಜೈಲು ಸೇರಿದ ಸಂಗತಿ ಹಲವು ಅಜ್ಜಿಯರಿಗೆ, ತಾಯಂದಿರಿಗೆ ಆಘಾತ ತಂದಿತು. ಪುರಾಣಿಕರ ಪತ್ನಿಗೆ ಸಾಂತ್ವನ ಹೇಳಲು ಮಹಿಳೆಯರು ಮರುದಿನ ಪುರಾಣಿಕರ ಮನೆಗೆ ಬಂದಿದ್ದರು. ಜಿಲ್ಲಾಧಿಕಾರಿ ಮಿಸ್ಟರ್ ಕ್ಲೀ ಅವರು ಸಿದ್ದಾಪುರದಲ್ಲಿ ವಾಸ್ತವದಲ್ಲಿರುವುದು ತಿಳಿದು ಇಪ್ಪತ್ತಕ್ಕು ಹೆಚ್ಚು ಹೆಂಗಳೆಯರು 8 ಮೈಲು ನಡೆದು ಕ್ಲೀ ಅವರು ವಾಸ್ತವವಿದ್ದ ಸ್ಥಳಕ್ಕೆ ಬಂದು ಅವರೊಡನೆ ಜಗಳ ಕಾಯ್ದರು. ಜಿಲ್ಲಾಧಿಕಾರಿಗಳು ಶಾನುಭೋಗರನ್ನು ಫೌಜದಾರರನ್ನು ಬೈದರು. ಆದರೆ ತೀರ್ವ ವಸೂಲಿ ಕ್ರಮ ಕೈ ಬಿಡಲಾಗದು ಎಂದರು. ಜನಹಿತಕ್ಕೆ ಆಗದ ಈ ಸರಕಾರ, ಈ ಅಧಿಕಾರಿಗಳು ಸರ್ವನಾಶವಾಗಲಿ ಎಂದು ಶಾಪ ಹಾಕಿ ಮಹಿಳೆಯರು ಬಿಳಗಿಗೆ ಹೊರಳಿದರು. ಇತ್ತ ಬಿಳಗಿಯಲ್ಲಿ ಪುರಾಣಿಕರ ಪತ್ನಿ ಭಾಗೀರಥಿಬಾಯಿ ಅವರ ಪ್ರತಿರೋಧವನ್ನು ಲಕ್ಷಿಸದೇ ಪುರಾಣಿಕರ ಮನೆಯಲ್ಲಿ ಜಪ್ತಿ ನಡೆಯಿತು.

ಕೇವಲ ಒಂದು ರೂಪಾಯಿ ಏಳು ಆಣೆ ಕರಬಾಕಿಗಾಗಿ ಒಂದು ಚಿಲ ಭತ್ತ, ಹಾಲು ಹಿಂಡುವ ಒಂದು ಆಕಳು ಹಾಗೂ ದೇವರ ಎದುರಿನ ಕಂಚಿನ ದೀಪ ಜಪ್ತಿ ಮಾಡಿ ಒಯ್ದರು. ತೀವ್ರ ರೋಷಗೊಂಡ ಭಾಗೀರಥಿಬಾಯಿ ಅವರು ಹಿರಿಯ ಮಗಳನ್ನು ಕರೆದುಕೊಂಡು ಉರಿಬಿಸಿಲಿನಲ್ಲಿ 8 ಮೈಲು ನಡೆದು ಜಿಲ್ಲಾಧಿಕಾರಿ ಮಿಸ್ಟರ್ ಕ್ಲೀ ಅವರ ವಾಸ್ತವ್ಯವಿದ್ದ ಸ್ಥಳಕ್ಕೆ ತಲುಪಿದರು.

ಮಹಿಳೆಯೊಬ್ಬಳ ಕಿರುಚಾಟ ಕೇಳಿ ಮಿಸ್ಟರ್ ಕ್ಲೀ ಕೋಣೆಯಿಂದ ಹೊರಬಂದರು. ಗರ್ಭಿಣಿ ಮಹಿಳೆ ಮತ್ತು ಹೆಣ್ಣುಮಮಗಳೊಬ್ಬಳನ್ನು ಪೋಲಿಸರು ಲಾಠಿಯಿಂದ ದೂಡುತ್ತಿರುವುದು ಕಂಡರು. "ಅವರನ್ನು ಇತ್ತ ಬಿಡಿ" ಎಂದರು. "ನೀವು ನಮ್ಮ ಗಂಡಸರನ್ನು ಜೈಲಿಗೆ ಕಳಿಸಿದಿರಿ. ಹಾಲು ಕೊಡುವ ಹಸು ಒಯ್ದು ಕರುವನ್ನು ಅನಾಥ ಗೊಳಿಸಿದ್ದೀರಿ. ಬೂಟು ಕಾಲಿನಿಂದ ದೇವರ ಮನೆ ಅಪವಿತ್ರಗೊಳಿಸಿ ದೇವರ ಎದುರಿನ ದೀಪ ಒಯ್ದಿದ್ದೀರಿ. ಊಟಕ್ಕೆಂದು ಇಟ್ಟ ತಾಟನ್ನು ಒಯ್ದು ನಮ್ಮನ್ನು ಉಪವಾಸ ಕೆಡವಿದ್ದೀರಿ" ಎಂದು ಒಂದೇ ಉಸಿರಿನಲ್ಲಿ ಹೇಳುತ್ತ ಕೈ ತಿರುವುತ್ತ ಬಳೆ ಏರಿಸಿ ಕೊಳ್ಳುತ್ತಿದ್ದ ಭಾಗೀರಥಿ ಬಾಯಿ ಅವರ ವೀರಾವೇಷ ಕಂಡು ಜಿಲ್ಲಾಧಿಕಾರಿಗಳು ದಂಗಾದರು. "ತೀರ್ವ ಕೊಡದಿದ್ದರೆ ಹಾಗೆಯೇ" ಎಂದರು ಸಮೀಪದಲ್ಲಿದ್ದ ಪ್ರಾಂತ ಸಾಹೇಬರು. ಆಹ್ಹಾಹ್ಹಾ ನಿಮಗೆ ತೀರ್ವ ಕೊಡಬೇಕೆ? ನಮ್ಮ ಕಷ್ಟಕಾಲಕ್ಕೆ ಸಹಾಯ ಮಾಡದ ಸರಕಾರ ಸರ್ವನಾಶವಾಗಲಿ, ಕಾಡು ಕೋಣಗಳು ನಮ್ಮ ಭತ್ತದ ಗದ್ದೆ ತುಳಿದು ಹಾಕಿವೆ. ಕೊಳೆರೋಗ ಬಂದು ಅಡಿಕೆ ಉದುರಿ ಹೋಗಿದೆ. ನೀವೇನು ಸಹಾಯ ಮಾಡಿದಿರಿ ? ಸಹಾಯ ಮಾಡದ ಸರಕಾರ ಏಕೆ ಇರಬೇಕು. "ಇಂಗ್ಲೀಷ್ ಸರಕಾರ ಸರ್ವನಾಶವಾಗಲಿ. ಈ ಕೆಟ್ಟ ಅಧಿಕಾರಿಗಳು ಬೀದಿಗೆ ಬೀಳಲಿ" ಎಂದು ಕಿರುಚಾಡಿದರು. ಏನೋ ಅನ್ಯಾಯವಾದಂತೆ ಅನಿಸುತ್ತಿದೆ. ಇನ್ನು ಮುಂದೆ ಹೀಗಾಗದಂತೆ ನಡೆದುಕೊಳ್ಳಿ ಎಂದು ಕ್ಲೀ ಅವರು ಅಧಿಕಾರಿಗಳಿಗೆ ಹೇಳಿದರು.

ಈ ಘಟನೆಯಿಂದ ಸಿರ್ಸಿ ಸಿದ್ದಾಪುರ ತಾಲೂಕಿನ ಅಧಿಕಾರಿಗಳಿಗೆ ಪರಿಸ್ಥಿತಿಯ ಬಿಸಿ ಮುಟ್ಟಿತು. ನಂತರ ಮಹಿಳೆಯರು–ಸಾಧು ಸ್ವಭಾವದ ಜನರೊಡನೆ ಅಧಿಕಾರಿಗಳ ವರ್ತನೆ ಸ್ವಲ್ಪ ವಿನಮ್ರವಾಯಿತು. ಮುಂದಿನ ದಿನಗಳಲ್ಲಿ ಭಾಗೀರಥಿಬಾಯಿ ಹಲವು ಕಡೆಯಲ್ಲಿ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡರು ಅವರನ್ನು ಬಂಧಿಸಲೇ ಇಲ್ಲ. ಅವರ ಕುರಿತು ಸರಕಾರಿ ಅಧಿಕಾರಿಗಳಲ್ಲಿ ಅಂಜಿಕೆ ಉಂಟಾಗಿತ್ತು. ಭಾಗೀರಥಿಬಾಯಿ ಅವರು ಜೈಲುವಾಸ ಅನುಭವಿಸದ ಸ್ವಾತಂತ್ರ್ಯ ಯೋಧೆ, ಬಿಳಗಿಯ ಧೀರ ಮಹಿಳೆ, ಬ್ರಿಟಿಷ್ ಅಧಿಕಾರಿಯನ್ನು ಬೆದರಿಸಿದ ವೀರ ಮಹಿಳೆ ಎಂದಾದರು.

ಮುಂದುವರಿಯುವುದು...

ಸುಖ–ಸಂತೋಷಗಳಿಲ್ಲದೇ ಮಾಡಿದ ಸೇವೆಯು ಸೇವಕನಿಗೂ ಸೇವ್ಯನಿಗೂ ಉಪಯುಕ್ತವಿರುವದಿಲ್ಲ. ಆದರೆ ಸಂತೋಷದಿಂದ ಸಲ್ಲಿಸಿದ ಸೇವೆಯಲ್ಲಿ ಎಲ್ಲವೂ ಅಡಗಿರುತ್ತದೆ, ಉಪಯುಕ್ತವೆನಿಸುತ್ತದೆ. ಅದರೆದುರು ಸ್ಥಾನಮಾನಗಳು, ಸುಖವು ಮಹತ್ವದ್ದೆನಿಸುವುದಿಲ್ಲ.

– ಮಹಾತ್ಮ ಗಾಂಧಿ

ಭಗತ್‌ಸಿಂಗನ ಕೊನೆಯ ಪತ್ರ

– ವೇಮಗಲ್ ಸೋಮಶೇಖರ್.

ರಾಷ್ಟ್ರದ ಸ್ವಾತಂತ್ರ್ಯ ಸಾಧಿಸಲು ಹಿಂಸಾಮಾರ್ಗವಾದರೂ ಸರಿ ಎಂದು ಕ್ರಾಂತಿಯನ್ನೆಬ್ಬಿಸಿದ ತರುಣರಲ್ಲಿ ಭಗತ್‌ಸಿಂಗನೂ ಒಬ್ಬನಾಗಿದ್ದಾನೆ. (1907–31). ಈತ ಆಗಿನ ನ್ಯಾಯವಿಧಾಯಕ ಸಭೆಗೆ ಬಾಂಬ್ ಇಟ್ಟ ಆರೋಪಕ್ಕೊಳಗಾಗಿ ಬ್ರಿಟಿಷ್ ಸರ್ಕಾರ 1931ರ ಮಾರ್ಚ್ 23 ರಂದು ಲಾಹೋರ್‌ನ ಸೆಂಟ್ರಲ್ ಜೈಲ್‌ನಲ್ಲಿ ಗಲ್ಲಿಗೇರಿಸಿದರು. (ಜೊತೆಯಲ್ಲಿ ಸುಖದೇವ್ ಮತ್ತು ರಾಜ್‌ಗುರು ಅವರನ್ನೂ ಸಹ ಗಲ್ಲಿಗೇರಿಸಿದರು.) ಭಗತ್‌ಸಿಂಗನು ಈ ಲೋಕ ಬಿಡುವ ಮೊದಲು ತನ್ನ ಕಿರಿಯ ತಮ್ಮನಾದ ಕುಲ್ತರ್‌ಸಿಂಗನಿಗೆ ಈ ಪತವೊಂದನ್ನು ಬರೆದಿದ್ದರು. ಅದು ಹೀಗಿತ್ತು.

ತಮ್ಮಾ!

ನೀನು ಕಣ್ಣಲ್ಲಿ ನೀರಿಡುವುದನ್ನು ನೋಡಿದರೆ ನನ್ನದೆಯು ಭಗ್ನೆನ್ನುತ್ತದೆ. ಇಂದು ನಿನ್ನ ಮಾತುಗಳು ಸಂತಾಪದ್ಯೋತಕಗಳಾಗಿವೆ. ನಾನು ತಾಳಲಾರೆ. ಮುದ್ದಮಗುವೆ! ದೃಢಚಿತ್ತನಾಗಿ ವಿದ್ಯಾರ್ಜನೆ ಮಾಡು. ದೇಹಾರೋಗ್ಯವನ್ನು ಚನ್ನಾಗಿ ನೋಡಿಕೋ. ಧೈರ್ಯಗೆಡಬೇಡ ಕಂದಾ. ನಾನು ಇನ್ನೇನು ಹೇಳಲಿ? ಇದೋ ಈ ಹಾಡು ಕೇಳು

'ವಿಧಿ ಬರಹವ ದೂಷಿಸಬೇಕೆ?
ಲೊಕವೈರಕೆ ಭಯವೇಕೆ?
ವ್ಯಥೆಯನು ಝಾಡಿಸಿ ಎದ್ದೇಳು.
ವಿಧಿಯನು ಎದುರಿಸಿನೀ ಬಾಳು!'

ಮಿತ್ರರೇ! ನನ್ನ ಸಾವು ಸಮೀಪಿಸಿತು. ಪ್ರಭಾತದಲ್ಲಿ ಕಾಂತಿಕುಂದಿ ತಣ್ಣಗಾಗುವ ದೀಪದಂತೆ ನಾನು ಲಯವಾಗುತ್ತಲಿದ್ದೇನೆ. ಆದರೆ ನಮ್ಮ ಸಂಕಲ್ಪವು ಲೋಕವನ್ನೇ ತಿರುಗಿಸಬಲ್ಲುದು. ಈ ಹಿಡಿಮಣ್ಣು ಏನಾದರೇನು? ನನಗೆ ಅಪ್ಪಣೆ ಕೊಡಿ. ಪ್ರಿಯ ಭಾರತೀಯರೆ! ನಿಮಗೆ ಅಭ್ಯುದಯವಾಗಲಿ! ನಮ್ಮದು ದೀರ್ಘ ಪ್ರಯಾಣ. ಧೈರ್ಯವಹಿಸಿ ನಮಸ್ತೇ ನಮಸ್ತೇನಮಃ

ಭಗತ್‌ಸಿಂಗ್

ವೀರ ಮಾತಾಪಿತೃಗಳು : ಕಾಂಗ್ರೆಸ್ಸಿಗೆ ಭಗತ್‌ಸಿಂಗನ ತಂದೆ ಸರದಾರ ಕಿಶನ್‌ಸಿಂಗ್ ಮತ್ತು ರಾಜಗುರು ತಾಯಿಯೂ ಬಂದಿದ್ದರು. ಅವರಿಬ್ಬರನ್ನೂ ವೇದಿಕೆಯನ್ನೇರಿಸಿದರು. ಸಭಿಕರೆಲ್ಲಾ ಆ ವೀರಮಾತಾಪಿತೃಗಳನ್ನು ನೋಡಿ ಕಣ್ಣೀರಿಟ್ಟರು. ಕೊನೆಗೆ ಕಿಶನ್‌ಸಿಂಗನು ಅರ್ಧ ಗಂಟೆ ಮಾತನಾಡಿ ಭಗತ್‌ಸಿಂಗನ ಪರಿಚಯ ಮಾಡಿಕೊಡುತ್ತಾ ಕೊನೆಯಲ್ಲಿ ಹೀಗೆಂದನು. "ದೇಶಸೇವೆಗಾಗಿಯೇ ಭಗತ್‌ಸಿಂಗನು ಮದುವೆಯಾಗಲಿಲ್ಲ. ದೇಶಸೇವೆಗಾಗಿಯೇ ಅವನು ಕಾಲೇಜನ್ನು ಬಿಟ್ಟುಬಿಟ್ಟನು." ಅಂತಹ ತರುಣ ಮತ್ತು ಅವನ ಮಿತ್ರರನ್ನು ಶೂಲಕ್ಕೇರಿಸಿದರು. ಅವರು ಅಮರರಾದರು! ಅವರ ಸಾವಿನಿಂದ ಸಾವಿರಾರು ಮಂದಿಗೆ ಬಂಧು ನಷ್ಟದ ದುಃಖವಾಗಿದೆ. ಈ ತರುಣ ದೇಶಭಕ್ತರ ತ್ಯಾಗದ ಪರಮಾವಧಿ, ಅವರ ಚಟುವಟಿಕೆ, ಭಯಂಕರ ಧೈರ್ಯ ಅನುಕರಣ ಯೋಗ್ಯಗುಣಗಳು. ಅವರ ಗುಣಗಾನದಲ್ಲಿ ನಾನೂ ಭಾಗಿ. ಆದರೆ 'ನೀವು ಹಿಂಸಾಮಾರ್ಗ ಹಿಡಿಯಬೇಡಿ. ದೇಶದ ಬಂಧು ವಿಮೋಚನೆ ಹತ್ಯೆಗಳಿಂದಾಗಲಾರದು' ಎಂದು ಎಚ್ಚರಿಕೆ ಕೊಡುತ್ತೇನೆ. ಅರಾಜಕ ಪಕ್ಷದವರನ್ನೂ ಸಹ ಒಲಿಸಿಕೊಳ್ಳಬಹುದಾದ ಅಪೂರ್ವ ಅವಕಾಶವನ್ನು ಸರಕಾರದವರು ಕಳೆದುಕೊಂಡರು. ಆದ ಸಂಧಾನ ಫಲವಾಗಿಯಾದರೂ ಈ ವಧೆಯನ್ನು ನಿಲ್ಲಿಸಬಹುದಾಗಿತ್ತು. ಅವರ ನಡತೆಯಿಂದ ಸಂಧಾನವನ್ನು ಬಹಳ ಕಠಿಣ ಮಾಡಿದರು. ಪ್ರಜಾಭಿಪ್ರಾಯವೆಂದರೆ ಕಸಕ್ಕಿಂತ ಕಡೆಯೆಂಬುದನ್ನು ಮತ್ತೆ ತೋರಿಸಿದರು. ಅವರ ಅಪಾರ ಪಶುಬಲವನ್ನು ಪ್ರದರ್ಶಿಸಿದರು. 'ಅವರು ನಮಗಿಷ್ಟೂ ಸ್ವಾತಂತ್ರ್ಯ ಕೊಡುವುದಿಲ್ಲ' ಎಂಬುದರ ಸೂಚನೆಯಾಗಿರಬಹುದು. ಎಷ್ಟು ಬಣ್ಣದ ಮಾತುಗಳಾಡಿದರೇನು; ಮಾತು ಕೊಟ್ಟರೇನು? ಆದರೆ ರಾಷ್ಟ್ರದ ಕರ್ತವ್ಯವು ಸ್ಪಷ್ಟವಾಗಿದೆ.

– ಗಾಂಧೀಜಿ

ಇಬ್ಬರ ಮಧ್ಯೆ ಶವ

ನಾನು ಏನಾದರೂ ಹೇಳಿದರೆ ಅವರಿಗೆ ಉರಲು ಇನ್ನೂ ಭದ್ರವಾದೀತೆಂದು ಶಂಕಿಸಿದೆ. ಹೃದಯವೇದನೆಯಿಂದ ಎದೆಯೊಡೆಯುವಂತಿದ್ದರೂ ಮೌನಮುದ್ರೆ ವಹಿಸಿದೆ. ಈಗ ಎಲ್ಲಾ ಆಗಿಹೋಯಿತು. ಧೈರ್ಯ, ಸಾಹಸ, ತ್ಯಾಗ! ಅಂತಹ ನಮ್ಮ ಸೋದರರನ್ನು ಭಾರತೀಯರು ನಾವು ಉಳಿಸಿಕೊಳ್ಳಲಾರದೆ ಹೋದೆವು. ತನ್ನ ಮಕ್ಕಳನ್ನೂ ಸಹ ಭಾರತಿಯು ಇಂದು ವಧ್ಯಸ್ಥಾನದಿಂದ ರಕ್ಷಿಸಿಕೊಳ್ಳಲಾರಳು! ನಮ್ಮ ಕೈಲೇನಾದೀತು. ಅಷ್ಟೇ ಅಲ್ಲ. ಅವರ ಹೋರಾಟಕ್ಕೆ ನಾವು ಹೆಮ್ಮೆಪಡುತ್ತೇವೆ. ಇಂಗ್ಲೆಂಡ್ ನಮ್ಮೊಂದಿಗೆ ಸಂಧಾನಕ್ಕಾಗಿ ಮಾತನಾಡುವಾಗ ನಮ್ಮಿಬ್ಬರ ಮಧ್ಯೆ ಭಗತ್‌ಸಿಂಗನ ಶವವಿರುತ್ತದೆ.

– ಜವಹರಲಾಲ್ ನೆಹರು

ಬೋನಿಗೆ ಬೀಳದಿರುವುದು


ಅವರ ಆತ್ಮಗಳಿಗೆ ಜಗದೀಶನು ಶಾಶ್ವತ ಶಾಂತಿ ಸುಖವನ್ನು ಕೊಡಲಿ. ಭಾರತಿಗೆ ಶಾಂತಿ ಮಾರ್ಗದಿಂದಲೇ ಮೋಕ್ಷ ಲಭಿಸಲಿ. ಓಬಿರಾಯನ ಕಾಲ ಅಧಿಕಾರವರ್ಗದ ಚಿತ್ತವೃತ್ತಿಯು ಗೆದ್ದಿತು. ಭರತಖಂಡದ ಪ್ರಾರ್ಥನೆಯು ನಿರರ್ಥಕವಾಯಿತು. ಒಳ್ಳೆಯದು ನಮ್ಮ ಐಕಮತ್ಯಕ್ಕೆ ಭಂಗ ತರುವ ಹಂಚಿಕೆ ಮಾಡಿ ಆಳರಸರು ಬೋನು ಒಡ್ಡುತ್ತಿದ್ದಾರೆ. ನಾವು ಆ ಬೋನಿನೊಳಗೆ ಬೀಳದಂತೆ ಎಚ್ಚರವಾಗಿರುವ. ಗಾಂಧೀಜಿಯವರ ನಾಯಕತ್ವದಲ್ಲಿ ಮುಂದಕ್ಕೆ ಹೋಗುವ.

– ಜಿತೇಂದ್ರ ಮೋಹನ್ ಸೇನಗುಪ್ತ

ನನ್ನ ದುಃಖವು ಉಮ್ಮಳಿಸಿ ನನ್ನಿಂದ ಮಾತು ಹೊರಡುತ್ತಿಲ್ಲ. "ಭಗತ್‌ಸಿಂಗನು ಯಾವ ಕಾರ್ಯಕ್ಕಾಗಿ ತನ್ನ ಪ್ರಾಣದ ಬಲಿದಾನ ಮಾಡಿದನೋ ಆ ಕಾರ್ಯವನ್ನು ಅತಿ ಶೀಘ್ರವಾಗಿ ಈಡೇರಿಸಲು ಎಲ್ಲರೂ ಸಂಕಲ್ಪ ತೊಡಬೇಕಾಗಿದೆ. ಇಲ್ಲಿಯ ವಿದೇಶೀ ಪ್ರಭುತ್ವ ನೀಗಬೇಕೆಂಬುದು ಅವನ ಪ್ರಬಲ ಇಚ್ಛೆಯಾಗಿತ್ತು. ನಿಮಗೆ ಭಗತ್‌ಸಿಂಗನಲ್ಲಿ ನಿಜವಾದ ಪ್ರೇಮವಿದ್ದಲ್ಲಿ ನೀವೆಲ್ಲ, ಈ ದೇಶದಿಂದ ಬ್ರಿಟಿಷ್ ಪ್ರಭುತ್ವದ ನಿರ್ಗಮನಕ್ಕಾಗಿ ಶಾಂತಿಮಾರ್ಗದಲ್ಲಿ ಶ್ರಮಿಸಬೇಕು. ಆಗ ಮಾತ್ರ ಭಗತ್‌ಸಿಂಗನ ಆತ್ಮಕ್ಕೆ ಶಾಂತಿ ದೊರೆತೀತು."

– ಮದನಮೋಹನ ಮಾಲವೀಯ

ಕರಾಚಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಈ ಮೂವರ ವೀರಮರಣಕ್ಕಾಗಿ ಸಂತಾಪ ಸೂಚಕ ಸಭೆಯಲ್ಲಿ ನುಡಿನಮನವನ್ನು ಸಲ್ಲಿಸಿದರು.



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಯಶೋದರಮ್ಮ ದಾಸಪ್ಪ

ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದಲ್ಲಿ ಯಶೋದರಮ್ಮ ಅವರ ಹೆಸರು ಅದ್ವಿತೀಯ ಹೋರಾಟಗಾರರ ಸಾಲಿನಲ್ಲಿ ನಿಲ್ಲುತ್ತದೆ. ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷದಲ್ಲಿ ಪ್ರಸಿದ್ಧರಾಗಿದ್ದ,ಹೆಚ್.ಸಿ.ದಾಸಪ್ಪ ಅವರನ್ನೂ ವಿವಾಹಿತರಾಗಿದ್ದರು. ಯಶೋದರಮ್ಮ ಅವರು ಶಿವಪುರದಲ್ಲಿ ಸ್ಥಾಪಿಸಬೇಕೆಂದಿದ್ದ ಧ್ವಜಸ್ತಂಭವನ್ನು ಸಂರಕ್ಷಿಸುವ ಸಂದರ್ಭದಲ್ಲಿ ಬಂಧಿತರದರು. ನಂತರದಲ್ಲಿ ಭೂಗತರಾಗಿದ್ದಕೊಂಡು ಸ್ವಾತಂತ್ರ್ಯ ಹೋರಾಟದ ಕೆಲಸ ಮಾಡತೊಡಗಿದರು. ಶಿವಪುರದ ಚೌಕದಲ್ಲಿ ಧ್ವಜ ಸ್ಥಾಪಿಸುವ, ಧ್ವಜಾರೋಹಣ ಮಾಡುವ ವಿರುದ್ಧ ಮೈಸೂರು ಸರ್ಕಾರದ ನಿಷೇಧಾಜ್ಞೆ ವಿರುದ್ಧ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ಹಾಗೂ ಮೈಸೂರಿನ ಪೋಲೀಸ ಕಟ್ಟಡಕ್ಕೆ ಬ್ರಿಟಿಷ್ ಅಧಿಕಾರಿ ಹ್ಯಾಮಿಲ್ಟನ್‌ನ ಹೆಸರಿಡುವುದನ್ನು ವಿರೋಧಿಸಿ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಅವರು ಮೈಸೂರು ರಾಜ್ಯ ಕಾಂಗ್ರೆಸ್‌ನ ಕ್ರಿಯಾ ಸಮಿತಿಯ ಪ್ರಥಮ ಮಹಿಳಾ ಸದಸ್ಯ ಮತ್ತು ಪ್ರಥಮ ಅಧ್ಯಕ್ಷೆಯೂ ಆಗಿದ್ದರು. ಆಕೆಯ ಹರಿತ ಭಾಷಣ ಮತ್ತು ಲೇಖನಗಳು ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಸ್ಫೂರ್ತಿ ನೀಡುತ್ತಿತ್ತು. ಮಹಾತ್ಮಾಜೀ ಅವರಿಂದ ಪ್ರೇರಣೆಗೊಂಡು, 1944ರಲ್ಲಿ ಸೇವಾಗ್ರಾಮಕ್ಕೆ ಭೇಟಿ ನೀಡಿದರು. ಅವರ ಆದೇಶದಂತೆ ರಚನಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಂಡ ಯಶೋಧರಮ್ಮ "ಕಸ್ತೂರಬಾ ಸಾರಕ ಟ್ರಸ್ಟ್"ನ್ನು ಸ್ಥಾಪಿಸುವ ಮೂಲಕ ಸಾಮಾಜಿಕ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆಶ್ರಮದಲ್ಲಿ ಅನಾಥರಿಗೂ, ವಿದ್ಯಾರ್ಥಿಗಳಿಗೆ, ವಿಕಲ ಚೇತನರಿಗೆ, ಬಡವರಿಗೆ, ದಲಿತರಿಗೆ ಅನ್ನ-ಆಶ್ರಯಗಳನ್ನು ಒದಗಿಸಿದರು. ಗ್ರಾಮೀಣ ಮಹಿಳಾ ಸಂಘ, ಸ್ವಯಂ ಉದ್ಯೋಗ ತರಬೇತಿ ಕೇಂದ್ರ ಸ್ಥಾಪಿಸಿ, ಮಹಿಳೆಯರು ಸ್ವಾವಲಂಬಿಗಳಾಗಲು ನೆರವಾದರು. ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪ ಅವರ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವೆಯಾಗಿದ್ದ ಯಶೋಧರಮ್ಮ ಅವರು, "ಪಾನ ನಿಷೇಧ" ಮಸೂದೆ ಮಂಡಿಸಿದ್ದರು. ಅರಸೀಕೆರೆಯಲ್ಲಿರುವ ಕಸ್ತೂರಬಾ ಆಶ್ರಮ ಅವರ ಸೇವಾ ಕಾರ್ಯವನ್ನು ಮುಂದುವರೆಸುತ್ತಿದೆ.

ಪದ್ಮಾವತಿ ಬಿದರಿ

ಪದ್ಮಾವತಿ, ವಾಮನರಾವ್ ಬಿದರಿ ದಂಪತಿಗಳು ಗಾಂಧಿ ತತ್ವದಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗಿಯಾದವರು. ಅಣ್ಣೂ ಗುರೂಜಿ ಅವರ ಆಶ್ರಮ ಪಚ್ಚೀಪುರಕ್ಕೆ ಬಂದರು. ಅಲ್ಲಿ ಚರಕದಿಂದ ನೂಲು ತೆಗೆಯುವುದನ್ನು, ಸ್ವಾತಂತ್ರ್ಯ ಗೀತೆಗಳನ್ನು ಹಾಡುವುದನ್ನು ಕಲಿತರು ಮತ್ತು ಕಲಿಸುತ್ತಾ ಸಾಗಿದರು. ನಂತರದಲ್ಲಿ ಈ ಆಶ್ರಮಗಳ ಕೇಂದ್ರ ಸ್ಥಳವಾದ ಕಮರಿ ಆಶ್ರಮಕ್ಕೆ ತೆರಳಿ ಗಂಗಾಧರ ದೇಶಪಾಂಡೆ ಅವರ ಬಳಗದಲ್ಲಿ ಗುರ್ತಿಸಿಕೊಂಡರು. ಇವರು ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ನಂತರ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಂಡ ಕಾರಣದಿಂದ ಇವರು ಒಂದೂವರೆ ವರ್ಷ ಸೆರೆವಾಸ ಅನುಭವಿಸಬೇಕಾಯಿತು. ಪತಿಯ ಅಕಾಲಿಕ ಮರಣದಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾದರು. ಆ ಸಂದರ್ಭದಲ್ಲಿ ಇವರಿಗೆ ದಾಬಡೆ ಅವರು ಕರಮಕರ್ ಅವರು ಸಕಾಲಿಕ ನೆರವು, ಅವನ್ನು ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಮುಂದುವರಿಯಲು ಆತ್ಮಶಕ್ತಿ ನೀಡಿತು. ನಂತರ ಸರ್ವೋದಯ ಚಳುವಳಿಯಲ್ಲಿ ಭಾಗಿಯಾಗಿ ವಿನೋಬಾ ಅವರ ಆಶ್ರಮವನ್ನು ಸೇರಿದರು. ಆಕೆಯ ಸೇವಾ ಮನೋಭಾವವನ್ನು ಪರಿಗಣಿಸಿ ಸ್ವಾತಂತ್ರ್ಯೋತ್ಸವದ ಬೆಳ್ಳಿ ಮಹೋತ್ಸವದಲ್ಲಿ ಇವರಿಗೆ ತಾಮ್ರಪತ್ರವನ್ನು ಪ್ರದಾನ ಮಾಡಲಾಗಿತ್ತು.

ಮುಂದುವರಿಯುವುದು...

ಪುಸ್ತಕ ಪರಿಚಯ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ),

ಆಶಾವಾದದ ಅಮರಕೋಶ

ಕೃತಿಕಾರರು : ಡಾ.ಗುರುರಾಜ ಪೋಶೆಟ್ಟಿಹಳ್ಳಿ
ಪ್ರಕಾಶಕರು : ಪ್ರಣವ ಮೀಡಿಯಾ ಹೌಸ್ ಪ್ರಕಾಶನ




'ಒಳ್ಳೆಯ ವಿಚಾರಗಳು ನಮಗೆ ಎಲ್ಲಾ ದಿಕ್ಕುಗಳಿಂದಲೂ ಬರಲಿ' ಎಂಬ ಋಗ್ವೇದದ ಸೂಕ್ತಿಯಂತೆ ವಿಷಯ ಸಂಗ್ರಹಕ ಸಹೃದಯ ಸಂಪನ್ನ ಡಾ. ಗುರುರಾಜ ಪೋಶೆಟ್ಟಿಹಳ್ಳಿ ; ಅದನ್ನು ಎಲ್ಲರಿಗೂ ಹಂಚಿದವರು ಸಂಯುಕ್ತ ಕರ್ನಾಟಕ ದಿನಪತ್ರಿಕೆ ಈರ್ವರಿಗೂ ಅಭಿನಂದನೆಗಳು . ಲೇಖಕರ ಓದಿನ ಹರವಿನ ವಿಸ್ತಾರಕ್ಕೆ ಹಿಡಿದ ಕನ್ನಡಿಯಂತಿದೆ ಈ ಸಂಕಲನ . ಆಶಾವಾದದ ಒಂದು ಅಮರಕೋಶ ಇದಾಗಿದ್ದು . ಸ್ವಾರಸ್ಯಕರ ಆರಂಭ ಮನಮುಟ್ಟುವ ಅಂತ್ಯ ಒಳಗೊಂಡ ಪ್ರಸಂಗಗಳು ಒಂದೇ ಕಡೆ ಸಿಗುವ ಹಲಬಗೆಯ ಸ್ಫೂರ್ತಿಯುತ ಸಂದೇಶಗಳ ಮಹಾಪೂರವೇ ಇಲ್ಲಿದೆ. ಡಾ. ಗುರುರಾಜ ಪೋಶೆಟ್ಟಿಹಳ್ಳಿರವರ ಲೇಖನಗಳಲ್ಲಿ ನೀತಿಯನ್ನು ಶುಷ್ಕವಾದ ಬೋಧನೆಯ ರೂಪದಲ್ಲಿ ಹೇಳುವುದಕ್ಕಿಂತ ಸ್ವಾರಸ್ಯಕರವಾದ ಕಥಾರೂಪದಲ್ಲಿ ನಿರೂಪಿಸಿರುವುದು ಹೆಚ್ಚು ಆಕರ್ಷಕವೂ ಅರ್ಥಗರ್ಭಿತವಾಗಿಯೂ ಕಂಡುಬರುತ್ತದೆ. ಉದ್ಗ್ರಂಥಗಳ ಅಧ್ಯಯನ ಮಾಡಿ ಅರಗಿಸಿಕೊಳ್ಳಲಾದ ಅನೇಕ ಒತ್ತಡಗಳಲ್ಲಿ ಬದುಕುತ್ತಿರುವ ಸಾಮಾಜಿಕರಿಗೆ ಇಲ್ಲಿ ಒಂದೊಂದು ಅಂಕಣ ಬರಹವೂ ಜೀವನದ ಅಂತರಂಗ ಬಹಿರಂಗಗಳನ್ನು ಸಮರ್ಥವಾಗಿ ತೆರೆದಿಡುತ್ತದೆ. ಇದೀಗ ಅಂಕಣದ ಇದುವರೆಗಿನ ಬರಹಗಳನ್ನು ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಹೊರ ಬರುತ್ತಿರುವುದು ಸ್ವಾಗತಾರ್ಹ.

ಕನ್ನಡ... ಕನ್ನಡಿಗ... ಕರ್ನಾಟಕ : ಕುವೆಂಪು, ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ
(29.12.1904 – 11.11.1994)

ಸಂಗ್ರಹ : ಡಾ. ನಿಕೇತನ

ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಕುವೆಂಪು ಮತ್ತು ವಿನೋಬಾಜಿ ಅವರು ಪರಸ್ಪರ ಗೌರವ, ಘನತೆಯಿಂದ ಸಂಪರ್ಕದಲ್ಲಿದ್ದರು. ಅವರ ಅವಿನಾಭಾವದ ಸಂಬಂಧದ ಕೆಲವು ಭಾಗಗಳನ್ನು ದಾಖಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ವಿನೋಬಾ ಬಾವೆ ಅವರಲ್ಲಿ ಏನಾದರೂ ಆಶೀರ್ವಚನ ಬರೆದು ಕೊಡುವಂತೆ ಕುವೆಂಪು ಬಿನ್ನವಿಸಿಕೊಂಡರು. ಆಗ ವಿನೋಬಾ ನಗುತ್ತ "ನಾನೇನು ಆಶೀರ್ವಚನ ಬರೆಯಲಿ? ನಾನು ಹೇಳಬಹುದಾದ್ದು, ಹೇಳಲಾರದ್ದು ಎಲ್ಲವೂ ಶ್ರೀರಾಮಾಯಣದರ್ಶನದಲ್ಲಿ ಅಡಗಿದೆ. ಅಂಥ ಮಹಾಕಾವ್ಯದ ದಾರ್ಶನಿಕ ಕವಿಗೆ ಆಶೀರ್ವಚನವೆ?" ಎಂದು, ಮೇಲೆದ್ದು ಕುವೆಂಪು ಅವರ ಭುಜದ ಮೇಲೆ ಕೈಯಿಟ್ಟರು. ಅವರೊಡನೆಯೆ ಕುವೆಂಪು ಅವರೂ ಮೇಲೆದ್ದು, ಹೋಗಿ ಬರುವುದಾಗಿ ಹೇಳಿ ಕೈಮುಗಿದರು. "ಇಷ್ಟರಲ್ಲಿ ನಾನೂ ಮೈಸೂರಿಗೆ ಬರುತ್ತೇನೆ, ಕವಿಗಳ ಊರಿಗೆ ಬರುತ್ತೇನೆ" ಎಂದು ವಿನೋಬಾ ನುಡಿದರು. "ಮೈಸೂರು ನಗರ ಕೃತಕೃತ್ಯವಾಯಿತು" ಎಂದು ಕವಿಗಳು ಭಾವಪರವಶರಾದರು. "ನಾನು ಕವಿಯ ಮನೆಗೆ ಬರಬಹುದೆ? ನನ್ನನ್ನು ಕರೆಯಲಿಲ್ಲವಲ್ಲ" ಎಂದು ಸಂತರು ನಕ್ಕರು. ಕುವೆಂಪು ಹರ್ಷಾಶ್ಚರದಿಂದ ಅವಾಕ್ಕಾದರು. ಮರು ಕ್ಷಣದಲ್ಲಿಯೇ "ಭಗವತ್ಕೃಪೆ ತಾನಾಗಿಯೇ ಹರಿದುಬರುವಾಗ ಬೇಡವೆನ್ನುವವನು ಮೂರ್ಖ, ತಾವು ಬರುವುದಾದರೆ ನಾನು ಕೃತಾರ್ಥನಾಗುತ್ತೇನೆ. ದಯೆಯಿಟ್ಟು ಬನ್ನಿ, ಆಶೀರ್ವಾದವನ್ನು ತನ್ನಿ" ಎಂದು ಕವಿಗಳು ಕೈಮುಗಿದು ಪ್ರಾರ್ಥಿಸಿದರು.

ವಿನೋಬಾರವರು ಮೈಸೂರಿನ ಇಲವಾಲದಲ್ಲಿ ದಿ. 23-9-1957 ರಂದು ಸಂಜೆ ತಮ್ಮ ಪ್ರವಚನದಲ್ಲಿ "ಕರ್ನಾಟಕವನ್ನು ನಾವು ಪ್ರವೇಶಿಸುವಾಗ ಇಲ್ಲಿನ ಪರಂಪರೆಯ ನಾಲ್ಕಾರು ಚೇತನಗಳ ಸ್ಮರಣೆ ಬಂತು. ಅವರಲ್ಲಿ ಆಂಜನೇಯನೊಬ್ಬ. ಆ ಆಂಜನೇಯ ಇಂದಿಗೂ ಚಿರಂಜೀವಿಯಾಗಿ ಕರ್ನಾಟಕದಲ್ಲಿ ಸ್ಫೂರ್ತಿ ತುಂಬುತ್ತಿದ್ದಾನೆ. ಎಲ್ಲ ಪ್ರಾಂತಗಳಲ್ಲಿಯೂ ಹಿಂದಿನ ಕವಿ ಋಷಿಗಳು ರಾಮಾಯಣ ಕಾವ್ಯವನ್ನು ಬರೆದಿದ್ದಾರೆ. ಆದರೆ ಅರ್ವಾಚೀನ ಭಾಷೆಯಲ್ಲಿ ರಾಮಾಯಣ ಕಾವ್ಯದ ರಚನೆ ಆಗಿರುವುದು ಕನ್ನಡದಲ್ಲಿ ಮಾತ್ರವೇ! ಇಂದು ಮಹಾಕಾವ್ಯ ರಚಿಸುವ ಪ್ರವೃತ್ತಿ ಇಲ್ಲವೆಂದೇ ಹೇಳಬಹುದು. ಆದರೆ ನಿಮ್ಮ ಪುಟ್ಟಪ್ಪನವರು ಮಹಾಕಾವ್ಯ ರಚಿಸಿದ್ದಾರೆ. ಇದಕ್ಕಾಗಿ ನೀವು ಹೆಮ್ಮೆಪಡಬೇಕು. ಪುಟ್ಟಪ್ಪನವರನ್ನು ಭೇಟಿಯಾದಾಗ ಇದು ಸಣ್ಣ ಪುಟ್ಟ ಕವನಗಳ ಕಾಲ; ಮಹಾಕಾವ್ಯ ಉದ್ಭವವಾದದ್ದೇ ಆಶ್ಚರ್ಯ' ಎಂದು ವಿನೋದವಾಗಿ ಕೇಳಿದೆ. ಈ ಯುಗದಲ್ಲಿ ಮಹಾಕಾವ್ಯಕ್ಕೆ ಯೋಗ್ಯವಾಗಿರುವಂಥ ಅನೇಕ ಘಟನೆಗಳು ಈ ದೇಶದಲ್ಲಿ ನಡೆದಿವೆ. ಇಂಥ ಘಟನೆಗಳು ಇನ್ನೆಲ್ಲಿಯೂ ನಡೆದಿಲ್ಲ'. ಗ್ರಾಮಸ್ವರಾಜ್ಯದ ಕೆಲಸಕ್ಕಾಗಿ ಗ್ರಾಮದಾನದ ಆಂದೋಳನದಲ್ಲಿ ಭಾಗಿಗಳಾಗಿರಿ.

ಕವಿಯ ತಪಸ್ಸಿನಿಂದ ಮತ್ತು ಗಾನಸುಧೆಯಿಂದ ಮೊದಲೇ ಪವಿತ್ರವಾಗಿದ್ದ ತಾನು ಸಂತರ ಪಾದಧೂಳಿಯಿಂದ ಪವಿತ್ರತಮವಾಗುವೆನೆಂದು ಉದಯರವಿ ಹರ್ಷಾಬ್ಧಿಯಲ್ಲಿ ಮುಳುಗಿತ್ತು. ಮನೆಯ ಮುಂದಣ ರಂಗವಲ್ಲಿ ವಿನೋಬಾ ಪಾದಸ್ಪರ್ಶಕ್ಕಾಗಿ ಹಾತೊರೆಯುತ್ತಿತ್ತು, ವಿನೋಬಾರನ್ನು ಸ್ವಾಗತಿಸುವ ಸಲುವಾಗಿ ಕುವೆಂಪು ಅವರು ವಿನೋಬಾ ಹೆದ್ದಾರಿ ಮತ್ತು ಗೋಕುಲ ರಸ್ತೆ ಕೂಡುವೆಡೆ ಬೆಳಗಿನ 6 ಗಂಟೆಯಿಂದ ಕಾದು ನಿಂತರು. ದಾರಿಯ ಇಕ್ಕೆಲಗಳಲ್ಲಿ ಋಷಿದರ್ಶನಕಾತರರಾಗಿ ಜನಸ್ತೋಮ ಸಂದಣಿಸಿತ್ತು. ಗಾಳಿಯಲ್ಲಿ ತೇಲಿ ಬರುವಂತಿದ್ದ ಭೂದಾನಯಾತ್ರಿಯನ್ನು ಕಂಡ ಕೂಡಲೆ 'ಸಂತ ವಿನೋಬಾ ಕೀ ಜೈ' ಎಂದು ಜನ ಘೋಷಿಸಿತು. ಮಿಂದು ಮಡಿಯುಟ್ಟು ತಿಲಕಧಾರಿಯಾಗಿ ತೇಜಃಪುಂಜ ವದನದಿಂದ ಕಂಗೊಳಿಸುತ್ತ, ಭಕ್ತಿಭಾರದಿಂದ ಬಾಗಿ ನಿಂತಿದ್ದ ಕುವೆಂಪು ಅವರನ್ನು ಕಂಡಕೂಡಲೆ ವಿನೋಬಾ ಅವರ ಕಣ್ಣುಗಳಲ್ಲಿ ನಗು ಸೂಸಿತು. "ಇಗೋ ಬಂದೇಬಿಟ್ಟೆ, ಮಹಾಕವಿಯ ಮನೆಗಾಗಿ" ಎಂದು ಕುವೆಂಪು ಅವರನ್ನು ಪಕ್ಕಕ್ಕೆಳೆದುಕೊಂಡು, ಉದ್ದಕ್ಕೂ ಅವರ ಕೈ ಹಿಡಿದುಕೊಂಡು ಜಿಂಕೆಯಂತೆ ಹೆಜ್ಜೆಯಿಡುತ್ತ ಇಲ್ಲ, ಮೊದಲಿನಂತೆ ಗಾಳಿಯಲ್ಲಿ ತೇಲುತ್ತ ಉದಯರವಿಗೆ ಬಂದರು. ಅವರು ಉದಯರವಿಯನ್ನು ಪ್ರವೇಶಿಸುತ್ತಿದ್ದಂತೆ ಕುವೆಂಪು ಸಾನಂದ ಗದ್ಗದದಿಂದ ನಾನು ಧನ್ಯನಾದೆ, ನನ್ನ ಮನೆ ಧನ್ಯವಾಯಿತು, ನನ್ನ ಮನೆತನ ಧನ್ಯವಾಯಿತು' ಎಂದು ನುಡಿದರು. ಮನೆಯೊಳಗಿನ ಹಜಾರದಲ್ಲಿ ಅವರು ಕುಳಿತು ಕೊಳ್ಳಲು ಲೋಡಿನ ವ್ಯವಸ್ಥೆ ಮಾಡಿತ್ತು. ಕುವೆಂಪು ಕೃತಿಗಳನ್ನೆಲ್ಲ ಅವರ ಪಕ್ಕದಲ್ಲಿ ಜೋಡಿಸಿತ್ತು. ವಿನೋಬಾರವರು ಅವನ್ನೆಲ್ಲ ಒಂದೊಂದಾಗಿ ತೆಗೆದು ನೋಡುತ್ತ, ಆಯಾಯ ಕೃತಿಯ ಬಗ್ಗೆ ವಿಚಾರಿಸುತ್ತಿದ್ದರು. ಶ್ರೀರಾಮಾಯಣದರ್ಶನಂ ಮಹಾ ಕಾವ್ಯದ ಹಸ್ತಪ್ರತಿಯನ್ನು ಕೇಳಿ ತರಿಸಿಕೊಂಡು ತಿರುವಿ ಹಾಕಿದರು. ಕಲಾ, ತಾರಿಣಿಯರು ಕುವೆಂಪು ಅವರ ಎರಡು ಭಕ್ತಿ ಗೀತೆಗಳನ್ನು ಹಾಡಿದಾಗ ವಿನೋಬಾರವರು ಕಣ್ಮುಚ್ಚಿಕೊಂಡು ಪ್ರಾರ್ಥನಾ ಭಂಗಿಯಲ್ಲಿ ಕುಳಿತಿದ್ದರು. ಪಾದಯಾತ್ರಿಕರಿಗೆ ಪ್ರಸಾದ ವಿನಿಯೋಗವಾಗುತ್ತಿತ್ತು.

ಮುಂದುವರಿಯುವುದು...

ಹೆಮ್ಮೆಯ ಕನ್ನಡಿಗ : ಡಾ. ಡಿ.ವಿ. ಗುಂಡಪ್ಪ – (17.03.1887 – 07.09.1975)

– ಮಹೇಶ್

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಕನ್ನಡದ ಆಧುನಿಕ ಸರ್ವಜ್ಞರೆಂದೇ ಖ್ಯಾತರಾಗಿದ್ದ ಪ್ರಸಿದ್ಧಸಾಹಿತಿ, ಪತ್ರಕರ್ತರಾದ ಡಾ. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ದೇವನಹಳ್ಳಿಯಲ್ಲಿ ಜನಿಸಿದರು. ಗುಂಡಪ್ಪ ಅವರು ಕನ್ನಡ ಲೋಯರ್ ಸೆಕೆಂಡರಿ ನಂತರ ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದರು. ಮತ್ತು ಇಂಗ್ಲೀಷ್ ಹಾಗೂ ಸಂಸ್ಕೃತವನ್ನು ಅಭ್ಯಾಸ ಮಾಡಿದರು. ಆರಂಭದಲ್ಲಿ ಮುಳಬಾಗಿಲಿನ ಒಂದು ಶಾಲೆಯಲ್ಲಿ ಬದಲಿ ಅಧ್ಯಾಪಕರಾಗಿ ಕೆಲಕಾಲ ಕೆಲಸ ಮಾಡಿದರು. ಮುಂದೆ ಶಿಕ್ಷಕ ವೃತ್ತಿಯನ್ನೂ ಬಿಟ್ಟು ಕೋಲಾರದ ಚಿನ್ನದ ಗಣಿಯಲ್ಲಿ, ಸೋಡಾ ಫ್ಯಾಕ್ಟರಿಯಲ್ಲಿ, ಕೆಲಸ ಮಾಡಿದರು. ಜೀವನ ನಿರ್ವಹಣೆಗಾಗಿ ಏನಾದರೂ ಮಾಡಬೇಕಿದ್ದ ಗುಂಡಪ್ಪನವರು "ಸೂರ್ಯೋದಯ ಪ್ರಕಾಶಿಕ" ಪತ್ರಿಕೆಯಲ್ಲಿ ಬಾತ್ಮೀದಾರರಾಗಿ ಸೇರಿಕೊಂಡರು. ನಂತರ ಹಲವಾರು ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನ ಬರೆದರು. ಕನ್ನಡ ಪತ್ರಿಕೆಗಳಲ್ಲಿ ಅನುಭವ ಪಡೆದರು. "ವೀರಕೇಸರಿ", "ಹಿಂದೂ" ಹಾಗೂ "ಮೈಸೂರು ಟೈಮ್ಸ್" ಇಂಗ್ಲಿಷ್ ಪತ್ರಿಕೆಯ ಸಹಾಯಕ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ದಿವಾನ್ ರಂಗಾಚಾರ್ಯ ಅವರ ಬಗ್ಗೆ ಇಂಗ್ಲಿಷಿನಲ್ಲಿ ಬರೆದ ಲೇಖನ ಡಿ.ವಿ.ಜಿ ಅವರ ಬದುಕಲ್ಲಿ ಹೊಸ ತಿರುವು ಪಡೆಯಿತು. ಮುಂದೆ ಇದು ಪುಸ್ತಕವಾಗಿ ಪ್ರಕಟವಾಯಿತು. ಅನುವಾದ ಸಾಹಿತ್ಯದ ಮೂಲಕ ಡಿ.ವಿ.ಜಿ ಖ್ಯಾತರಾದರು. ಕನ್ನಡ ಕಾವ್ಯಕ್ಷೇತ್ರದಲ್ಲಿ "ಮಂಕುತಿಮ್ಮನ ಕಗ್ಗ" ಹಾಗೂ "ಮರುಳ ಮುನಿಯನ ಕಗ್ಗ" ಮೂಲಕ ಡಿ.ವಿ.ಜಿ ಮನೆಮಾತಾದರು. ಈ ಕೃತಿ ಕನ್ನಡದ ಭಗವದ್ಗೀತೆಯೆಂದೇ ಇಂದಿಗೂ ಪ್ರಖ್ಯಾತವಾಗಿದೆ. ಈ ಕೃತಿಯಲ್ಲಿನ ಪ್ರಸಿದ್ಧವಾದ ಒಂದು ಕಗ್ಗ

"ಬದುಕು ಜಟಕಾಬಂಡಿ ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಗು
ಪದ ಕುಸಿಯೆ ನೆಲವಿಹುದು

"ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು" ಎಂದ ಡಿ.ವಿ.ಜಿ, ಕವಿ ಪರಂಪರೆ ಹಾಗೂ ವಿಜ್ಞಾನ ನಂಬಿಕೆಗೆ ಕೊಂಡಿ ಬೆಸೆದರು. ಹಳೆಯದನ್ನು ಬಿಡಲಾರದ ಹೊಸತು ವಿಜ್ಞಾನ ಸೃಷ್ಟೀಕರಿಸಲಾಗದ ಭಾರತೀಯ ಮನಸ್ಸುಗಳನ್ನು ಒಂದಾಗಿಸುವ ವಿಚಾರ ಲಹರಿಯನ್ನು ಕಾವ್ಯ ಮುಖೇನ ನೀಡಿದರು. ಪತ್ರಕರ್ತರಾದ ಡಿ.ವಿ.ಜಿ ಅವರು ವ್ಯಕ್ತಿ ವಿಚಾರದ ಬರಹಗಳಾದ "ಮಹನೀಯರು", "ಜ್ಞಾಪಕ ಚಿತ್ರಶಾಲೆ" ಮಹತ್ವದ ವಿಚಾರಗಳನ್ನು ಹೊರಚೆಲ್ಲಿವೆ. ಡಿ.ವಿ.ಜಿ ಅವರನ್ನು ಆಧುನಿಕ ಭಾರತೀಯ ಸಾಹಿತ್ಯದ ಅಶ್ವತ್ಥ ವೃಕ್ಷ ಎಂದೂ ಕರೆದಿದ್ದಾರೆ. ಡಿ.ವಿ.ಜಿ ಅವರ ವಿದ್ವತ್ತು ಹಾಗೂ ಚಿಂತನೆ ಕಂಡವರು, ಅವರನ್ನು ಋಷಿ ಎಂದೂ ಕರೆದಿದ್ದಾರೆ. ಅವರ ಸಾಹಿತ್ಯ ಬಾಳಿಗೊಂದು ನಂಬಿಕೆಯನ್ನೂ, ಭರವಸೆಯನ್ನೂ ಕೊಟ್ಟಿದೆ. ಹಾ.ಮಾ. ನಾಯಕರು "ಡಿ.ವಿ.ಜಿ. ಅವರದು ಸತ್ಯ ಶಿವ ಸೌಂದರ್ಯಗಳ ಸಮಹಿತವಾದ ಸಾಹಿತ್ಯ" ಎಂದಿದ್ದಾರೆ.



ಸಾಹಿತ್ಯ ಮಾತ್ರವಲ್ಲದೆ ಚರಿತ್ರೆ, ರಾಜನೀತಿ, ತತ್ವಜ್ಞಾನ, ಪ್ರಜಾಪ್ರಭುತ್ವ, ಸಮಾಜ ವಿಜ್ಞಾನ, ಸಾರ್ವಜನಿಕ ಜೀವನ, ಮುಂತಾದ ಹಲವಾರು ವಿಷಯಗಳನ್ನು ಕುರಿತು ಅವರು 66 ಕನ್ನಡ ಕೃತಿಗಳನ್ನೂ ಇಂಗ್ಲೀಷ್ – ಕನ್ನಡ ಭಾಷೆಗಳೆರಡರಲ್ಲಿಯೂ ನೂರಾರು ಲೇಖನಗಳನ್ನೂ ಬರೆದಿದ್ದಾರೆ. ಇವರ ಇಂಗ್ಲೀಷ್ ಕೃತಿಗಳು ಹಾಗೂ ಲೇಖನಗಳನ್ನು ವಿಶ್ವವಿಖ್ಯಾತ ವಿದ್ವಾಂಸರಾದ ಡಾ. ಎ.ಬಿ. ಕೀತ್ ಹಾಗೂ ಸಿ.ಎಫ್. ಆಂಡ್ರ್ಯೂಸ್ ಮತ್ತು ಭಾರತದ ಅಗ್ರಗಣ್ಯ ವ್ಯಕ್ತಿಗಳಾಗಿದ್ದ ಎಸ್. ಸತ್ಯಮೂರ್ತಿ ಹಾಗೂ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಅಂದಿನ ಪ್ರಮುಖ ಪತ್ರಿಕೆಗಳಾಗಿದ್ದ 'ಸರ್ವೆಂಟ್ ಆಫ್ ಇಂಡಿಯ' ಹಾಗೂ 'ಬಾಂಬೆ ಕ್ರಾನಿಕಲ್' ಪತ್ರಿಕೆಗಳಲ್ಲಿ ಮನಸೋಕ್ತವಾಗಿ ಮೆಚ್ಚಿ ಬರೆದರು.

ಡಿ.ವಿ.ಜಿ. ಅವರು 1935ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಸ್ಥಾಪಿಸಿದರು. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ 'ಇಂಗ್ಲಿಷ್–ಕನ್ನಡ ನಿಘಂಟು' ಕೃತಿಯ ಸಂಪಾದಕ ಸಮಿತಿ ಹಾಗೂ ಮೈಸೂರು ರಾಜ್ಯಾಂಗ ಸುಧಾರಣಾ ಸಮಿತಿ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಡಿ.ವಿ.ಜಿ ಅವರ ಸಾಹಿತ್ಯ ಸೇವೆಗಾಗಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಿ.ಲಿಟ್. ಪದವಿ, ಶ್ರೀಮದ್ಭಗವದ್ಗೀತಾ ತಾತ್ಪರ್ಯ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತ ಸರ್ಕಾರದ "ಪದ್ಮಭೂಷಣ ಪ್ರಶಸ್ತಿ"ಗಳು ಸಂದಿವೆ. ಡಿವಿಜಿಯವರ ನೆನಪಿಗಾಗಿ ಅಂಚೆಚೀಟಿ ಬಿಡುಗಡೆಯಾಗಿದೆ. ಮಡಿಕೇರಿಯಲ್ಲಿ 18ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆಯ ಗೌರವಗಳಿಗೆ ಭಾಜನರಾಗಿದ್ದಾರೆ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆ ವಿಧಿಯು ಸುರಿಯೇ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ
ಸಂಗ್ರಹ : ವಿ.ಎನ್. ತಿಪ್ಪನಗೌಡ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಗಾಂಧಿ ಅವರು 1930ರಲ್ಲಿ ಜೈಲಿನಲ್ಲಿದ್ದರು. ಅವರ ಸಂದೇಶ ಮುಟ್ಟಿಸಲಿಕ್ಕೆ ಕಸ್ತೂರಬಾ ಅವರು ಊರೂರು ತಿರುಗುತ್ತಲಿದ್ದರು. ಈ ಪರಿಶ್ರಮದಿಂದ ಅವರ ಆರೋಗ್ಯ ಸ್ವಲ್ಪ ಕೆಟ್ಟಿತು. ವಿಶ್ರಾಂತಿಗಾಗಿ ಅವರು ಮರೋಲಿ ಆಶ್ರಮದಲ್ಲಿ ಇರಹತ್ತಿದರು. "ನಮ್ಮೊಡನೆ ಕಸ್ತೂರಬಾರು ಇರುವುದು ಆಗತ್ಯವಿದೆ" ಎಂದು ಒಂದು ದಿನ ತಾರು ಬಂತು. ಸರಕಾರೀ ಕರ ಕೊಡಬೇಡಿರಿ ಎಂದು ರೈತರಿಗೆ ಹೇಳಿದ ಬಗ್ಗೆ ಬೋರಸಾದಲ್ಲಿ ಕೆಲವು ಭಗಿನಿಯರ ಮೇಲೆ ಲಾಠಿ ಪ್ರಹಾರ ನಡೆದಿತ್ತು. ಅನೇಕ ಭಗಿನಿಯರು ಗಾಯಗೊಂಡು ದವಾಖಾನೆ ಸೇರಿದ್ದರು. ಅವರು ರೈತರಲ್ಲಿ ಧೈರ್ಯ ತುಂಬಲು ಕಸ್ತೂರಬಾರನ್ನು ಕರೆಸಿದ್ದರು. ತಾರು ನೋಡುತ್ತಲೆ ಕಸ್ತೂರಬಾ ಅವರು ತಮ್ಮ ಸಾಮಾನು ಕಟ್ಟತೊಡಗಿದರು. ಅವರ ಆರೋಗ್ಯ ಸರಿ ಇಲ್ಲದ್ದರಿಂದ ಜನರು ಅವರನ್ನು ತಡೆಯಲು ಯತ್ನಿಸಿದರು. ಆದರೆ ಕಸ್ತೂರಬಾ ಹೇಳಿದರು "ಪೋಲೀಸರ ಲಾಠಿಯ ಪೆಟ್ಟು ತಿಂದ ಭಗಿನಿಯರ ಹತ್ತಿರ ನಾನು ಹೋಗಲೇಬೇಕು. ಗಾಂಧಿಯವರು ಹೊರಗೆ ಇದ್ದಿದ್ದರೆ ಇಂಥ ಹೊತ್ತಿನಲ್ಲಿ ಆ ಭಗಿನಿಯರ ಹತ್ತಿರ ಹೋಗಿಬಿಡುತ್ತಿದ್ದರು. ಅವರ ಕೆಲಸ ನಾನು ಮಾಡಬೇಕಾಗಿದೆ", ಎಂದು ಹೇಳಿ ಗಾಡಿ ಹಿಡಿಯಲಿಕ್ಕೆ ಶೀಘ್ರವಾಗಿ ಸ್ಟೇಷನ್‌ಗೆ ನಡೆದರು. ಜತೆಯಲ್ಲಿ ಹುಡುಗಿಯರಾಗಲೀ ಮಕ್ಕಳಾಗಲೀ ಇಲ್ಲದೆ ಕಸ್ತೂರಬಾರು ಇರುತ್ತಲೆ ಇರಲಿಲ್ಲ. ಅವರ ಹತ್ತರ ಯಾವಾಗಲೂ ಒಬ್ಬಿಬ್ಬರು ದೊಡ್ಡ ಹುಡುಗಿಯರೂ ಒಂದೆರಡು ಚಿಕ್ಕ ಬಾಲಕರೂ ಇದ್ದೇ ಇರುತ್ತಿದ್ದರು. ಅವರೆಲ್ಲ ಅವರ ಕುಟುಂಬದವರೋ ಇಲ್ಲವೇ ಅವರ ಸಂಗಡಿಗರ ಕುಟುಂಬದವರೋ ಆಗಿರುತ್ತಿದ್ದರು. ಕಸ್ತೂರಬಾರು ಅವರೆಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದರು.

ಕಸ್ತೂರಬಾರು ರಾಜಕೋಟೆ ಸತ್ಯಾಗ್ರಹಕ್ಕೆ ಹೊರಟಾಗ ಚಿಕ್ಕಕಾನ್ಹಾನನ್ನು ತಾನು ನೋಡಿಕೊಳ್ಳುವೆನೆಂದು ಗಾಂಧಿ ಅವರು ಆಶ್ವಾಸನೆ ಕೊಟ್ಟಿದ್ದರು. ಆದರೆ ಮುಂದೆ ಕಾನ್ಹಾ ಹಗಲು ರಾತ್ರಿ ಅಜ್ಜಿಯನ್ನು ನೆನಸಿ ಒಂದೇ ಸವನೆ ಅಳಹತ್ತಿದ. ಕೊನೆಗೆ ಗಾಂಧಿ ಅವರು ಅವನಿಗೆ ಹೇಳಿದರು. "ನೀನು ನಿನ್ನ ಅಜ್ಜಿಯ ಹೆಸರಿನ ಜಪ ಮಾಡು" ಎಂದರಯ. ಕೆಲ ಸಮಯ ಆತ ಶಾಂತಿಯಿಂದ ಜಪ ಮಾಡಿದ. ಆದರೆ ಅಜ್ಜಿಯ ದರ್ಶನವಾಗಲಿಲ್ಲ. ಅಜ್ಜಿ ಬರಲಿಲ್ಲ. ಅಜ್ಜಿ ಬರಲಿಲ್ಲ' ಎಂದು ತಿರುಗಿ ಅಳಹತ್ತಿದ. ಕೊನೆಗೆ ಗಾಂಧಿ ಅವನನ್ನು ಅವನ ತಾಯಿ ಬಳಿಗೆ ಕಳಿಸಿಕೊಟ್ಟರು. ಆಶ್ರಮದಲ್ಲಿ ಸತ್ಕಾರ ಹಾಗೂ ಪ್ರೇಮ ಸಿಗುತ್ತಿದ್ದುದು ಕಸ್ತೂರಬಾರಲ್ಲೆ. ದೊಡ್ಡ ಮುಖಂಡರು ಗಾಂಧಿ ಅವರ ಜತೆಯಲ್ಲಿ ತಾಸುಗಟ್ಟಲೆ ಚರ್ಚೆ ಮಾಡಿ ಎಷ್ಟೇ ದಣಿದಿದ್ದರೂ ಸಹ ಕಸ್ತೂರಬಾರಿಗೆ ಭೆಟ್ಟಿಯಾಗದೆ ಹೋಗುತಿರಲಿಲ್ಲ. ಕಸ್ತೂರಬಾ ಪ್ರತಿಯೊಬ್ಬ ಮುಖಂಡರನ್ನೂ ಆದರಿಸುತ್ತಿದ್ದರು. ಗಾಂಧಿ ಅವರ ಆಶ್ರಮವನ್ನು ನೀರಸವೆನಿಸದಂತೆ ಮಾಡಿದವರು ಕಸ್ತೂರಬಾ ಅವರೇ.



ಬಾ ಅವರು ಆಶ್ರಮದ ಯಾವತ್ತೂ ಕೆಲಸಗಳಲ್ಲಿ ಮತ್ತು ವಿಶೇಷವಾಗಿ ಅಡಿಗೆ ಮನೆಯ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದರು. ಅವರ ಮೇಲೆ ಹೆಚ್ಚಿನ ಜವಾಬ್ದಾರಿ, ಇಲ್ಲದಿದ್ದರೂ ಕೂಡ ಅವರು ಬಿಡುತ್ತಿರಲಿಲ್ಲ. ಅಡಿಗೆಯ ಹೊತ್ತಿನಲ್ಲಿಯೇ ಹೊರಗೆ ಏನಾದರೂ ಹೆಚ್ಚಿನ ಕಾರ್ಯಕ್ರಮ ನಡೆಯುವುದಿದ್ದರೆ ಕಸ್ತೂರಬಾ ಅವರು ಎಲ್ಲ ಭಗಿನಿಯರಿಗೂ "ನೀವೆಲ್ಲರೂ ಕಾರ್ಯಕ್ರಮಕ್ಕೆ ಹೋಗಿರಿ. ನೀವು ವಯಸ್ಸಿನಲ್ಲಿ ನನಗಿಂತ ಕಿರಿಯರಿದ್ದೀರಿ. ನೋಡಬೇಕು, ಕೇಳಬೇಕು, ತಿರುಗಾಡಬೇಕು ಎಂಬ ಉತ್ಸಾಹ ನಿಮ್ಮಲ್ಲಿ ಹೆಚ್ಚು ಇದೆ. ನೀವು ಹೋಗಿರಿ, ಅಡಿಗೆ ಮನೆಯಲ್ಲಿಯ ಕೆಲಸ ನಾನು ನೋಡಿಕೊಳ್ಳುತ್ತೇನೆ" ಎಂದು ಹೇಳುತ್ತಿದ್ದರು.

ಕಸ್ತೂರಬಾರ ವ್ಯಾವಹಾರಿಕ ದೃಷ್ಟಿ

1922–24 ರಲ್ಲಿ ಗಾಂಧಿ ಅವರು ಜೈಲಿನಲ್ಲಿರುವಾಗ ಕೆಲದಿನ ಬರೀ ಹಾಲಿನ ಮೇಲೆ ಇರುವ ನಿಶ್ಚಯ ಮಾಡಿದ್ದರು. ಒಮ್ಮೆ ಕಸ್ತೂರಬಾ ಅವರು ಜೈಲಿನಲ್ಲಿ ಅವರ ಭೆಟ್ಟಿಗೆ ಹೋದಾಗ ಪಾವಟಿಗೆಗಳನ್ನು ಹತ್ತುವಾಗ ಗಾಂಧಿ ಅವರ ಕಾಲುಗಳು ನಡುಗುತ್ತಿದ್ದುದನ್ನು ನೋಡಿದರು. ಆಗ ಕಸ್ತೂರಬಾರು "ಹೀಗೇಕೆ" ಎಂದು ಕೇಳಿದರು. ಗಾಂಧಿಯವರು ಅದರ ಕಾರಣವನ್ನು ಹೇಳಲೇಬೇಕಾಯಿತು. ಇದರಲ್ಲಿ ತನ್ನದೇನೂ ತಪ್ಪಿಲ್ಲವೆಂದು ಸೂಪರಿಂಟೆಂಡೆಂಟರು ಕಸ್ತೂರಬಾ ಅವರ ಮುಂದೆ ಆತ್ಮಸಂರಕ್ಷಣೆ ಮಾಡಿಕೊಳ್ಳಹತ್ತಿದರು.

ಕಸ್ತೂರಬಾರು ಇಡೀ ಜೀವಮಾನದಲ್ಲಿ ಗಾಂಧಿಯವರ ಉತ್ಪಾತಮಯ? ಜೀವನವನ್ನು ಅನುಭವಿಸುತ್ತಲೆ ಬಂದವರಿದ್ದರು. ಆದ್ದರಿಂದ ಅವರು ಸಹಜವಾಗಿಯೇ ಹೇಳಿಬಿಟ್ಟರು. "ಹೌದು ಹೌದು, ನನ್ನ ಯಜಮಾನರ ಸ್ವಭಾವ ನಾನು ಚೆನ್ನಾಗಿ ಬಲ್ಲೆ. ಅವರಿಗೆ ಯಾವಾಗಲೂ ಏನಾದರೊಂದು ಉತ್ಪಾತಗಳೇ ಸೂಚಿಸುತ್ತಿರುತ್ತವೆ",

ಮುಂದುವರಿಯುವುದು....

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್

– ಇಂದಿರಾ ಕೃಷ್ಣಪ್ಪ

ಡಾ. ಅಂಬೇಡ್ಕರ್ ಮತ್ತು ಸಂವಿಧಾನ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಭಾರತ ಸಂವಿಧಾನ ಅಂದರೆ ಅದು ಬರಿಯ ಆಡಳಿತದ ಕ್ರಮವಲ್ಲ; ಅದು ಜೀವನ ಕ್ರಮವೇ ಆಗಿದೆ. ಇದರೊಂದಿಗೆ ಒಬ್ಬ ವ್ಯಕ್ತಿ – ಒಂದು ಮೌಲ್ಯ – ಒಂದು ಮತ ಎಂಬ ಸಿದ್ಧಾಂತ, ದೇಶದ ಕಟ್ಟಕಡೆಯ ಮನುಷ್ಯನಿಂದ ಹಿಡಿದು, ಮಾಜಿ ರಾಜ ಮಹಾರಾಜ – ಚಕ್ರವರ್ತಿಯೇ ಆಗಿರಲಿ ಸಮಾನತೆಯ ತತ್ವದಡಿಯಲ್ಲಿ ಒಳಗೊಂಡಿತ್ತು.

ಇದರೊಂದಿಗೆ, ದೇಶದ ಅಧಿಕಾರ ಚುಕ್ಕಾಣಿ ಹಿಡಿದಿರುವವರು, ಪ್ರಜೆಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಆಯವ್ಯಯ – ಅಭಿವೃದ್ಧಿ ಯೋಜನೆ, ಕಲ್ಯಾಣ ಕಾರ್ಯಕ್ರಮಗಳನ್ನು ರಚಿಸಿಕೊಳ್ಳಲು "ನಿರ್ದೇಶಕ ತತ್ವಗಳನ್ನು" ಅಳವಡಿಸಲಾಗಿದೆ. ಸಂವಿಧಾನದ ವಿಧಿ 38, 39ಎ, 40 ರಿಂದ 47ರವರೆಗೆ ನಿರ್ದೇಶಕ ತತ್ವಗಳಿವೆ. ಅವು ಶಿಕ್ಷಣ, ಆರೋಗ್ಯ, ಆಹಾರ, ನೀರಾವರಿ, ಕೃಷಿ, ಉದ್ಯೋಗ ಸೃಜನೆ, ಸಮಾನ ವೇತನ, ಕಾನೂನು ನೆರವು, ಮಹಿಳೆ ಮತ್ತು ಮಕ್ಕಳ ರಕ್ಷಣೆ, ಅಲ್ಪಸಂಖ್ಯಾತರು, ದುರ್ಬಲರು, ವಿಕಲಚೇತನರ ಸಂರಕ್ಷಣೆ, ಪರಿಸರ ಸಂರಕ್ಷಣೆ, ಪ್ರಾಚೀನ ಇತಿಹಾಸ, ಕಲೆ, ಸಾಹಿತ್ಯಗಳ ಸಂರಕ್ಷಣೆ ಇನ್ನೂ ಮುಂತಾದುವುಗಳನ್ನು ಒಳಗೊಂಡಿದೆ. ನಿರ್ದೇಶಕ ತತ್ವಗಳನ್ನು ಅಳವಡಿಸುವಲ್ಲಿ "ಭಾರತದ ರಾಷ್ಟ್ರೀಯತೆ – ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ವಿವೇಚನೆ ಮತ್ತು ಆರ್ಥಿಕ ವಿಕೇಂದ್ರೀಕರಣಗಳು, ಆಡಳಿತ ಯೋಜನೆಗಳಲ್ಲಿ ಕಾರ್ಯಕ್ರಮಗಳಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತವಾಗಬೇಕೆಂದು ಡಾ. ಅಂಬೇಡ್ಕರ್ ಅವರು ಆಶಿಸಿದ್ದರು. ಉತ್ಪಾದನಾ ಮೂಲಗಳಾದ ಕೃಷಿ ಮತ್ತು ಕೈಗಾರಿಕೆಗಳು ಸರ್ಕಾರದ ಸ್ವಾಮ್ಯತೆ ಇರಬೇಕು. ಜಾಗತೀಕರಣದ ಈ ಸಂದರ್ಭದಲ್ಲಿ ನಿರುದ್ಯೋಗ, ಬಡತನ ಹೆಚ್ಚುತ್ತಿರುವ ಸ್ಥಿತಿಯಲ್ಲಿ ಅವರ ಮಾತುಗಳು ನೆನಪಿಗೆ ಬರುತ್ತವೆ. ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕ ತತ್ವಗಳು ಪ್ರಜೆಗಳ ಮತ್ತು ಸರ್ಕಾರದ ಜವಾಬ್ದಾರಿಯನ್ನು ನಿರ್ದೇಶಿಸುತ್ತವೆ. ಮೂಲಭೂತ ಹಕ್ಕುಗಳು ವ್ಯಕ್ತಿಯ ಘನತೆಯ ಬದುಕನ್ನು ಪ್ರತಿಪಾದಿಸುತ್ತಾ, ಪ್ರಜೆಗಳು ಸಂಪೂರ್ಣವಾಗಿ ಅರಳುವ ವಾತಾವರಣವನ್ನು ನಿರ್ಮಿಸುತ್ತದೆ. ಮತ್ತು ಆಗ ಮಾತ್ರ ಭಯ–ಶೋಷಣೆ– ಅಭದ್ರತೆಗಳಿಂದ ಮುಕ್ತವಾದ ಭಾರತೀಯ ಸಮಾಜ ನಿರ್ಮಾಣವಾಗಲು ಸಾಧ್ಯ. ರಾಜಕೀಯ ಸ್ವಾತಂತ್ರದೊಂದಿಗೆ ಆರ್ಥಿಕ–ಸಾಮಾಜಿಕ ಸ್ವಾತಂತ್ರ ಎಂದರೆ ಹೃದಯ ಮತ್ತು ಆತ್ಮಗಳ ಮಿಲನ ಎಂದರು ಡಾ. ಅಂಬೇಡ್ಕರ್ ಅವರು. ಇದರೊಂದಿಗೆ ಪ್ರಜೆಗಳು ನಿರ್ವಹಿಸಲೇಬೇಕಾದ ಅನೇಕ ಕರ್ತವ್ಯಗಳನ್ನು ನಿರ್ದೇಶಿಸಿದೆ.

1. ಸಂವಿಧಾನದ ಪಾಲನೆ
2. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಗೌರವ
3. ಚುನಾವಣೆಯಲ್ಲಿ ಮತದಾನ
4. ದೇಶದ ರಕ್ಷಣೆಗೆ ಸದಾ ಸಿದ್ಧರಿರುವುದು
5. ಸಾರ್ವಜನಿಕ ಸ್ವತ್ತಿನ ರಕ್ಷಣೆ
6. ಎಲ್ಲ ಜನರೊಂದಿಗೆ ಸಹಬಾಳ್ವೆ – ಮಹಿಳೆಯರಿಗೆ ಗೌರವ
7. ಪರಿಸರ ಸಂರಕ್ಷಣೆ
8. ವೈಜ್ಞಾನಿಕ–ಮಾನವೀಯ ಮನೋಭಾವ.

ಭಾರತದ ಸಂವಿಧಾನದಲ್ಲಿನ ಕಾನೂನಿನ ಮುಂದೆ ಎಲ್ಲರೂ ಸಮಾನರು; ಏಕರೂಪದ ಪೌರತ್ವ; ಮಾನವನ ಘನತೆಯ ಬದುಕು; ಇವುಗಳೊಂದಿಗೆ, ಪ್ರಜೆಗಳೇ ಪ್ರಭುಗಳಾಗಿರುವ ಸಾಮಾಜಿಕ – ರಾಜಕೀಯ ವ್ಯವಸ್ಥೆಯಾಗಿದೆ.

ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂವಿಧಾನವನ್ನು ಭಾರತರತ್ನ ಅಂಬೇಡ್ಕರ್ ಅವರು ಪಾರ್ಲಿಮೆಂಟಿನಲ್ಲಿ ಒಪ್ಪಿಸಿದಾಗ, ಸುಮಾರು 45 ನಿಮಿಷಗಳ ಕಾಲ ಸುದೀರ್ಘ ಭಾಷಣ ಮಾಡಿದ್ದರು. "ಸಂವಿಧಾನ ರಚನಾ ಸಮಿತಿಯು ಸಂವಿಧಾನ ಕರಡು ರಚನಾ ಸಮಿತಿಯನ್ನು ಹಾಗೂ ಮೂರು ಉಪಸಮಿತಿಗಳು

1. **Union Constitution Committee**
2. **Provisional Constitution Committee**
3. **Advisory Committee on Fundamental Rights, Minorities, Tribal Areas**

ಚರ್ಚೆಗಳು ಮತ್ತು ಭಾರತೀಯ ಸರ್ಕಾರಿ ಆಕ್ಟ್ – 1935ರಲ್ಲಿರುವುದನ್ನು ಪರಿಶೀಲಿಸಿಕೊಂಡು, ಸಂವಿಧಾನ ರಚಿಸಲು ನಿರ್ದೇಶಿಸಿದಂತೆ, ಸಂವಿಧಾನವನ್ನು ರಚಿಸಲಾಗಿದೆಯೆಂದೂ, ಸಂವಿಧಾನ ರಚಿಸುವ ಈ ಮಹತ್ತರವಾದ ರಾಷ್ಟ್ರಸೇವಾ ಕಾರ್ಯಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತಾ, ಸಮಿತಿಯ ಸದಸ್ಯರೆಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ನಂತರದಲ್ಲಿ ಮಾತನಾಡುತ್ತಾ, ಕರಡು ರಚನಾ ಸಮಿತಿ ನಡೆಸಿದ ಸಭೆಗಳು – ಚರ್ಚೆಗಳು – ವಿವರಗಳನ್ನು ಮುಂದಿಡುತ್ತಾ ಕೆನಡಾ, ಅಮೇರಿಕಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾದ ಸಂವಿಧಾನದ ವಿವರಗಳನ್ನು ವಿಶ್ಲೇಷಿಸಿದರು. ಹಾಗೆಯೇ, ಭಾರತದ ಹಿಂದಿನ ಇತಿಹಾಸವನ್ನು ಸದನದ ಮುಂದಿಡುತ್ತಾ, ಆತ್ಮಾವಲೋಕನದ ವಿಚಾರಗಳನ್ನು ಪ್ರಸ್ತಾಪಿಸುತ್ತಾ, ಅನೇಕ ಘಟನೆಗಳನ್ನು ಹೇಳುತ್ತಾ ಭಾರತದ ನೆಲಮೂಲದವರೇ, ಶತೃಗಳಿಗೆ ಕೆಂಪುಹಾಸಿನ ಸ್ವಾಗತ ಕೋರಿದ್ದನ್ನು, ದೇಶವಾಸಿಗಳ ವಿರುದ್ಧ ಸಂಚು ಮಾಡಿದ್ದನ್ನು ವಿವರಿಸುತ್ತಾ "ನಾವಿಂದು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಅದರೆ ಸಾಮಾಜಿಕ, ಆರ್ಥಿಕ ಪ್ರಜಾಪ್ರಭುತ್ವವನ್ನು ಸಾಧಿಸಬೇಕಾಗಿದೆ. ಅದನ್ನು ಸಾಧಿಸಿಕೊಳ್ಳದೆ ಇದ್ದಲ್ಲಿ, ಅಸಮಾನತೆಯಿಂದ ತೊಳಲಾಡುವವರು ಸಂವಿಧಾನವನ್ನು, ಪ್ರಜಾಪ್ರಭುತ್ವವನ್ನು ಧ್ವಂಸ ಮಾಡಿಯಾರು" ಎಂದು ಎಚ್ಚರಿಕೆಯನ್ನು ಕೊಟ್ಟರು.

ಮುಂದುವರಿಯುವುದು...

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇದು ಶ್ರೀಮದ್ ರಾಜಚಂದ್ರ ಅವರ 150ನೇ ಜನ್ಮ ದಿನಾಚರಣೆಯ ವರ್ಷವಾಗಿದೆ. ಇಂಥ ಗಾಂಧೀಜಿ ಅವರು ಭಗವದ್ಗೀತೆ, ಬೈಬಲ್, ಲಿಯೋ ಟಾಲ್ಸ್ಟಾಯ್ ಅವರ 'ಕಿಂಗ್ಡಮ್ ಆಫ್ ಗಾಡ್ ಈಸ್ ವಿತಿನ್ ಯು,' ಗ್ರಂಥಗಳನ್ನು ಓದಿದ್ದರು. ಅಲ್ಲದೆ, ಥೋರೊನ 'ಸಿವಿಲ್ ಡಿಸ್ಒಬಿಡಿಯನ್ಸ್' ಮತ್ತು ರಸ್ಕಿನ್ ಬಾಂಡ್‌ನ 'ಅನ್ ಟು ದಿಸ್ ಲಾಸ್ಟ್' ಕೃತಿಗಳಿಂದಲೂ ಅವರು ಅಪಾರ ಪ್ರಭಾವಕ್ಕೊಳಗಾಗಿದ್ದರು.

ರಾಜಕಾರಣದ ನೆಲೆ-ಬೆಲೆ

ಗಾಂಧೀಜಿ ಅವರು 'ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎಂಬ ಅನನ್ಯವಾದ ಗೌರವಕ್ಕೆ ಪಾತ್ರರಾಗಿದ್ದಾರೆ, ನಿಜ. ಇದರ ಬುನಾದಿ, ಅವರ ದಕ್ಷಿಣ ಆಫ್ರಿಕಾದ ದಿನಗಳಲ್ಲೇ ಇದೆ. ಏಕೆಂದರೆ, ಅವರು ಆ ದೇಶದಲ್ಲಿದ್ದಾಗಲೇ ಮೊದಲಿಗೆ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಟವನ್ನು ನಡೆಸಿದ್ದರು. ದರ್ಬಾನ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗಾಂಧೀಜಿ ಅವರನ್ನು ಅಲ್ಲಿಯ ಬಿಳಿಯನೊಬ್ಬ 'ನೀನೊಬ್ಬ ಕರಿಯ, ನಿನಗಿಲ್ಲಿ ಜಾಗವಿಲ್ಲ,' ಎಂದು ಬೈದು, ಹೊರದಬ್ಬಿದ್ದನು. ಆ ಒಂದು ಘಟನೆಯು, ಗಾಂಧೀಜಿ ಅವರು ತಮ್ಮ ಜೀವಮಾನದುದ್ದಕ್ಕೂ ಅನ್ಯಾಯದ ವಿರುದ್ಧ ಸೆಟೆದು ನಿಲ್ಲಲು ನಾಂದಿ ಹಾಡಿತು. ಇದು ತನ್ನಷ್ಟಕ್ಕೆ ತಾನೇ ಒಂದು ಬಹುದೊಡ್ಡ ಆಧ್ಯಾತ್ಮಿಕ ಪರಿವರ್ತನೆಯಾಯಿತು. ಗಾಂಧೀಜಿ ಅವರು 'ಸತ್ಯ' ಮತ್ತು 'ಅಹಿಂಸೆ'ಗಳ ದೀಕ್ಷೆ ತೆಗೆದುಕೊಂಡಿದ್ದು ಕೂಡ ದಕ್ಷಿಣ ಆಫ್ರಿಕಾದಲ್ಲಿಯೇ. ಈ ಬಗ್ಗೆ ಅವರು "ಈ ಎರಡೂ ಆದರ್ಶಗಳು ಜಗತ್ತಿನಲ್ಲಿರುವ ಗಿರಿಸಾಲುಗಳಷ್ಟೇ ಪುರಾತನವಾದವು. ನಾನೇನಿದ್ದರೂ ಈ ಆದರ್ಶಗಳನ್ನು ನನ್ನ ಬದುಕು ಮತ್ತು ಕ್ರಿಯೆಯಲ್ಲಿ ಅನುಸರಿಸಲು ಪ್ರಯತ್ನಿಸುತ್ತಿದ್ದೇನಷ್ಟೆ," ಎಂದು ಹೇಳುತ್ತಿದ್ದರು. 1909ರಲ್ಲಿ ಗಾಂಧೀಜಿ ಅವರು ತಮ್ಮ ಅಸಾಧಾರಣ ಕೃತಿಯಾದ 'ಹಿಂದ್ ಸ್ವರಾಜ್' ಅನ್ನು ಪ್ರಕಟಿಸಿದರು. ಇದಾದ ಆರು ವರ್ಷಗಳ ನಂತರ, ಅಂದರೆ 1915ರಲ್ಲಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ತಾಯ್ನಾಡಿಗೆ ಬಂದವರೇ, ತಮ್ಮ ರಾಜಕೀಯ ಮಾರ್ಗದರ್ಶಕರಾದ ಶ್ರೀ ಗೋಪಾಲಕೃಷ್ಣ ಗೋಖಲೆ ಅವರ ಸಲಹೆಯ ಮೇರೆಗೆ ಇಡೀ ದೇಶವನ್ನು ಸುತ್ತಿದರು. ಈ ಮೂಲಕ ಅವರು ತಮ್ಮನ್ನು ತಾವು ಶ್ರೀಸಾಮನ್ಯನೊಂದಿಗೂ ಆತನ ಕಷ್ಟ-ನಷ್ಟಗಳೊಂದಿಗೂ ಗುರುತಿಸಿಕೊಂಡರು. "ನೀನು ಜನರ ಬಳಿಗೆ ಹೋಗು, ಅವರೊಡನೆ ಬದುಕು, ಅವರನ್ನು ಅರ್ಥ ಮಾಡಿಕೊ ಮತ್ತು ಅವರಿಂದ ಕಲಿ," ಎನ್ನುವುದು ಗೋಖಲೆ ಅವರು ಗಾಂಧೀಜಿಗೆ ಹೇಳಿದ ಸಾಮಾಜಿಕ ಪಾಠವಾಗಿತ್ತು. ಅಲ್ಲದೆ, ಭಾರತಕ್ಕೆ ಬಂದಿಳಿದ ಗಾಂಧೀಜಿಗೆ ಅವರು "ನೀನು ಒಂದು ವರ್ಷ ಮೌನವಾಗಿರಬೇಕು," ಎಂದು ಹೇಳಿದ್ದರು. ಗೋಖಲೆ ಅವರ ಮಾತಿಗೆ ಬೆಲೆ ಕೊಟ್ಟು ಇಡೀ ಭಾರತದಾದ್ಯಂತ ಕೈಗೊಂಡ ಈ ಪಯಣವೇ ಅದುವರೆಗೂ 'ಬ್ಯಾರಿಸ್ಟರ್' ಆಗಿದ್ದ ಗಾಂಧೀಜಿ ಅವರನ್ನು 'ಬಡವರ ಸೇವಕ'ನನ್ನಾಗಿ ಪರಿವರ್ತಿಸಿತು.

ಮುಂದುವರಿಯುವುದು...

Chronology of events of personal & Public life of Mahatma Gandhi

(year wise - from 1869)

December 14. Reached Rajkot via Porabandar
Deceber 17. Left Rajkot for Bombay; on way to Calcutta Congress, met Bhownaggree.
December 27. Moved resolution on South Africa at Congress session.
January 19. Addressed public meeting at Albert Hall, Calcutta, on the question of Indians in South Africa.
January 27. Addressed second meeting at Calcutta on work of Indian Ambulance Corps in Boer War. On January 28. Sailed for Rangoon.
January 31. Reached Rangoon.
February 2. Sometime after this date, returned to Calcutta and stayed for several days with Gokhale.
February 21 or 22. Was seen off by Gokhale and Dr P.C. Ray on tour of Benares, Agra, Jaipur and Palanpur en route to Rajkot, travelling third class. Spent a day at each place; in Benares, called on Annie Besant.
February 26. Reached Rajkot. fort miaul Gorleston will-li Settled down to practice, handling cases at Jamnagar, Veraval and other places in Kathiawar.
March 26. Wrote to W.S. Caine, sending "Notes" on the latest position in South Afria and urging efforts by British friends for redress of grievances of Indians.
March 30. Forwarded the "Notes" to India. W 25 done Sent Bhownaggree a copy of his resolution on South Africa adopted at Calcutta Congress.
March 31. Writing to Khan and Nazar, pleaded that if his presence was Essential, he should be recalled to South Africa before he settled down in India.
April 8. Wrote to Gokhale, congratulating him on his budget speech in the Imperial Legislative Council.
April 22. Contributed special article to The Times of India on Natal Bill to impose poll-tax on children of indentured Indians indirectly compelling their return to India.
May 1. Joined as Secretary, State Volunteer Plague Committee, in Rajkot.

To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.

ನಾಡು ಕಟ್ಟಿದ ನಾಡಪ್ರಭು


ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕಂದಾಯ ಇಲಾಖೆಯಲ್ಲಿ ಈ ಗ್ರಾಮಗಳ ನಕ್ಷೆಗಳು ದೊರೆಯುತ್ತದೆ. ಈ ಗ್ರಾಮದ ದಕ್ಷಿಣದ ಗಡಿ ಕೊನೆಗೊಳ್ಳುವುದೇ ಈ ಗಡಿ ಕಲ್ಲಿರುವ ಸ್ಥಳದಲ್ಲಿ. ಆದ್ದರಿಂದ ಕೆಂಪೇಗೌಡನು ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದಾಗ ಆ ನಗರದ ರಕ್ಷಣೆಗೋಸ್ಕರ ನಾಲ್ಕು ದಿಕ್ಕುಗಳಲ್ಲಿಯೂ ಎತ್ತರವಾದ ಸ್ಥಳಗಳಲ್ಲಿ ಈ ಕಾವಲು ಗೋಪುರಗಳನ್ನು ನಿರ್ಮಿಸಿದ್ದಾನೆ. ಕೆಂಪಾಂಭುಧಿ ಕೆರೆಯ ಏರಿ ಮೇಲಿರುವ ಗೋಪುರ, ಹಲಸೂರಿನ ಕೆರೆ ಏರಿ ಮೇಲಿರುವ ಗೋಪುರ ಮತ್ತು ವೈಯ್ಯಾಲಿ ಕಾವಲು ಗೋಪುರ ಈ ಮೂರು ಗೋಪುರಗಳು ಒಂದೇ ಮಾದರಿಯಲ್ಲಿವೆ. ಲಾಲ್‌ಬಾಗ್ ಬಂಡೆಯ ಮೇಲಿರುವ ಗೋಪುರ ಮೇಲಿನ ಮೂರು ಗೋಪುರಗಳಿಗಿಂತ ಬಿನ್ನವಾಗಿದೆ. ಈ ಕಾವಲು ಗೋಪುರದ ಪೂರ್ವ ಭಾಗದಲ್ಲಿ ಸ್ಥಾನಿಕ ಗಂಗಾಧರನ ಕುಳಿತ ವಿಗ್ರಹ, ಪಶ್ಚಿಮದಲ್ಲಿ ವೇಣುಗೋಪಾಲನ ವಿಗ್ರಹವಿದೆ. ಉತ್ತರದಲ್ಲಿ ಕಮಲದ ಮೇಲೆ ಕುಳಿತ ಲಕ್ಷ್ಮಿ ವಿಗ್ರಹ, ದಕ್ಷಿಣದಲ್ಲಿ ಅರ್ಧನಾರೀಶ್ವರನ ಶಿಲ್ಪವಿದೆ. ಗೋಪುರದ ನಾಲ್ಕು ಮೂಲೆಗಳಲ್ಲಿ ಕುಳಿತ ನಂದಿಯ ಶಿಲ್ಪಗಳಿವೆ.

ಒಂದನೇ ಕಾವಲು ಗೋಪುರ :

ಬೆಂಗಳೂರು ನಗರದ ದಕ್ಷಿಣಕ್ಕೆ ಸುಮಾರು ಆರು ಕಿಲೋಮೀಟರ್ ದೂರದಲ್ಲಿ ಗವಿಪುರ ಗ್ರಾಮವಿದೆ. ಇದರ ಪಕ್ಕದಲ್ಲಿರುವುದೇ ಗವಿಗಂಗಾಧರೇಶ್ವರ ದೇವಾಲಯ. ಕೆಂಪೇಗೌಡನು ತನ್ನ ಕುಲದೇವತೆಯ ಹೆಸರಿನಲ್ಲಿ ಕೆಂಪಾಂಬುದಿ ಕೆರೆಯ ಏರಿಯ ಮೇಲೆ ದಕ್ಷಿಣಕ್ಕೆ ಎತ್ತರವಾದ ಬೆಟ್ಟದ ಬಂಡೆಗಳ ನಡುವೆ ಸುಮಾರು ಎರಡು ಅಡಿ ಎತ್ತರದ ಜಗತಿಯ ಮೇಲೆ ನಾಲ್ಕು ಕಂಬಗಳನ್ನು ಇಟ್ಟಿಗೆ ಮತ್ತು ಗಾರೆಗಳಿಂದ ದ್ರಾವಿಡ ಶೈಲಿಯಲ್ಲಿ ಕಲಾತ್ಮಕವಾಗಿ ಗೋಪುರವನ್ನು ಕಟ್ಟಿಸಿದ್ದಾನೆ. ಈ ಗೋಪುರವು ದೇವಾಲಯಗಳ ಮೇಲಿರುವ ಶಿಖರಗಳ ಮಾದರಿಯಲ್ಲಿ ಎರಡು ಅಡಿ ಎತ್ತರದ ಅಧಿಷ್ಠಾನದ ಮೇಲೆ ಸುಂದರವಾಗಿ ನಿರ್ಮಿಸಲಾಗಿದೆ. ಈ ಗೋಪುರವು ಭೂಮಟ್ಟದಿಂದ ಸುಮಾರು 20 ಅಡಿ ಎತ್ತರವಾಗಿದೆ.



ಕೆಂಪೇಗೌಡರು ನಿರ್ಮಿಸಿದ ಗವಿಗಂಗಾಧರೇಶ್ವರ ದೇವಸ್ಥಾನ



ಕ್ರಿ.ಶ. 1791 ರಲ್ಲಿ ಬ್ರಿಟೀಷ್ ಕಲಾವಿದ ಜೇಮ್ಸ್ ಹಂಟರ್ ಚಿತ್ರಿಸಿದ ಜಲವರ್ಣ ಚಿತ್ರದಲ್ಲಿ ಈ ಗೋಪುರದ ಸುತ್ತ–ಮುತ್ತ ಬಯಲು ಪ್ರದೇಶವಿದೆ. ಇತ್ತೀಚೆಗೆ ಈ ಗೋಪುರದ ಪಕ್ಕದಲ್ಲಿ ಬಂಡಿಮಹಾಂಕಾಳಮ್ಮ ಮತ್ತು ವೀರಭದ್ರ ದೇವರ ಗುಡಿಗಳನ್ನು ಕಟ್ಟಿದ್ದಾರೆ. ಕಾವಲು ಗೋಪುರಕ್ಕೆ ಹೋಗಿ–ಬರಲು ಆ ಕಾಲದಲ್ಲೇ ಕಲ್ಲಿನ ಸೋಪಾನಗಳನ್ನು ನಿರ್ಮಿಸಿದ್ದರು. ಈ ಕಾವಲು ಗೋಪುರದ ನಿರ್ವಹಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ನಿರ್ವಹಿಸುತ್ತಿದ್ದಾರೆ. ಈ ಕಾವಲು ಗೋಪುರದ ಜಗತಿಯ ಮೇಲೆ ಪೂರ್ವದ ಅಂಚಿನಲ್ಲಿ ಈ ಕೆಳಗೆ ನಮೂದಿಸಿರುವ ಇಂಗ್ಲೀಷ್ ಬರವಣಿಗೆ ಇದೆ.

"This is one of the four Watch Towers said to have been built by the famous Kempe Gowda of Magadi 1521-1569 and marks the limits to which it was predicted that the town of Bangalore would extend" ಎಂದು ಬರೆಯಲಾಗಿದೆ.

ಅಲ್ಲದೆ ಇದನ್ನು ಮಾಗಡಿ ಕೆಂಪೇಗೌಡನು ನಿರ್ಮಿಸಿದನೆಂದು ತಪ್ಪಾಗಿ ಅರ್ಥೈಸಿದ್ದಾರೆ. ಈ ಕಾವಲು ಗೋಪುರಗಳನ್ನು ನಿರ್ಮಾತೃ ಹಿರಿಯ ಕೆಂಪೇಗೌಡನಾಗಿದ್ದಾರೆ. ಈ ಮೇಲಿನ ಇಂಗ್ಲೀಷ್ ಒಕ್ಕಣೆಯಲ್ಲಿ ತೇದಿಯು ತಪ್ಪಾಗಿರುವುದಲ್ಲದೆ ಹಿರಿಯ ಕೆಂಪೇಗೌಡನೆನ್ನುವ ಬದಲು ಮಾಗಡಿ ಕೆಂಪೇಗೌಡನೆಂದು ಸಂಭೋದಿಸಲಾಗಿದೆ.

ಮುಂದುವರಿಯುವುದು...

ಆಧಾರಿತ ಕೃತಿ : ಯಲಹಂಕ ನಾಡಪ್ರಭುಗಳು
ಲೇಖಕರು : ಎಚ್.ಎಂ. ಬೋರಯ್ಯ




ಕೆಂಪೇಗೌಡರ ಕಾಲದ ಕಾವಲು ಗೋಪುರ – ಗವೀಪುರ

ದೇಶಭಕ್ತ ಸಂಗೊಳ್ಳಿ ರಾಯಣ್ಣ : (15.08.1796 – 26.01.1831)

– ಡಾ. ವಿ . ಪ್ರಶಾಂತ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ರಾಯಣ್ಣ, ಬ್ರಿಟಿಷರ ಹೆಚ್ಚಿನ ಸೈನಿಕರು ಯುದ್ಧರಂಗದಲ್ಲಿದ್ದದ್ದನ್ನು ಗಮನಿಸಿ ಖಜಾನೆಗಳಿಗೆ ಇದ್ದ ಕಾವಲುಪಡೆಯನ್ನು ಛಿದ್ರಗೊಳಿಸಿ ನಂದಗಡ, ಖಾನಾಪುರ, ಸಂಪಗಾವಿ ಮತ್ತು ಹಲಗಾ, ಇಟಗಿ, ಅಂಕಲಗಿ ಹಡಲಗಿ, ಸಂಪೇರ್ ಗಡ, ಹಬಸಿ, ಗೋದೊಳ್ಳಿ ಸೇರಿದಂತೆ ಎಲ್ಲ ಕಡೆಯ ಖಜಾನೆ ಲೂಟಿ ಮಾಡಿ ಅರ್ಧದಷ್ಟನ್ನು ಜನರಿಗೆ ಹಂಚಿ ಹೊರೆ ಕಡಿಮೆ ಮಾಡಿದ್ದನು. ಉಳಿದರ್ಧ ಸಂಪತ್ತನ್ನು ತನ್ನೊಂದಿಗೆ ಸೈನ್ಯ ಸೇರಿದವರ ಊಟ ಮತ್ತು ಆಯುಧಗಳಿಗಾಗುವ ಖರ್ಚಿಗೆ ಸರಿತೂಗಿಸುತ್ತಿದ್ದನು. ಇದಕ್ಕೆಲ್ಲ ಬ್ರಿಟಿಷ್ ಖಜಾನೆ ಲೂಟಿ ಅನಿವಾರ್ಯವಾಗಿತ್ತು. ಈ ವಿಷಯ ಲಾರ್ಡ್ ಡಾಲ್‌ಹೌಸಿಯವರೆಗೂ ಹೋಗಿತ್ತು. ಇತ್ತ ಪ್ರತಿ ಹಳ್ಳಿಗಳಲ್ಲಿ ಜನ ರಾಯಣ್ಣನ ಪರವಾಗಿ ನಿಲ್ಲತೊಡಗಿದ್ದರು. ಅದೆಲ್ಲದಕ್ಕೂ ಕಳಸ ಇಟ್ಟಂತೆ ನಂದಗಡ, ಖಾನಾಪುರ, ಸೋಮೇಶ್ವರ, ಪ್ರತಾಪಗಡ, ಅಸಿಗೋಳ, ಬೈಲಹೊಂಗಲದ ಕಿಲ್ಲೆಗಳ ಮೇಲೆ ರಾಯಣ್ಣ ಕಿತ್ತೂರು ನಂದಿಧ್ವಜ ಹಾರಿಸಿಬಿಟ್ಟನು. ಅವೆಲ್ಲ ಕಿತ್ತೂರು ಸಂಸ್ಥಾನದ ಭಾಗವೆಂದು ಸಾರಿಬಿಟ್ಟನು. ಹಾಳ, ಅಗಸನಟ್ಟಿ, ಹವಗಿ, ಹನುಮನಟ್ಟಿ, ತಲವಾಡಿಗಳ ಖಜಾನೆ ವಶಪಡಿಸಿಕೊಂಡು ಅಲ್ಲಿಯೇ ಬ್ರಿಟಿಷರು ಬರುವವರೆಗೂ ಕಾಯ್ದು ಕೂತಿದ್ದನು. ಇದನ್ನು ತಿಳಿದ ಬ್ರಿಟಿಷ್ ಸೈನಿಕರು ಗುಂಡಿನ ದಾಳಿ ಆರಂಭಿಸಿದ್ದರು ಆದರೆ ಅಡಗು ತಾಣದಿಂದ ಹೊರಕ್ಕೆ ಬಾರದೆ, ಅವರ ಬಳಿಯ ಮದ್ದು ಗುಂಡು ಮುಗಿಯುವವರೆಗೂ ಸಾವಧಾನಿಸಿ, ಆಮೇಲೆ ಒಮ್ಮೆಲೇ ಅವರ ಮೇಲೆಬಿದ್ದು ಕತ್ತರಿಸಿ ಚೆಲ್ಲಿದ್ದು ಭಾರತದೆಲ್ಲೆಡೆ ಸುದ್ದಿಯಾಗಿಬಿಟ್ಟಿತ್ತು. ರಾಯಣ್ಣ ಎಲ್ಲಿಂದ ಬಂದು, ಎಲ್ಲಿಗೆ ಹೋಗುತ್ತಿದ್ದಾನೆ ಎನ್ನುವುದೇ ಗೊತ್ತಾಗದಂತಾಗಿಹೋಗಿತ್ತು. ಬ್ರಿಟಿಷ್ ಅಧಿಕಾರಿಯಾದ ಧಾರವಾಡದ ಕಲೆಕ್ಟರ್ ನಿಸ್ಬತ್‌ಗೆ ಮೇಲಾಧಿಕಾರಿ ಲಾರ್ಡ್ ಡಾಲ್‌ಹೌಸಿಯ ಸೂಚನೆ ಮೇರೆಗೆ ಮೊದಲು ರಾಯಣ್ಣನನ್ನು ಹುಡುಕುವುದು, ನಂತರ ಕಾರ್ಯಾಚರಣೆ ಎನ್ನುವುದು ಯೋಜನೆಯಾಗಿತ್ತು. ರಾಯಣ್ಣನ



ಮಾಹಿತಿ ಕೊಟ್ಟರೆ ಹತ್ತು ಸಾವಿರ ಇನಾಮು ಘೋಷಿಸಿದ್ದ ಕೃಷ್ಣರಾವ್. ಕಾರಣ ಹಿಂದೊಮ್ಮೆ ತನ್ನ ಕುಟುಂಬದವರನ್ನು ಅವಮಾನ ಮಾಡಿದ ಸಹೋದರ ಕುಲ್ಕರಣಿಯನ್ನು ರಾಯಣ್ಣ ಹಾಡಹಗಲೇ ಕಿತ್ತೂರ ಮಧ್ಯದಲ್ಲಿ ಕತ್ತರಿಸಿ ಕೊಂದಿದ್ದ ಸೇಡು, ದ್ವೇಷವೂ ಕೃಷ್ಣರಾವ್‌ಗೆ ಇತ್ತು. ಹತ್ತು ಸಾವಿರದ ದುರಾಸೆಗಾಗಿ ರಾಯಣ್ಣನಿಗೆ ಶತ್ರುಗಳು ಸೃಷ್ಟಿಯಾಗಿಬಿಟ್ಟರು. ಅದೊಂದು ದಿನ ರಾಯಣ್ಣ ಬಿಡಾರ ಹೂಡಿದ್ದ ಗುಡ್ಡಣಹಳ್ಳಿ ಹತ್ತಿರ ಬ್ರಿಟಿಷ್ ಸೈನ್ಯ ಸುತ್ತುವರೆದಿದ್ದು ಅಗಾಧ ಬಂಡೆಗಳ ಮಧ್ಯದಲ್ಲಿ ಕಾಣಿಸುತ್ತಿತ್ತು. ಬಿಡಾರದ ಸುತ್ತಮುತ್ತಲೆಲ್ಲಾ ಧೂಳು ಆವರಿಸಿತ್ತು. ಸುತ್ತಲಿನ ಪೊದರುಗಳಿಂದ ಸಹಚರರೊಡನೆ ನುಗ್ಗಿ ಬಂದ ರಾಯಣ್ಣ ಬ್ರಿಟಿಷ್ ಸೈನಿಕರನ್ನು ತರಿದು ಹಾಕಿದ್ದನು. ಪರೋಕ್ಷ ದಾಳಿ ಸಂಘಟಿಸಿದ್ದ ರಾಯಣ್ಣನ ಕೈಯಲ್ಲಿ ಸೈನಿಕರು ಮಣ್ಣಾಗಿದ್ದರು. ಈ ಪರೋಕ್ಷ ಮತ್ತು ಯೋಜಿತ ಯುದ್ಧದಲ್ಲಿ ಬ್ರಿಟಿಷರಿಗೆ ಅವಮಾನಕರ ಸೋಲುಂಟಾಗಿತ್ತು.

ಮುಂದುವರಿಯುವುದು...

'ಉಪ್ಪಿನ ಸತ್ಯಾಗ್ರಹ'



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 'ಉಪ್ಪಿನ ಸತ್ಯಾಗ್ರಹ' ಅಥವಾ ದಾಂಡಿಮಾರ್ಚ್, ನಿರ್ಣಾಯಕ ಚಳುವಳಿಯಾಗಿದೆ. 1930ರ 12ನೇ ಮಾರ್ಚ್‌ರಂದು ಸಬರಮತಿ ಆಶ್ರಮದಿಂದ ಆರಂಭವಾಗಿ ಏಪ್ರಿಲ್ 6ರಂದು ಬಂಗಾಳ ಕೊಲ್ಲಿ ತೀರದ ದಾಂಡಿಯಲ್ಲಿ ಸಮುದ್ರದ ನೀರನ್ನು ತೆಗೆದು ಉಪ್ಪನ್ನು ತಯಾರಿಸುವುದು ಮತ್ತು ವಿತರಿಸುವುದರ ಮುಖಾಂತರ, ಬ್ರಿಟಿಷರು ವಿಧಿಸಿದ್ದ ಉಪ್ಪಿನ ತೆರಿಗೆಯ ಕಾನೂನನ್ನು ಭಂಗ ಮಾಡುವುದಾಗಿತ್ತು. 1930ರ ಲಾಹೋರ್ ಕಾಂಗ್ರೆಸ್ ಮಹಾಧಿವೇಶನದಲ್ಲಿ ಸ್ವಾತಂತ್ರ್ಯ ಆಂದೋಲನದ ನೇತೃತ್ವವನ್ನು ಗಾಂಧಿ ಅವರು ವಹಿಸಬೇಕೆಂದು ತೀರ್ಮಾನಿಸಿತ್ತು. 1930ರ ಜನವರಿ 26ನ್ನು ಸ್ವರಾಜ್ಯ ದಿನವಾಗಿ ಆಚರಿಸಿದರು. ಗಾಂಧಿ ಅವರು, ಕಾರ್ಯಕರ್ತರು ಆಶ್ರಮವಾಸಿಗಳು ಹಾಗೂ ಜನರನ್ನು ಸತ್ಯ, ಅಹಿಂಸೆಯ ಮಾರ್ಗದಿಂದ "ಕಾನೂನು ಭಂಗ" ಮಾಡಲು ತರಬೇತಿಗೊಳಿಸಿದರು. ಸರ್ಕಾರ ಉಪ್ಪು ತೆರಿಗೆ ಪಾವತಿಸದವರನ್ನೂ, ಅನುಮತಿ ಇಲ್ಲದೆ ಉಪ್ಪು ತಯಾರಿಕೆ, ಮಾರಾಟ ಮಾಡಿದವರಿಗೆ ಜೈಲು ಶಿಕ್ಷೆ ವಿಧಿಸಿದ್ದನ್ನು ಅಂದಿನ ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರಿಗೆ ದಿ.02.03.1930ರಂದು ಪತ್ರ ಬರೆದು "ಎಲ್ಲರ ಆಹಾರದಲ್ಲಿ ಉಪ್ಪು ತೀರಾ ಅವಶ್ಯಕ, ಅದರ ಮೇಲೆ ಕರ ವಿಧಿಸುವುದು ಬಡವರಿಗೆ ಕಷ್ಟವಾಗುತ್ತದೆ. ಈ ತೆರಿಗೆಯನ್ನು ತೆಗೆಯಬೇಕು. ಈ ತಿಂಗಳ 11ನೇ ದಿನ ಆಶ್ರಮವಾಸಿಗಳೊಂದಿಗೆ ಉಪ್ಪಿನ ಶಾಸನವನ್ನು ಮುರಿಯಲು ಹೊರಡುವೆನು. ನನ್ನ ಉದ್ದೇಶ ಭಂಗ ಪಡಿಸಲು ದಸ್ತಗಿರಿ ಮಾಡುವಿರೆಂದು ಬಲ್ಲೆ. ನನ್ನ ನಂತರ ಸತ್ಯಾಗ್ರಹ ಮುಂದುವರಿಸಲು ಸಹಸ್ರರಿದ್ದಾರೆ." ಎಂದರು. ದಂಡಿಯಾತ್ರೆಯ 79 ಜನರ ತಂಡದಲ್ಲಿ ಕರ್ನಾಟಕದ ಮೈಲಾರ ಮಹಾದೇವ ಇದ್ದರು. 25 ದಿನಗಳು 241 ಮೈಲಿ ಕ್ರಮಿಸಿ 26ನೇ ದಿನ ಏಪ್ರಿಲ್ 6ರಂದು ದಾಂಡಿಯಲ್ಲಿ ಉಪ್ಪಿನ ಕಾನೂನು ಭಂಗಗೊಳಿಸಲು ನಿರ್ಣಯಿಸಲಾಗಿತ್ತು. ದಿನ 10.ಕಿ.ಮೀ. ನಡಿಗೆ, ಗ್ರಾಮ ವಾಸ್ತವ್ಯ, ಶಿಬಿರ, ಪ್ರಾರ್ಥನೆ, ಸ್ವಚ್ಛತೆ, ಶಿಕ್ಷಣ, ವಾರಕ್ಕೊಮ್ಮೆ ವಿಶ್ರಾಂತಿ, ದಿನಚರಿಯಾಯಿತು. ಈ ವಿಚಾರ, ದೇಶ ವಿದೇಶದ ಪತ್ರಿಕೆಗಳಲ್ಲಿ ಸುದ್ದಿಯಾಯಿತು. ಅಮೇರಿಕಾದ ಪತ್ರಿಕಾ ಪ್ರತಿನಿಧಿಯೊಬ್ಬರ ಪ್ರಶ್ನೆಗೆ ಗಾಂಧಿ **"I want world sympathy in the battle of right, against might"** ಎಂದುತ್ತರಿಸಿದ್ದರು.

ಮುಂದುವರಿಯುವುದು...

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಲ್ಕೋಹಾಲ್‌ನ ಆಕರ್ಷಣೆ – ಅಪಾಯ

ಕುಮಾರ್‌ನ ಸಹಚರರೆಲ್ಲಾ ಜೋರಾಗಿ ನಕ್ಕರು. ಅಭ್ಯಾಸವಿಲ್ಲವೇ, ಜಗದೀಶ, ಅಭ್ಯಾಸ ಈ ದಿನ, ಈ ಕ್ಷಣವೇ ಶುರುವಾಗಲೀ, ಏಯ್ ಒಂದು ಪೆಗ್ ಬೀರ್ ತೆಗೆದುಕೊಂಡು ಬನ್ರೋ, ನಮ್ಮ ಹೊಸ ಫ್ರೆಂಡ್ ನಮ್ಮ ಡ್ರಿಂಕ್ಸ್ ಪಾರ್ಟಿಗೆ ವಿಧ್ಯುಕ್ತವಾಗಿ ಸೇರಲಿ" ಎಂದ ಕುಮಾರ್. "ಬೇಡ ಬೇಡ' ಎಂದು ಜಗದೀಶ ಕೊಸರಾಡಿದ. "ಜಗದೀಶ ಮೂರ್ಖನಂತಾಡಬೇಡ ತಗೋ, ಈ ಬೀರ್ ಕುಡಿ. ಇದು ಟಾನಿಕ್ ಇದ್ದ ಹಾಗೆ. ಎಲ್ಲಾ ಟಾನಿಕ್‌ನಲ್ಲೂ ಇದಿರುತ್ತೆ. ಬೀರ್ ಆರೋಗ್ಯಕ್ಕೆ ಒಳ್ಳೆಯದು. ಇದನ್ನು ಕುಡಿಯುವುದರಿಂದ ನಿನ್ನ ಸಂಪ್ರದಾಯಕ್ಕೆ ಅಡ್ಡಿಯಾಗೋದಿಲ್ಲ. ಕಮಾನ್ ಬೇಡ ಅನ್ನಬೇಡ' ಕುಮಾರ್ ಒತ್ತಾಯ ಮಾಡಿದ. ಇದರಿಂದ ನಿಶೆ ಬರೋದಿಲ್ಲ. ಮನಸ್ಸಿಗೆ ಖುಷಿ ಶರೀರಕ್ಕೆ ಕಾಂತಿಯನ್ನು ಕೊಡೋ ಪಾನೀಯ ಇದು' ಎಂದು ಬೀರ್ ತುಂಬಿದ ಲೋಟವನ್ನು ಜಗದೀಶನ ಕೈಲಿಟ್ಟ. ಬೇರೆ ದಾರಿ ಕಾಣದೆ, ಜಗದೀಶ ತನ್ನ ಜೀವನದಲ್ಲಿ ಮೊದಲ ಸಲ ಆಲ್ಕೋಹಾಲಿನ ರುಚಿ ನೋಡಿದ. ಅದು ಅವನಿಗೆ ಅಷ್ಟೇನೂ ಇಷ್ಟವಾಗಲಿಲ್ಲ. ಅವನು ಬೀರನ್ನು ಗುಟುಕರಿಸಿದ್ದನ್ನು ಕಂಡು ಎಲ್ಲರೂ ಹೋ ಎಂದು ನಕ್ಕರು. ಜಗದೀಶನೂ ಬಲವಂತಕ್ಕೆ ನಕ್ಕ. ಏಪ್ರಿಲ್, 2000 : "ಸ್ನೇಹಿತರೇ, ಹಾಸ್ಟೆಲ್ ಸೆಕ್ರೆಟರಿಯಾಗಿ ನನ್ನನ್ನು ಚುನಾಯಿಸಿದ್ದಕ್ಕಾಗಿ ನಾನು ನಿಮಗೆಲ್ಲಾ ಋಣಿಯಾಗಿದ್ದೇನೆ. ಈ ಋಣವನ್ನು ಸ್ವಲ್ಪ ಸ್ವಲ್ಪವಾಗಿ ತೀರಿಸುತ್ತೇನೆ. ನನ್ನ ಮೊದಲ ಕಂತು ಈ ಡ್ರಿಂಕ್ಸ್ ಪಾರ್ಟಿ, ನಿಮಗೆ ಬೇಕಾದ್ದನ್ನು, ಬೇಕಾದಷ್ಟು ಕುಡಿಯಿರಿ. ಖುಷಿಪಡಿ" ಎಂದ ಜಗದೀಶ. ಎಲ್ಲರೂ ಜಗದೀಶ್ ಜಿಂದಾಬಾದ್' ಎಂದು ಕೂಗಿದರು. ಅವನು ಅವರನ್ನು ತಡೆಯುತ್ತಾ ಫ್ರೆಂಡ್ಸ್, ಜಗದೀಶ್ ಜಿಂದಾಬಾದ್ ಎನ್ನಬೇಡಿ, ಡ್ರಿಂಕ್ಸ್ ಜಿಂದಾಬಾದ್ ಎನ್ನಿ' ಎಂದ. ಎಲ್ಲರೂ ಚಪ್ಪಾಳೆ ತಟ್ಟಿ, ಹೋ ಎಂದು ಗಲಾಟೆ ಮಾಡಿದರು. "ಡ್ರಿಂಕ್ಸ್ ತೆಗೆದುಕೊಳ್ಳುವ ಮೊದಲೇ ಇಷ್ಟು ಗಲಾಟೆ ಮಾಡಿದರೆ, ತೆಗೆದುಕೊಂಡಾದ ಮೇಲೆ ಇನ್ನೆಷ್ಟು ಮಾಡುತ್ತೀರಿ" ಎಂದು ತಮಾಷೆ ಮಾಡಿದ. "ಈ ದಿನ ಯಾರೂ ಬೀರ್ ಕುಡಿಯಬೇಡಿ. ಇಲ್ಲಿ ಜಿನ್ ಇದೆ. ರಮ್ ಇದೆ. ವಿಸ್ಕಿ ಇದೆ. ಮಜಾ ಮಾಡಿ" ಎಂದ. ನಿಮಿಷಗಳು ಉರುಳಿದಂತೆ, ಶೀಶೆಗಳು ಖಾಲಿಯಾದುವು. ಮೊದಲು ನೆಲಕ್ಕೆ ಉರುಳಿದವನೆಂದರೆ ಜಗದೀಶ, ಬಾಯಿಗೆ ಬಂದುದನ್ನು ಮಾತಾಡುತ್ತಾ ಪ್ರಲಾಪಿಸತೊಡಗಿದ. ವಾಂತಿ ಮಾಡಿಕೊಂಡ, ಕಷ್ಟಪಟ್ಟು ಅವನನ್ನು ರೂಮಿಗೆ ಸಾಗಿಸಿದರು. 'ಜಗದೀಶ ಈ ಹೊತ್ತು ಬಹಳ ಬೇಗ ಔಟಾಗಿ ಬಿಟ್ಟನಲ್ಲಪ್ಪ' ಎಂದು ಒಬ್ಬ 'ಔಟಾಗದೇ ಇನ್ನೇನಾಗುತ್ತೆ ನಾವೆಲ್ಲ ಸೋಡಾ ಬೆರೆಸಿ ವಿಸ್ಕಿ ಕುಡಿದರೆ, ಅವರು ನೇರವಾಗೇ ಬಾಟಲೆ ಎತ್ತುತ್ತಾನೆ, ಗಂಡು ಅಂದ್ರೆ ಅವನೇ ಗಂಡು, ಗುಂಡು ಹಾಕುವುದರಲ್ಲಿ ಬಹದ್ದೂರು ಗಂಡು" ಎಂದು ಇನ್ನೊಬ್ಬ ಅವನನ್ನು ಮೆಚ್ಚಿಕೊಂಡ.

ಮುಂದುವರಿಯುವುದು...

ಮಹಾತ್ಮ ಗಾಂಧಿ ಮತ್ತು ಪ್ರಕೃತಿ ಚಿಕಿತ್ಸೆ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕಸ್ತೂರ ಬಾ ಕೂಡ ಬೆಂಬಲ ನೀಡ್ತಾರೆ. ಆಗ ಒಪ್ಪಿಕೊಳ್ತಾರೆ. ಮೇಕೆಯ ಹಾಲು ಕುಡೀತಾರೆ. ದಿನದಿನಕ್ಕೂ ಚೇತರಿಸಿಕೊಳ್ತಾ ಬರ್ತಾರೆ. ಅಕ್ಕಿ, ಗೋಧಿ, ಜೋಳದ, ಪ್ರಮಾಣಕ್ಕಿಂತ ಬೇಳೆಕಾಳುಗಳು ಹೆಚ್ಚಿರಲಿ ಎನ್ನುತ್ತಾರೆ. ನಿಧಾನವಾಗಿ ಅಗಿದು ತಿನ್ನಬೇಕು. ಚೆನ್ನಾಗಿ ಅಗಿದಷ್ಟು ಜೊಲ್ಲುರಸ ಬೆರೆತಾಗ ಜೀರ್ಣಶಕ್ತಿಗೆ ಸಹಕಾರಿ ಪ್ರತಿದಿನ ತರಕಾರಿ, ಸೊಪ್ಪನ್ನು ಸೇವಿಸಿ ಒಳ್ಳೆಯದು ಎನ್ನುತ್ತಾರೆ. ಸೌತೆ, ಸೊಪ್ಪುಗಳು ಹಸಿಯಾಗಿಯೇ ತಿನ್ನುತ್ತಿದ್ದರು.

ಹಣ್ಣುಗಳು : ಆಯಾ ಕಾಲದಲ್ಲಿ ಸಿಗುವ ಹಣ್ಣುಗಳು ಮಾತ್ರ ಸೇವಿಸಿ. ಸೀಬೆ(ಪೇರಲ), ದ್ರಾಕ್ಷಿ, ಕಿತ್ತಲೆ, ಪಪ್ಪಾಯ, ಬಾಳೆಹಣ್ಣು, ಮೋಸಂಬಿ, ಇರಬೇಕು ಎನ್ನುತ್ತಾರೆ. ನಿಂಬೆಹಣ್ಣು ಆಹಾರದ ಭಾಗವಾಗಿರಬೇಕು ಎನ್ನುತ್ತಾರೆ. ಮಸಾಲೆ ಪದಾರ್ಥಗಳು ನಮಗೆ ಬೇಡವೇ ಬೇಡ ಅಂತಾರೆ. ಬ್ರಿಟಿಷರು ಮತ್ತು ನೀಗ್ರೋ, ಆಫ್ರಿಕಾದ ಜನರು ಮಸಾಲೆಯ ಬಳಕೆಯನ್ನು ಮಾಡುವುದಿಲ್ಲ. ಗಾಂಧೀಜಿಯವರು ಮುಂಚೆ ಚಹಾ, ಕಾಫಿ ಕುಡಿಯುತ್ತಿರುತ್ತಾರೆ. ನಂತರ ಬಿಡುತ್ತಾರೆ.

ಮಣ್ಣಿನ ಚಿಕಿತ್ಸೆ : 1901ರವರೆಗೆ ಆರಂಭದಲ್ಲಿ ಕಾಯಿಲೆಯಾದಾಗ ವೈದ್ಯರ ಬಳಿ ರೋಗಿ ಔಷಧಿ ಸೇವಿಸುತ್ತಿದ್ದರು. ಆಹಾರದ ಪ್ರಯೋಗಗಳನ್ನು ಮಾಡಿಕೊಳ್ಳುತ್ತಿದ್ದರು. ಪ್ರಕೃತಿ ಚಿಕಿತ್ಸಾ ವಾಙ್ಮಯ ಗ್ರಂಥ ಓದುತ್ತಾರೆ. ಮತ್ತೊಂದು ಪುಸ್ತಕ ಜಸ್ಟ್ ರಚಿಸಿದ 'ರಿಟರ್ನ್ ಟು ನೇಚರ್' ಪುಸ್ತಕ ಓದ್ತಾರೆ. ಮಣ್ಣಿನ ಉಪಯೋಗದ ಬಗ್ಗೆ ಜಸ್ಟ್ ಬಹಳಷ್ಟು ಹೇಳಿರುವುದು ಗಮನಿಸಿದರೆ. ಮಲಬದ್ಧತೆಯಾದರೆ ಕೆಳಹೊಟ್ಟೆಯ ಮೇಲೆ ಒದ್ದೆ ಮಣ್ಣಿನ ಪಟ್ಟೆಯನ್ನು ಹಾಕಬೇಕು. ಶುದ್ಧವಾದ ಮಣ್ಣನ್ನು ನೀರಿನೊಂದಿಗೆ ಬೆರೆಸಿ ಒದ್ದೆಮಾಡಿ ಬಟ್ಟೆಯ ಮೇಲೆ ಹರಡಿ ರಾತ್ರಿಯಲ್ಲ ಕಿಬ್ಬೊಟ್ಟೆಯ ಮೇಲೆ ಇಟ್ಟುಕೊಂಡಿರ್ತಾರೆ. ಪರಿಣಾಮ ತೃಪ್ತಿದಾಯಕವಾಗಿರುತ್ತದೆ. ಬೆಳಗ್ಗೆ ಮಲವಿಸರ್ಜನೆ ಸಲೀಸಾಗಿ ಆಗುತ್ತದೆ. ಒದ್ದೆಮಣ್ಣಿನ ಪಟ್ಟೆ 3ಅಂಗುಲ ಅಗಲ, ಆರು ಅಂಗಾಲು ಉದ್ದ, ಅರ್ಧ ಅಂಗುಲ ದಪ್ಪ ಇರಬೇಕು. ತಲೆನೋವು ಇರುವಾಗ ತಲೆಗೆ ಮಣ್ಣಿನ ಪಟ್ಟೆ ಕಟ್ಟಬೇಕು. ನೋವು ಶಮನವಾಗುತ್ತದೆ. ಮಣ್ಣಿನ ಪ್ರಯೋಗವನ್ನು ಕುರುಗಳಾದಾಗ, ಹುಣ್ಣುಗಳಾದಾಗ ಮಾಡ್ತಾರೆ. ಆಶ್ರಮವಾಸಿಗಳೂ ಮಾಡ್ತಾರೆ. ಒಂದು ಶುಭ್ರಬಟ್ಟೆ ತೆಗೆದುಕೊಂಡು ಅದನ್ನು ಪೊಟ್ಯಾಸಿಯಂ ಪರಮೇನೇಟ್ ದ್ರಾವಣದಲ್ಲಿ ಅದ್ದಿ ಅದರ ಮೇಲೆ ಒದ್ದೆ ಮಣ್ಣನ್ನು ತೆಳ್ಳಗೆ ಹರಡಿ ಮೇಲೆ ಬಟ್ಟೆ ಮುಚ್ಚಿ ಪೋಲ್ಟೀಸ್ ಮಾಡಿ ಹುಣ್ಣನ್ನು ತೊಳೆದು ಈ ಮಣ್ಣಿನ ಪಟ್ಟೆ ಹಾಕಬೇಕು. ಕಣಜದ ಹುಳು ಕಡಿದಾಗಲೂ ಈ ಚಿಕಿತ್ಸೆ ಒಳ್ಳೆಯದು. ಚೇಳಿನ ಕಡಿತಕ್ಕೂ ಪ್ರಯೋಗ ಮಾಡ್ತಾರೆ. ಅಷ್ಟಾಗಿ ಪ್ರಯೋಜನವಾಗಲಿಲ್ಲ ಅಂತ ಹೇಳುತ್ತಾರೆ. ಜ್ವರ ಇರುವಾಗ ತಲೆಯ ಮೇಲೆ, ಹೊಟ್ಟೆಯ ಮೇಲೆ ಮಣ್ಣಿನ ಪಟ್ಟೆ ಹಾಕಿದರೆ ಫಲಕಾರಿ. ವಿಷಮಶೀತ ಜ್ವರ ಬಂದಾಗಲೂ ಇದು ಉಪಯುಕ್ತ ಅಂತ ಹೇಳ್ತಾರೆ. ಮಣ್ಣಿಗೆ ಉಪ್ಪು, ಎಣ್ಣೆ ಸೇರಿಸಿ ಬೆಚ್ಚಗೆ ಮಾಡಿ ಪೋಲ್ಟೀಸನ್ನು ಕಟ್ಟಬೇಕು.

ಮುಂದುವರಿಯುವುದು...

ಬಿಸಿಲಿನ ಧಗೆ – ಕಾಯಿಲೆಗಳ ಬಗೆ

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಶಿವರಾತ್ರಿ ಬಂತೆಂದರೆ ಎಲ್ಲೆಲ್ಲೂ ಶಿವಶಿವ ಎನ್ನುವಷ್ಟು ಬಿಸಿಲಿನ ತಾಪ ತಾಪವನ್ನು ತಡೆಯದೆ ಅನೇಕ ರೋಗಗಳು ಕಂಡುಬರುತ್ತವೆ. ಅವುಗಳಲ್ಲಿ

1. ದೇಹದಲ್ಲಿ ನೀರಿನ ಕೊರತೆ ಉಂಟಾಗುತ್ತದೆ ಅದಕ್ಕೆ ಡಿಹೈಡ್ರೇಶನ್ ಎನ್ನುತ್ತಾರೆ. ಇದರಿಂದ ದೇಹದಲ್ಲಿ ಉಪ್ಪಿನಾಂಶದ ಕೊರತೆ ಉಂಟಾಗುತ್ತದೆ. ಅದನ್ನೇ,ಎಲೆಕ್ಟ್ರೋಲೈಟ್ ಇಂಬ್ಯಾಲೆನ್ಸ್ ಎನ್ನುತ್ತಾರೆ.
2. ದೇಹ ಸುಸ್ತಾಗುವುದು, ತಲೆನೋವು, ವಾಕರಿಕೆ ಅಥವಾ ವಾಂತಿ ಬರುವುದು.
3. ಮಲಬದ್ಧತೆ
4. ಹಸಿವು ಕಡಿಮೆಯಾಗುವುದು.
5. ಮೂತ್ರ ಉರಿಯುವುದು 6.ಮೈ ಬಿಸಿ ಆಗುವುದು
7. ಬಿಸಿಲಿನ ಕಾವು ಹೆಚ್ಚು ಇರುವುದರಿಂದ ವಾತಾವರಣದಲ್ಲಿ ಧೂಳು ಜಾಸ್ತಿ ವ್ಯಾಪಿಸುತ್ತದೆ, ಅದಕ್ಕೆ ಹೊಂದಿಕೊಂಡು ಶ್ವಾಸಕೋಶದ ತೊಂದರೆಗಳು ಕಾಣಿಸುತ್ತವೆ.

ಈ ಎಲ್ಲಾ ತೊಂದರೆಗಳನ್ನು ಎದುರಿಸುವ ನೈಸರ್ಗಿಕ ಸೂತ್ರಗಳು ಈ ಕೆಳಗಿನಂತಿವೆ, ಪಾಲಿಸಿ.

1. ನೀರು ಕುಡಿಯುವ ಪ್ರಮಾಣ ಹೆಚ್ಚು ಮಾಡಬೇಕು. ಹಿಂದೆ ನಮ್ಮ ಹಿರಿಯರು ಹೇಳಿದಂತೆ ಬೆಲ್ಲ ತಿಂದು ನೀರು ಕುಡಿಯುವ ಪದ್ಧತಿ ಈ ಸಮಯದಲ್ಲಿ ಇದು ಉಪಯುಕ್ತ ಮತ್ತು ವೈಜ್ಞಾನಿಕವೂ ಕೂಡ.
2. ಇದೇ ಕಾಲದಲ್ಲಿ ಯಥೇಚ್ಛವಾಗಿ ಸಿಗುವ ಹಣ್ಣುಗಳನ್ನು ತಿನ್ನಬೇಕು.ಇದಕ್ಕೆ ಸೀಸನಲ್ ಫ್ರೂಟ್ಸ್ ಎನ್ನುತ್ತೇವೆ. ಅದರಲ್ಲಿ ದ್ರಾಕ್ಷಿ,ಕಲ್ಲಂಗಡಿ, ಕರಬೂಜ ಸುಲಭವಾಗಿ ಸಿಗುತ್ತದೆ.ಇದರಿಂದ ದೇಹದಲ್ಲಿ ನೀರಿನ ಮತ್ತು ಖನಿಜಗಳ ಕೊರತೆ ನಿವಾರಿಸುತ್ತದೆ.
3. ಲಿಂಬೆ, ಜೇನು ಅಥವಾ ಬೆಲ್ಲ, ನೀರು, ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ ಪಾನಕ ಮಾಡಿ ಸೇವಿಸುವುದು.
4. ಮಜ್ಜಿಗೆ ಹಾಕಿದ ರಾಗಿಯ ಗಂಜಿ ಅಥವಾ ಜೋಳದ ಗಂಜಿ, ಈ ದಿನಗಳಲ್ಲಿ ಅತಿ ಶ್ರೇಷ್ಠ.
5. ಹಾಲು ಸೇವನೆಗಿಂತ ಮೊಸರು ಅಥವಾ ಮಜ್ಜಿಗೆ ಸೇವಿಸಿ.
6. ಮೈಯಿಗೆ ವಾರಕ್ಕೊಂದು ಸಲ ಲೋಳೆರಸ (ಅಲೋವೆರಾ) ಹಚ್ಚಿ ಸ್ನಾನ ಮಾಡಿ.
7. ಈ ದಿನಗಳಲ್ಲಿ ಬಿಸಿನೀರಿನ ಸ್ನಾನ ಕ್ಕಿಂತ ತಣ್ಣೀರಿನ ಸ್ನಾನ ಒಳ್ಳೆಯದು ಅದರಲ್ಲೂ ತುಂತುರು ಸ್ನಾನ (ಶವರ್ ಬಾತ್) ಒಳ್ಳೆಯದು.
8. ಕಲ್ಲಂಗಡಿ ಹೆಚ್ಚಿದ ಸಿಪ್ಪೆಯನ್ನು ಅಂಗಾಲಿಗೆ ಹಚ್ಚಿ ತಿಕ್ಕಿ ಕೊಳ್ಳಬೇಕು ಇದರಿಂದ ಪಾದಗಳು ತಂಪಾಗಿರುತ್ತದೆ ಮತ್ತು ದೇಹವನ್ನು ತಂಪಾಗಿರಿಸುತ್ತದೆ.
9. ವಾರಕ್ಕೆ 2–3 ಸಲ ತಣ್ಣೀರಿನ ಕಟಿಸ್ನಾನ ಮಾಡಬೇಕು.
10. ವಾರಕ್ಕೊಮ್ಮೆ ಎಣ್ಣೆ ಮಾಲೀಶು ಮತ್ತು ಹೋಗಿ ಸ್ನಾನ ಮಾಡಿದಲ್ಲಿ ಚರ್ಮದ ತೊಂದರೆಗಳನ್ನು ಹೋಗಲಾಡಿಸಬಹುದು.
11. ತೆಂಗಿನ ಎಣ್ಣೆಯಲ್ಲಿ ಸ್ವಲ್ಪ ಬೆಣ್ಣೆ ಬೆರೆಸಿ ಮೈಯಿಗೆ ತೀಡುವುದರಿಂದ ಡ್ರೈ ಸ್ಕಿನ್ ನಿವಾರಣೆ ಮಾಡಬಹುದು.
12. ಬಾರ್ಲಿ ಕುದಿಸಿದ ನೀರನ್ನು ಸೇವಿಸುವುದು ಒಳ್ಳೆಯದು.
13. ಗಸಗಸೆ ರುಬ್ಬಿ ಸೋಸೆ ನೀರು ಕುಡಿಯುವುದು.
14. ರಾಸಾಯನಿಕ ಪಾನೀಯಗಳಿಗಿಂತ ಪ್ರಕೃತಿದತ್ತವಾಗಿ ಸಿಗುವ ಎಳನೀರು, ಮಜ್ಜಿಗೆ, ಪಾನಕ, ಹಣ್ಣಿನ ರಸ, ಶುಂಠಿ, ಬೆಲ್ಲದ ನೀರು ಈ ಕಾಲದಲ್ಲಿ ಬಹಳ ಶ್ರೇಷ್ಠ ಇವುಗಳೆಲ್ಲವೂ ಮನೆಯಲ್ಲಿಯೇ ಸುಲಭವಾಗಿ ಮಾಡಿಕೊಳ್ಳಬಹುದು.

ಇಷ್ಟು ಮಾಡಿದರೆ ಸಾಕು ಆಯಾ ಕಾಲದಿಂದ ಬರುವಂತಹ ಸಮಸ್ಯೆಗಳನ್ನು ಪ್ರಕೃತಿದತ್ತವಾಗಿ ಪರಿಹರಿಸಿಕೊಳ್ಳಬಹುದು.

ನಮ್ಮ ಓದಿಗೆ

	ಶೀರ್ಷಿಕೆ	ಪ್ರಕಾಶಕರು	ಲೇಖಕರು
1	ಗಾಂಧಿ ಪ್ರಪಂಚವನ್ನು ಬದಲಾಯಿಸಿದ ಆ ವರ್ಷಗಳು	ವಸಂತ ಪ್ರಕಾಶನ	ರಾಮಚಂದ್ರ ಗುಹ
2	ಧೃತಿಗೆಡದ ಹೆಜ್ಜೆಗಳು	ಧೃತಿ ಮಹಿಳಾ ಮಾರುಕಟ್ಟೆ	
3	ಸೌಖ್ಯ ಸಂಜೀವಿನಿ	ಭವನ್	ಪ್ರೊ. ಬಿ.ಎಂ. ಹೆಗಡೆ
4	ಮರಣ	ಜಯ್‌ಕೋ ಬುಕ್ಸ್	ಸದ್ಗುರು
5	ಪ್ರಹರ	ಸಪ್ನ	ಪಂ. ಪ್ರವೀಣ್ ಗೋಡ್ಖಿಂಡಿ
6	ರಾಮಾಯಣ ಮಿತ್ರ	ವಸಂತ ಪ್ರಕಾಶನ	ಅ.ರಾ. ಮಿತ್ರ
7	ಬದುಕಿನ ಅರ್ಥದ ಹುಡುಕಾಟದಲ್ಲಿ ಮನುಷ್ಯ	ಬೆಸ್ಟ್ ಸೆಲ್ಲರ್	ವಿಕ್ಟರ್ ಈ. ಫ್ರಾಂಕಲ್
8.	ಸಿಯಾಚಿನ್	ಧಾತ್ರಿ	ಎಸ್. ಉಮೇಶ್
9.	ಸತ್ಸಂಗ ಸಂಪದ	ಪ್ರಣವ ಮೀಡಿಯಾ ಹೌಸ್	ಡಾ. ಗುರುರಾಜ

ಗಾಂಧಿ ಹತ್ಯೆಯ ಆ ದಿನ

– ಕೋ. ಚನ್ನಬಸಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಂದು ಜನವರಿ 30, 1948, ಶುಕ್ರವಾರ ಸಂಜೆ 4 ಗಂಟೆ ಮಹಾತ್ಮಾ ಗಾಂಧಿ, ಗೃಹಮಂತ್ರಿ ವಲ್ಲಭಭಾಯಿ ಪಟೇಲರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಪಟೇಲರು ಮಂತ್ರಿ ಪದವಿಗೆ ರಾಜೀನಾಮೆ ಕೊಡುವುದಾಗಿ ಭಾರತದ ಗವರ್ನರ್ ಜನರಲ್ ಲೂಯಿ ಮೌಂಟ್ ಬ್ಯಾಟನ್ನರಿಗೆ ಪತ್ರ ಬರೆದಿದ್ದರು. ಆ ಪತ್ರವನ್ನು ಮೌಂಟ್ ಬ್ಯಾಟನ್, ಗಾಂಧೀಜಿಯ ಗಮನಕ್ಕೆ ತಂದು – ಪಟೇಲ್ ರಾಜೀನಾಮೆ ಕೊಡದಂತೆ ಪ್ರಯತ್ನಿಸಬೇಕೆಂದು ಸೂಚಿಸಿದರು. ಆ ವಿಚಾರವಾಗಿ ಗಾಂಧೀಜಿ ತಮ್ಮ ಆಪ್ತ ಶಿಷ್ಯ ಪಟೇಲರನ್ನು ಕರೆಸಿಕೊಂಡು ಸಮಾಲೋಚನೆ ನಡೆಸಿದ್ದರು. ಐದು ಗಂಟೆಗೆ ಪ್ರಾರ್ಥನಾ ಸಭೆ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಲೇಬೇಕಿತ್ತು. ಅದನ್ನೆಂದಿಗೂ ಗಾಂಧೀಜಿ ಅತಿಕ್ರಮಿಸಿರಲಿಲ್ಲ. ಆದರೆ ಅಂದು ಐದು ಗಂಟೆ ಮೀರಿ ಹತ್ತು ನಿಮಿಷಗಳಾಗುತ್ತಾ ಬಂದಿತ್ತು. ಗಾಂಧೀಜಿ ತಮ್ಮ 'ಸಮಯ ಸೂಚಕರು' ಎಂದೇ ಪ್ರೀತಿಯಿಂದ ಕರೆಯುತ್ತಿದ್ದ ತಮ್ಮ ಮೊಮ್ಮಕ್ಕಳು ಆಭಾ ಮತ್ತು ದುನು ಎಂಬ ಯುವತಿಯರು ಸಂಕೋಚದಿಂದಲೇ ಗಾಂಧೀಜಿಗೆ ಗಡಿಯಾರ ತೋರಿಸಿದರು. ಗಾಂಧೀಜಿ ಒಂದೆರಡು ನಿಮಿಷಗಳಲ್ಲಿ ಮಾತು ನಿಲ್ಲಿಸಿದರು. 'ಪ್ರಾರ್ಥನೆಗೆ ಹೊತ್ತಾಯಿತು' ಎಂದರು. ಪಟೇಲರು ಕೊಠಡಿಯಿಂದ ಹೊರನಡೆದರು. ಗಾಂಧೀಜಿ ಪ್ರಾರ್ಥನಾ ಸಭೆಗೆ ಹೊರಟು ನಿಂತರು. ತಮ್ಮ ಊರುಗೋಲುಗಳೆಂದೇ ಗಾಂಧೀಜಿ ಕರೆಯುತ್ತಿದ್ದ ಆಭಾ ಮತ್ತು ಮನು ಗಾಂಧೀಜಿಯ ಎಡಬಲಗಳಲ್ಲಿ ನಿಂತರು. ಅವರ ಹೆಗಲ ಮೇಲೆ ಕೈ ಊರಿ ಗಾಂಧೀಜಿ ಪ್ರಾರ್ಥನ ಸಭೆಯ ಕಡೆ ನಿಧಾನವಾಗಿ ಹೆಜ್ಜೆ ಹಾಕಿದರು. ಜನವರಿ 12ರಿಂದ ಪ್ರಾರಂಭಿಸಿದ್ದ ಆಮರಣ ಉಪವಾಸವನ್ನು ನಿಲ್ಲಿಸಿ ಕೆಲವೇ ದಿನಗಳಾಗಿತ್ತು, ನಿಶ್ಯಕ್ತಿಯಿಂದ ಬಳಲಿದ್ದರು.

ಆಗಲೇ ಬಿರ್ಲಾ ಭವನದ ಹುಲ್ಲು ಮೈದಾನದಲ್ಲಿ ಜನ ಸೇರಿದ್ದರು. ಗಾಂಧೀಜಿ ಬಂದೊಡನೆ ದೂರ ನಿಂತಿದ್ದವರೆಲ್ಲರೂ ಪ್ರಾರ್ಥನಾ ಜಗಲಿಯ ಕಡೆ ನುಗ್ಗಿಬಂದರು. ಆ ಜನರ ಗುಂಪು ಬದಿಗೆ ಸರಿದು ಇಬ್ಭಾಗವಾಗಿ ಗಾಂಧೀಜಿಗೆ ದಾರಿಬಿಟ್ಟಿತು. ಕೆಲವರು ಕೈ ಮುಗಿದು ನಿಂತಿದ್ದರು. ಆಗ ಒಬ್ಬ ಖಾಕಿಧಾರಿ ಧಾಂಡಿಗ ಯುವಕ ಗಾಂಧೀಜಿ ಕಡೆಗೆ ನುಗ್ಗಿ ಪಾದಕ್ಕೆ ನಮಸ್ಕರಿಸುವಂತೆ ನಟಿಸುತ್ತ ಮುಗಿದ ಕೈಗಳಿಂದ ಬಾಗಿದ. ಗಾಂಧೀಜಿಯ ಪಕ್ಕದಲ್ಲಿದ್ದ ಮನು ಗಾಂಧಿ ಬೇಡ ಬೇಡ ಎಂದು ಅವನನ್ನು ಮೆಲ್ಲನೆ ತಡೆಯಲು ಹೋದಳು. ಆ ಧಾಂಡಿಗ ಅವಳನ್ನು ಬಲವಾಗಿ ಪಕ್ಕ ದೂಡಿ ಬಲಗೈಯಲ್ಲಿ ಬಚ್ಚಿಟ್ಟುಕೊಂಡಿದ್ದ ಪಿಸ್ತೂಲಿನಿಂದ ಗಾಂಧೀಜಿಯ ಎದೆಗೆ ನೇರವಾಗಿ ಗುಂಡಿಕ್ಕಿ ಮೂರು ಸಲ ಹೊಡೆದ. ಢಂ. ಢಂ. ಢಂ. ಗಾಂಧೀಜಿ 'ಹೇ ರಾಮ್' ಎಂದು ಕೊನೆಯ ಸಲ ತಮ್ಮ ಜೀವನದ ಉಸಿರಾಗಿದ್ದ ರಾಮನಾಮ ಜಪಿಸಿ ಕೊನೆಯುಸಿರೆಳೆದು ಕುಸಿದುಬಿದ್ದರು. ಗಾಂಧೀಜಿಯ ಊರುಗೋಲಾಗಿದ್ದ ಯುವತಿಯರಿಬ್ಬರೂ ಅವರನ್ನು ಹಿಡಿದೆತ್ತಿ ನಿಲ್ಲಿಸಲು ತಡಬಡಿಸಿದರು. ಗಾಂಧೀಜಿ ಹೊದ್ದುಕೊಂಡಿದ್ದ ಸುಭ್ರ ಧವಳ ಕ್ಷೇತ್ರ ಖಾದಿ ಅಂಗವಸ್ತ್ರ ರಕ್ತಮಯವಾಯಿತು, ಯುವತಿಯರಿಬ್ಬರೂ ರಕ್ತದ ಕಣ್ಣೀರಿಟ್ಟರು. ಆಗ ಸಂಜೆ ಐದು ಗಂಟೆ ಹದಿನೇಳು ನಿಮಿಷ. ಕೂಡಿದ್ದ ಜನ ಗಾಂಧೀಜಿ ಬಿದ್ದ ಸ್ಥಳದತ್ತ ನುಗ್ಗಿದರು. ಕೆಲವರು ಕಂಗೆಟ್ಟು, ದಿಕ್ಕೆಟ್ಟು ದಿಕ್ಕಾಪಾಲಾದರು! ಗುಂಡಿಕ್ಕಿ ಕೊಂದ ಆ ಧಾಂಡಿಗನನ್ನು ಬಿರ್ಲಾ ಭವನದ ಮಾಲಿ ರಘುಮಾಲಿ ಹಿಡಿದುಕೊಂಡ. ಪೊಲೀಸರು ಬಂದು ಅವನನ್ನು ವಶಕ್ಕೆ ತೆಗೆದುಕೊಂಡರು. ಇಲ್ಲದಿದ್ದರೆ ಅವನನ್ನು ಜನರೇ ಮುಗಿಸುತ್ತಿದ್ದರು. ಕೊಲೆಯ ಸುದ್ದಿ ಕೆಲವೇ ಸೆಕೆಂಡುಗಳಲ್ಲಿ – ನಿಮಿಷಗಳಲ್ಲಿ – ಕೇವಲ ಕೆಲವೇ ಕ್ಷಣಗಳಲ್ಲಿ ದಿಲ್ಲಿಯಲ್ಲೆಲ್ಲಾ ಕಾಳ್ಗಿಚ್ಚಿನಂತೆ ಹಬ್ಬಿತು. ನಿಮಿಷಾರ್ಧದಲ್ಲಿ ನೆಹರೂ, ಪಟೇಲ್, ಗವರರ್ನರ್ ಜನರಲ್ ಮೌಂಟ್ ಬ್ಯಾಟನ್, ಅಬುಲ್ ಕಲಾಂ ಆಝಾದ್, ದೌಲತ್ ರಾಮ್, ಅಮೃತಾ ಕೌರ್, ಆಚಾರ್ಯ ಕೃಪಲಾನಿ, ಕೆ.ಎಂ. ಮುನ್ಶಿ ಧಾವಿಸಿ ಬಂದರು. ಲಕ್ಷೋಪಲಕ್ಷ ಜನ ಬಿರ್ಲಾ ಭವನಕ್ಕೆ ನುಗ್ಗಿ ಬಂದರು. ಸಾಗರದ ಹೆದ್ದೆರೆಗಳಂತೆ ಭೋರ್ಗರೆದು ದುಃಖಿಸುತ್ತ ಬಂದರು. ಶಾಂತಿದೂತನನ್ನು ಅಹಿಂಸಾಮೂರ್ತಿಯನ್ನು ಕೋಮುಸೌಹಾರ್ದದ ಹರಿಕಾರರು, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಧರ್ಮಾತ್ಮನನ್ನು, ಪ್ರೇತು ಸಂದೇಶ ವಾಹಕನನ್ನು ಇಂದು ಓರ್ವ ಹಿಂದೂ ದ್ವೇಷ ತುಂಬಿದ ವಿಷಜಂತು ಹತ್ಯೆ ಮಾಡಿತ್ತು. ಅದೂ ಹಿಂದೂ ಧರ್ಮದ ರಕ್ಷಣೆಯ ಹೆಸರಿನಲ್ಲಿ ಹಿಂದುತ್ವದ ಸ್ಥಾಪನೆಗಾಗಿ

ಸೌಜನ್ಯ : ಕರ್ಮವೀರ

ಮುಂದುವರಿಯುವುದು...



ಮಾಹತ್ಮ ಗಾಂಧಿ ಹಂತಕನ ಗುಂಡಿಗೆ ಬಲಿಯಾದ ಕ್ಷಣ



ಮಾಹತ್ಮ ಗಾಂಧಿ ಚಿತಾಭಸ್ಮದ ಮೆರವಣಿಗೆ

ಪಂಡಿತ ಭೀಮಸೇನ ಗುರುರಾಜ ಜೋಷಿ : (04.02.1922– 24.02.2011)




– ಮಹೇಶ್



ಭೀಮಸೇನ ಜೋಷಿ ಅವರ ಶತಮಾನೋತ್ಸವದ ಈ ಸಂದರ್ಭದಲ್ಲಿ ಅವರು ಭಾರತದ ಸಾಂಸ್ಕೃತಿಕ ಕೀರ್ತಿಯನ್ನು ಔನ್ನತ್ಯಕ್ಕೊಯ್ದ ಮಹನೀಯರಿಂಬುದನ್ನು ಸ್ಮರಿಸಲೇ ಬೇಕಿದೆ. ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿ ಗುರುರಾಜ ಜೋಶಿ ಹಾಗೂ ರಮಾಬಾಯಿ ದಂಪತಿಗಳಿಗೆ ಜನಿಸಿದ ಭೀಮಸೇನರ ಪೂರ್ವಜರು, ಮೂಲತಃ ಗದಗ ಜಿಲ್ಲೆಯ 'ಹೊಂಬಳ' ಗ್ರಾಮದವರು. ಇವರ ತಂದೆ ಸಂಸ್ಕೃತದಲ್ಲಿ ಪಂಡಿತರು.

ಚಿಕ್ಕಂದಿನಿಂದಲೇ ಅತಿಯಾದ ಸಂಗೀತದ ಗೀಳಿದ್ದ ಜೋಷಿ ಹನ್ನೊಂದನೆ ವಯಸ್ಸಿನಲ್ಲಿಯೇ ಮನೆ ಬಿಟ್ಟು ಮುಂಬಯಿಗೆ ಹೋದರು. ಬಾಲಕ ಜೋಷಿ ಬಳಿ ಹಣಕಾಸು ಇರಲಿಲ್ಲ. ಪುಟ್ಟ ಭೀಮಸೇನ ಕೂಲಿ ನಾಲಿ ಮಾಡಿ, ಪುಟ್ಪಾತ್‌ನಲ್ಲಿ ಮಲಗಿ ದಿನ ಕಳೆದನು. ಹಸಿವು ನೀರಡಿಕೆ ಅವನನ್ನು ಮತ್ತೆ ತನ್ನ ಹುಟ್ಟೂರಿಗೆ ಬರುವಂತೆ ಮಾಡಿತು. ಸಂಗೀತ ಕಲಿಯಲೇಬೇಕೆಂಬ ಆಸೆ ಮತ್ತು ಹಠ ಅವರನ್ನು ಎರಡನೆ ಬಾರಿ ಮನೆ ಬಿಟ್ಟು ಗ್ವಾಲಿಯರ್‌ಗೆ ಬಂದರು. ಅಲ್ಲಿನ ಗಾಯಕ ವಿನಾಯಕ್ ರಾವ್ ಪಟವರ್ಧನ್ ಇವರ ನಿರ್ದೇಶನದಂತೆ ಧಾರವಾಡ ಜಿಲ್ಲೆಗೆ ಹಿಂದಿರುಗಿ ಕುಂದಗೋಳದ ಪ್ರಸಿದ್ಧ ಗಾಯಕರಾದ ಸವಾಯಿ ಗಂಧರ್ವರಲ್ಲಿ ಸಂಗೀತಾಭ್ಯಾಸ ಮಾಡಿ ಆಪ್ತ ಶಿಷ್ಯರಾದರು. ಹಿಂದುಸ್ತಾನಿ ಸಂಗೀತದ ಒಂದು ಪದ್ಧತಿಯಾದ ಕಿರಾಣಾ ಘರಾನಾದಲ್ಲಿ ಪರಿಣತರಾದ ಜೋಷಿ ಅವರು ಐದು ದಶಕಗಳ ಕಾಲ ಸಂಗೀತ ಕಛೇರಿಗಳನ್ನು ನಡೆಸಿದ್ದಾರೆ. ಪಂ. 'ಭೀಮ್ ಸೇನ್ ಜೋಶಿ' ಅವರ ತಮ್ಮನ ಮಕ್ಕಳಲ್ಲೊಬ್ಬರು, 'ಭಾರತೀಯ ಕ್ರಿಕೆಟ್ ತಂಡದ ಸದಸ್ಯ'ರಲ್ಲೊಬ್ಬರಾದ 'ಸುನಿಲ್ ಜೊಶಿ', ಮತ್ತು 'ಅನಿರುದ್ಧ ಜೋಶಿ, ಚಿಕ್ಕಪ್ಪ ಸುಪ್ರಸಿದ್ಧ ಲೇಖಕರು ಮತ್ತು ನಾಟಕಕಾರರಾದ 'ಗೋವಿಂದಾಚಾರ್ಯ'ರು, 'ಜಡಭರತ' ಎಂಬ ಕಾವ್ಯನಾಮದಿಂದ 'ಮನೋಹರ ಗ್ರಂಥಮಾಲೆ'ಯೆಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿದ್ದರು. ಒಟ್ಟಾರೆ ಜೋಶಿಮನೆತನ ಸಂಗೀತ, ಸಾಹಿತ್ಯ, ಮತ್ತು ಕ್ರೀಡೆಗಳಿಗೆ ಹೆಸರುವಾಸಿಯಾಗಿದೆ. ಅಜ್ಜ ಕೀರ್ತನಕಾರರು. ಮೊಮ್ಮಗ, 'ಭೀಮಸೇನ', ಭಜನಾಮೇಳದವರೊಡನೆ ಸೇರಿಕೊಂಡು ದಾಸರ ಪದಗಳನ್ನು ಕೇಳುತ್ತಾ, ಹಾಡುತ್ತಾ ಮೈಮರೆಯುತ್ತಿದ್ದರು. ಹೀಗೆ ಮುಂದುವರೆದು 'ದಾಸವಾಣಿ–ಶಾಸ್ತ್ರೀಯ ಸಂಗೀತವಲಯ'ದಲ್ಲಿ ಅಪ್ರತಿಮ ಸಾಧನೆಮಾಡಿ ಸಂಗೀತವನ್ನೂ ಬೆಳೆಸಿದವರಾಗಿದ್ದಾರೆ. ಗದುಗಿನ 'ಖಡಕ್ ರೊಟ್ಟಿ' ಮತ್ತು ಝುಣಕ, ಜೋಷಿ ಅವರಿಗೆ ಬಲುಪ್ರೀತಿ. ತಮ್ಮ ಊರಿನ ಜನತೆಗಾಗಿಯೇ ಅನೇಕ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿ ರಸದೌತಣ ನೀಡಿದ್ದರು. 1983ರಲ್ಲಿ 'ವೆಂಕಟೇಶ ಚಿತ್ರಮಂದಿರ'ದ 'ಹತ್ತಿಕಾಳ್ ಕೂಟ'ದಲ್ಲಿ, 1985–86 ರಲ್ಲಿ 'ಕಾಟನ್ ಮಾರ್ಕೆಟ್' ನಲ್ಲಿ, 1992ರಲ್ಲಿ, 'ಅಭಿನಯರಂಗ ವಿದ್ಯಾದಾನ ಸಮಿತಿ ಹೈಸ್ಕೂಲ್' ಅವರಣದಲ್ಲಿ, 'ಕರ್ನಾಟಕ ಚಿತ್ರಮಂದಿರ'ದಲ್ಲಿ ಸಂಗೀತ ಕಚೇರಿಯನ್ನು ನಡೆಸಿದ್ದರು. ಅದರಿಂದ ಸಂಗ್ರಹವಾದ ಹಣದಲ್ಲಿ ನಗರದ ವಿವಿಧ ಶಾಲೆಗಳ ಕೊಠಡಿ ನಿರ್ಮಾಣ ಕಾರ್ಯಗಳಿಗೆ ಮತ್ತು ದೇವಾಲಯಕ್ಕೆ ದೇಣಿಗೆ ನೀಡಿದ್ದರು. ಕೊಲ್ಕತ್ತಾಕ್ಕೆ ಅವರು ವರ್ಷದಲ್ಲಿ ಸುಮಾರು 20 ಬಾರಿಯಾದರೂ ಹೋಗಿಬರುತ್ತಿದ್ದರು. ಕೊಲ್ಕತ್ತಾದಲ್ಲಿ ಹಲವಾರು ಹಿಂದೂಸ್ತಾನೀ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಭೀಮಸೇನರಿಗೆ ಅಲ್ಲಿಂದ ತಪ್ಪದೆ ಆಮಂತ್ರಣ ಬರುತ್ತಿತ್ತು. ಹಾಗೆಯೇ ಆ ನಗರದಲ್ಲಿ ಹಲವಾರು ಸಂಗೀತ ಸಮ್ಮೇಳನಗಳು ವರ್ಷಪೂರ್ತಿ ಆಯೋಜಿತಗೊಳ್ಳುತ್ತಿದ್ದವು. ಅವುಗಳಲ್ಲಿ 'ಆಲ್ ಬೆಂಗಾಲ್ ಮ್ಯೂಸಿಕ್ ಕಾನ್ಫರೆನ್ಸ್'. 'ತಾನ್ಸೇನ್ ಮ್ಯೂಸಿಕ್ ಕಾನ್ಪರೆನ್ಸ್', 'ಡೋವರ್ ಲೇನ್ ಮ್ಯೂಸಿಕ್ ಕಾನ್ಪರೆನ್ಸ್', ಹಿಂದುಸ್ತಾನಿ ಸಂಗೀತದ ಖಯಾಲ್ ಕೃತಿಗಳ ಹಾಡುಗಾರಿಕೆಗೆ ಜೋಷಿಯವರು ಪ್ರಸಿದ್ಧರು. ಕನ್ನಡ ಭಾಷೆಯ ದಾಸಪದವಾದ "ಭಾಗ್ಯದ ಲಕ್ಷ್ಮಿ ಬಾರಮ್ಮ" ಭೀಮಸೇನ ಜೋಷಿ ಅವರ ಹೆಸರಿನೊಂದಿಗೆ ಐಕ್ಯವಾಗುವಷ್ಟು ಪ್ರಸಿದ್ಧವಾಗಿದೆ. ಕನ್ನಡದಲ್ಲಿ ಭೀಮಸೇನ್ ಜೋಷಿ ಅವರ ಮುಖ್ಯ ಆಲ್ಬಮ್ ಗಳೆಂದರೆ "ದಾಸವಾಣಿ ಮತ್ತು ಎನ್ನ ಪಾಲಿಸೊ" ಹಾಗೆಯೇ ಹಿಂದಿ ಭಜನೆಗಳು, ಮರಾಠಿ ಅಭಂಗ ಮತ್ತು ನಾಟ್ಯಗೀತೆಗಳನ್ನು ಸಹ ಬಹಳಷ್ಟು ಹಾಡಿದ್ದಾರೆ. ಭೀಮಸೇನರು ಸ್ವಭಾವತಃ ಮಹಾಮೌನಿಗಳು. ಅವರಿಂದ ಯಾವ ಪ್ರಶ್ನೆಗಳಿಗೂ ಉತ್ತರಗಳನ್ನು ನಿರೀಕ್ಷಿಸುವುದು ದುಸ್ಸಾಧ್ಯವಾಗಿತ್ತು. ಆದರೆ ಅವರ ವಾಚಾಳಿತನವನ್ನು ಶ್ರೋತೃಗಳು ಅವರು ಪ್ರಸ್ತುತಪಡಿಸುತ್ತಿದ್ದ, 'ಬೃಂದಾವನ ಸಾರಂಗದಲ್ಲೋ', 'ಭೀಮ ಪಲಾಸಿನಲ್ಲೋ' ಅಥವಾ ಮತ್ಯಾವುದೋ ಮುದಕೊಡುವ ರಾಗಗಳಲ್ಲಿ ಕಂಡುಕೊಳ್ಳುತ್ತಿದ್ದರು. ಅಸ್ಮಿತೆ ಅವರಲ್ಲಿ ನಿರಂತರವಾಗಿ ಹರಿಯುವ ತೊರೆಯಾಗಿತ್ತು. ಅವರ ಮೈಮನಗಳಲ್ಲಿ ಸಂಗೀತ ಉಕ್ಕಿಹರಿಯುತ್ತಿತ್ತು. ಅವರ ಮನೋಲೋಕದಲ್ಲೆಲ್ಲಾ ಆವರಿಸಿದ್ದು 'ಕೇವಲ ಸಂಗೀತ' ಹಾಗೂ ಅಪಾರ ಗುರುಭಕ್ತಿ ಮಾತ್ರವೇ ಆಗಿತ್ತು.

ಮುಂದುವರಿಯುವುದು...

ಡಾ॥ ಹೊ. ಶ್ರೀನಿವಾಸಯ್ಯ ಅವರ ಅನುಭವ ಕಥನ – ನಾ ಕಂಡ ಜಗತ್ತು.


ಸಂಗ್ರಹ : ನಾಡೋಜ ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಲ್ಲೇಶ್ವರಲ್ಲಿ ಆಗ ಇದ್ದ ಸಣ್ಣ ಮನೆಗಳು ಈಗಲೂ ಇವೆ. ನಮ್ಮ ಮನೆಯಲ್ಲಿ ಮಾಂಸಾಹಾರ ಇಲ್ಲದಿದ್ದುದರಿಂದ ಸಾಲಿನ ಐದು ಮನೆಗಳಲ್ಲೂ ಕೂಡ ಸಸ್ಯಾಹಾರಿಗಳಿಗೆ ಬಾಡಿಗೆಗೆ ಕೊಡಬೇಕಿತ್ತು. ಇದೊಂದು ನಿಯಮವಾಗಿ ಉಳಿಯಿತು. ಆದುದರಿಂದ ಮನೆಗಳನ್ನು ಬ್ರಾಹ್ಮಣರಿಗೇ ಬಾಡಿಗೆಗೆ ಕೊಡುತ್ತಿದ್ದರು.

ನನಗೆ ಹೆಸರಿಟ್ಟವರು ನಮ್ಮಲ್ಲಿ ಬಾಡಿಗೆಗಿದ್ದ ಹಪ್ಪಳದ ಸೀತಮ್ಮ. ಹಪ್ಪಳ ಮಾಡಿ ಮಾರಿ ಜೀವಿಸುತ್ತಿದ್ದರು. ಅದಕ್ಕೆ ಆ ಅಡ್ಡ ಹೆಸರು ಬಂದಿತ್ತು. ಶ್ರೀನಿವಾಸಯ್ಯ ಎಂದು ಹೆಸರು ಕೊಟ್ಟು ನನ್ನನ್ನು ಶಾಲೆಗೆ ಸೇರಿಸಿದರು. ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆಗೆ ಆಗ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ ಮುಖ್ಯೋಪಾಧ್ಯಾಯರು. ನಂತರ ಮಲ್ಲೇಶ್ವರ ಬಾಯ್ಸ್ ಮಿಡಲ್ ಸ್ಕೂಲ್ ಸೇರಿದೆ. ಶ್ರೀ ಎಲ್. ಸ್ವಾಮಿರಾವ್ (ಖ್ಯಾತ ವಿಮರ್ಶಕ ಶ್ರೀ ಎಲ್.ಎಸ್. ಶೇಷಗಿರಿರಾವ್ ಅವರ ತಂದೆ) ಮುಖ್ಯೋಪಾಧ್ಯಾಯರು. ಶಾಲೆಗೆ ಹೋಗುವುದಲ್ಲದೆ ತಂದೆಯ ಜೊತೆಯಲ್ಲಿ ರಾಮ ಮಂದಿರಕ್ಕೆ ಗೀತಾ ಪಾರಾಯಣ ಅಭ್ಯಾಸಕ್ಕೆ ಹೋಗುತ್ತಿದ್ದೆ. ಅಲ್ಲಿ ಸಾಮೂಹಿಕವಾಗಿ ಹಾಡಬೇಕಾಗಿತ್ತು. ಪ್ರತಿಯೊಬ್ಬ ಹುಡುಗರ ಬಾಯಲ್ಲಿ ಶ್ಲೋಕ ಹೇಳಿಸಿ ಅಭ್ಯಾಸ ಮಾಡಿಸುತ್ತಿದ್ದರು. ನನ್ನ ಶಾಲೆಯ ಉಡುಪು ಒಂದು ನಿಕ್ಕರ್, ಮೇಲೊಂದು ಅಂಗಿ, ಒಂದು ಕೋಟು, ತಲೆಗೆ ಟೋಪಿ. ಜುಟ್ಟು ಮಾತ್ರ ನನಗೆ ಬಲವಾಗಿತ್ತು. ಅನೇಕ ಸಲ ಜಡೆ ಹಾಕುತ್ತಿದ್ದುದುಂಟು. ಕಾಲೇಜು ಸೇರಿದ ಮೇಲೆ ಗಂಟು ಹಾಕಲಾರಂಭಿಸಿದೆ.

ನಮ್ಮದು ತಿರುಪತಿಯ ಒಕ್ಕಲು. ಯುಗಾದಿ ಹಬ್ಬ ಆದ ಹದಿನೈದು ದಿನಕ್ಕೆ ನಮ್ಮ ಗ್ರಾಮ ದೇವತೆ ಪಟ್ಟಲದಮ್ಮನ ಹಬ್ಬ. ಸುತ್ತಲ ಏಳು ಗ್ರಾಮಗಳ ಜನರ ವೈಭವದ ಜಾತ್ರೆ 1937ರಲ್ಲಿ ಪಟ್ಟಲದಮ್ಮನ ಹಬ್ಬಕ್ಕೆ ನಾನು ನಮ್ಮ ತಾಯಿ ಊರಿಗೆ ಹೋಗಿದ್ದೆವು. ಶುಕ್ರವಾರ ಹಬ್ಬ. ಗುರುವಾರ ರಾತ್ರಿ ತಂದೆಯವರಿಗೆ ಹುಷಾರಿಲ್ಲದ ಸಮಾಚಾರ ಗೊತ್ತಾಯಿತು. ಜ್ವರ ಹೆಚ್ಚಾಗಿತ್ತು. ದೇವೋಜಿರಾವ್ ಪಾಂಡೆ ಮನೆಯಲ್ಲಿದ್ದರು. ಒಡನೆ ಬೆಂಗಳೂರಿಗೆ ಹಿಂತಿರುಗಿದೆವು. ಮಂಗಳವಾರ ಬೆಳಿಗ್ಗೆ ನಮ್ಮ ತಂದೆ ತಾಯಿ ಅವರನ್ನು ಕರೆದು "ಇನ್ನು ನಾನು ಬದುಕುವುದಿಲ್ಲ" ಎಂದರು. ಡಾ. ನಳಿನೆ ಅವರಿಗೆ ತೋರಿಸಿದೆವು. ಏನೂ ಫಲಕಾರಿಯಾಗಲಿಲ್ಲ. ರಾಮನಾಮ ಉಚ್ಚರಿಸುತ್ತಾ ನಮ್ಮ ತಂದೆ ಇಹಲೋಕ ತ್ಯಜಿಸಿದರು. ನಮ್ಮ ತಂದೆ ಅನೇಕರಿಗೆ ಹಣವನ್ನು ಸಾಲವಾಗಿ ಕೊಟ್ಟಿದ್ದರು. ಅವರಲ್ಲಿ ಶಾನಯ್ಯ ಎಂಬಾತ ಸ್ವಲ್ಪ ಹಣಕೊಟ್ಟ. ಬೋರಣ್ಣ ಎಂಬುವರ ಮೂಲಕ ಹಣ ಸಾಲ ಪಡೆದು ಉತ್ತರಕ್ರಿಯಾದಿಗಳನ್ನು ಮಾಡಿದ್ದಾಯಿತು. ಮನೆ ಜವಾಬ್ದಾರಿ ನಮ್ಮ ತಾಯಿಯ ಮೇಲೆ ಬಿತ್ತು. ಬಾಡಿಗೆ ಬರುತ್ತಿದ್ದುದು ಇಪ್ಪತ್ತನಾಲ್ಕು ರೂಪಾಯಿ. ಅಷ್ಟರಲ್ಲೇ ಜೀವನ ಸಾಗಿಸಬೇಕಾಗಿತ್ತು. ಮಾಧ್ಯಮಿಕ ಶಾಲೆಯಲ್ಲಿ ಎರಡನೇ ವರ್ಷ ಸಂಸ್ಕೃತ ಓದಲು ತೊಡಗಿದೆ. ಆಗಲೇ ದೇಶಾಭಿಮಾನ ಜಾಗೃತವಾಗಿತ್ತು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದರೂ ಕನ್ನಡ ಮಾಧ್ಯಮವನ್ನು ತೆಗೆದುಕೊಂಡು ಮಲ್ಲೇಶ್ವರಂ ಹೈಸ್ಕೂಲ್ ಸೇರಿದೆ. ಹೈಸ್ಕೂಲಿನಲ್ಲಿ 'ವನಕುಸುಮ' ಎಂಬ ಪತ್ರಿಕೆ ಶಾಲೆಯಿಂದ ಹೊರಬರುತ್ತಿತ್ತು. ನಾನು ಅದಕ್ಕೆ ಗೀತೆಯ ಕೆಲವು ಶ್ಲೋಕಗಳ ತಾತ್ಪರ್ಯ, ಗೀತೆಯ ಸಂದೇಶದ ವಿಚಾರವಾಗಿ ಲೇಖನ ಬರೆದುಕೊಡುತ್ತಿದ್ದೆ. ಅಬ್ರಹಾಂ ಲಿಂಕನ್‌ರ ಪಾಠ ಓದಿದ ಮೇಲೆ ಲಿಂಕನ್ನರ ಜೀವನ ಚರಿತ್ರೆ ನನ್ನ ಮೇಲೆ ಪ್ರಭಾವ ಬೀರಿತು. ಛತ್ರಪತಿ ಶಿವಾಜಿ ನನ್ನ ಮೆಚ್ಚಿನ ನಾಯಕ, ಸ್ವಾತಂತ್ರ್ಯ ಹೋರಾಟಗಾರ. ಲೇಖನ ಬರೆಯುವುದು, ಚಿತ್ರ ಬರೆಯುವುದು, ಛಾಯಾಚಿತ್ರಗಳನ್ನು ತೆಗೆಯುವುದೆಂದರೆ ನನಗೆ ಆಸಕ್ತಿ. 'ದಿವಾಕರ' ಎಂಬ ಹಸ್ತ ಪತ್ರಿಕೆಯನ್ನು ಹೊರಡಿಸಿದೆ. ವಿದ್ಯಾರ್ಥಿ ಸಂಘ ಸ್ಥಾಪಿಸಿದೆ. ಹೈಸ್ಕೂಲ್ ಸೇರಿದ ಮೇಲೆ ವಿದ್ಯಾರ್ಥಿ ವೇತನಕ್ಕಾಗಿ ಅಲೆಯಬೇಕಾಯಿತು. ಪಕ್ಕದ ಮನೆಯ ವೀರಣ್ಣ ಎಂಬುವರು ಆಗಿನ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಸ್ಕಾಲರ್‌ಷಿಪ್ ಕಮಿಟಿ ಛೇರ್‌ಮನ್ನರೂ ಆಗಿದ್ದರು. ಶ್ರೀ ರಾಜಗೋಪಾಲ್ ಅವರನ್ನು ಕಂಡು ಇವನು ಹೊನ್ನಪ್ಪನ ಮಗ ಎಂದು ಪರಿಚಯ ಮಾಡಿಸಿ ಸ್ಕಾಲರ್‌ಷಿಪ್ ಮಾಡಿಸಿಕೊಟ್ಟರು. ಎಸ್.ಎಸ್.ಎಲ್.ಸಿ. ಆದ ಮೇಲೆ ಗೌರ್ನಮೆಂಟ್ ಇಂಟರ್ ಮೀಡಿಯೇಟ್ ಕಾಲೇಜು ಸೇರಿದೆ. ಇಂಗ್ಲಿಷ್ ಮಾಧ್ಯಮ, ಮೊದಲು ಸ್ವಲ್ಪ ತೊಂದರೆಯಾಯಿತು. ಮುಂದೆ ಚೆನ್ನಾಗಿ ಓದಿ ಅಭ್ಯಾಸ ಮಾಡಿಕೊಂಡೆ.



ಜೀವಶಕ್ತಿಯನ್ನು ಕಾಪಾಡಿಕೊಳ್ಳಲು ಕೆಳಕಂಡ ನಿಯಮಗಳನ್ನು ಪಾಲಿಸಿದರೆ ಉತ್ತಮ

1. ಬೆಂಗಿನ ತಿಂಡಿಯನ್ನು ಬಿಡಬೇಕು.
2. ನೀರನ್ನು ಚಪ್ಪರಿಸಿ ಕುಡಿಯಬೇಕು ಅದರ ಜೊತೆಗೆ ಯಾವ ಆಹಾರವನ್ನೂ ತೆಗೆದುಕೊಳ್ಳಬಾರದು.
3. ಹಸಿವಿಲ್ಲದೆಯೇ ಊಟ ಮಾಡಬಾರದು.
4. ನಿಧಾನವಾಗಿ ಊಟ ಮಾಡಬೇಕು
5. ಆಹಾರವನ್ನು ಚೆನ್ನಾಗಿ ಅಗಿದು ತಿನ್ನಬೇಕು. ಅವಸರದಲ್ಲಿ ಊಟ ಮಾಡಿದರೆ, ಮಿತಿ ಮೀರಿ ತಿಂದರೆ ಜೀವಶಕ್ತಿ ವ್ಯರ್ಥ, ಕೆಲಸ ಜಾಸ್ತಿ,
6. ಊಟ ಮತ್ತು ಕೆಲಸ ಒಟ್ಟಿಗೆ ಮಾಡಬಾರದು
7. ನಿದ್ರೆ ಮತ್ತು ವಿಶ್ರಾಂತಿ ಅವಶ್ಯಕ
8. ಜೀವನಕ್ಕಾಗಿ ಸರಿಯಾದ ಆಹಾರ ತೆಗೆದುಕೊಳ್ಳಬೇಕು. ಮನಸ್ಸು ಹಗುರವಾಗಿರಬೇಕು. ಸಮಾಧಾನಕರವಾಗಿರಬೇಕು.
9. ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಬೇಕು

ಮುಂದುವರಿಯುವುದು...

ಅಂತರರಾಷ್ಟ್ರೀಯ ಸುದ್ದಿ ಸಮಾಚಾರಗಳು

ಸಂಗ್ರಹ : ಡಾ. ಅಶೋಕ್ ಕುಮಾರ್)

Ukraine crisis offers Indian IT cos opportunities

Debasis Mahopatra



The country has already created many alternatives to global technology giants, especially in the consumer technology space. The Ukraine crisis has intensified the ongoing debate on the neutrality of technology companies. From Alphabet (parent company of Google) to Adobe; Apple to Meta, and Intel to YouTube, many big technology firms have announced plans of leaving Russia in the wake of its invasion of Ukraine. Without dwelling on the merits or demerits of such a move and the moral aspect attached to this whole issue, experts are predicting that a multipolar technology world will emerge post this crisis. Most nations will reduce their dependency on global technology giants or at least create a hedging mechanism that will enable them to function without much disruption during such exigencies. Therefore, the digital divide in terms of geographies is likely to emerge without the dominance of a single player, which is the case now. As a country, India will also see such development of domestic technology stacks. As a result, IT spending will be higher, favouring Indian technology companies including startups. "Earlier, critical assets for any nation used to be power projects, airports, dams, banks, airlines, and government installations among others. In the 21st century, nations have realised that digital assets are also part of these critical assets which need to be protected at any cost. This crisis has shown how technology can be denied at a time of conflict. So, the technology world will be multipolar with many players operating in consumer technology space after this crisis," said Pareekh Jain, an engineering services expert and Founder of Pareekh Consulting. "It's not that nations like India have not developed their own technology stacks. But the intent was was to tap new opportunities. After the Ukraine crisis, nations will have to develop indigenous technology stacks for managing risks," he added. Since the beginning of Russia-Ukraine conflict, more than 330 companies have either announced a plan to leave Russia or suspended operations. Global giants like Google, Apple, Meta, Adobe, Dell, DXC Technology, HP, IBM, Intel, SAP, Twitter, YouTube, and a host of other companies have decided to leave Russia. When such a massive exodus of technology companies happens, it has the potential of crippling the whole system. According to brand experts, who advise companies in various crises situation, neutrality is desirable. If technology firms take sides, then countries will develop their own technology stacks. "Technology, like the air we breathe and the water we drink, belongs to all. Technology, therefore, must be neutral. It belongs to all and must bless all equally. It must not, therefore, take sides. If it does, it will tend to alienate one side or the other," said Harish Bijoor, Brand Guru & Founder, Harish Bijoor Consults Inc. "In a war-like situation, technology must offer itself to all. No taking sides! Taking sides would make technology partisan and a pariah! No point in doing that," he added. The neutrality of technology has been debated for quite some time now. Many countries including India have raised concerns and have come up with regulations to protect their national interests. But unlike China, which has developed its own companies in each aspect of consumer and enterprise technology, India lags far behind. India has already embarked on a path of "Atmanirbhar Bharat' initiative under which the country aims to create indigenous technology stacks in all fields of life. UPI (Universal Payment Interface), and RuPay are the classic examples of Indian efforts to be independent in the digital payment system. Similarly, ISRO (Indian Space Research Organisation) is considered a pioneer in space technology space. "India has many reputed technology firms in the services space. What we are lacking is that we need good technology product companies. The Indian government is investing big in indigenous technology stacks. So, it will definitely give impetus to companies to innovate and develop new products," said Ashis Dash, research analyst at brokerage firm Sharekhan by BNP Paribas. "Also, we have a vibrant startup ecosystem. This puts the country in good stead to come up with technology solutions in critical areas like drone technology, mobile operating system, and many more", he added. The country has already created many alternatives to global technology giants, especially in the consumer technology space. However, India is still lacking in developing its own mobile operating system, internet, or niche defence technology applications to be self-reliant in the true sense. Ukraine crisis has shown that exigency can happen in a nation's life without giving notice. Therefore, those countries will prevail which are better prepared for managing such crises. India with its huge engineering talent base, startup ecosystem, and government support is well-placed to write its own destiny in the world. And the path to achieving that status stems from technology leadership in this century.

Courtecy : Deccan Herald, -Feb, 14, 2022

ಪರಿಸರದೊಂದಿಗೆ ನಾವು

ಸಂಗ್ರಹ : ಡಾ. ಮುನಿಯಪ್ಪ



ಮಡಗಾಸ್ಕರ್ ದ್ವೀಪದ ಬಾವೊಬಾಬ್ ಮರಗಳು

ಮಡಗಾಸ್ಕರ್‌ನಲ್ಲಿನ ಕಾಡುಗಳು ಅಷ್ಟೇನೂ ಮಳೆಯನ್ನು ಕಾಣವುದಿಲ್ಲ. ವರ್ಷದಲ್ಲಿ ಸುಮಾರು 10 ತಿಂಗಳುಗಳ ಕಾಲ ಒಣಗುವ ಈ ಕಾಡುಗಳಲ್ಲಿನ ಮರಗಳು ಹಾಗೂ ವಿಚಿತ್ರವಾದ ಉಬ್ಬಿದ ಕಾಂಡಗಳನ್ನು ಹೊಂದಿರುತ್ತವೆ. ಅವುಗಳು ತಮ್ಮ ಉಬ್ಬಿದ ಕಾಂಡಗಳಲ್ಲಿ ನೀರನ್ನು ಸಂಗ್ರಹಿಸುತ್ತವೆ ಎಂಬುದು ವಿಶೇಷ. ಈ ಮರಗಳ ಆಯಸ್ಸು ಸುಮಾರು 1000 ದಿಂದ 3000 ವರ್ಷಗಳು, ಕಿತ್ತಳೆ ಮತ್ತು ಇತರೆ ಸಿಟ್ರಸ್ ಹಣ್ಣುಗಳಲ್ಲಿ ಲಭ್ಯವಾಗುವ ವಿಟಮಿನ್ ಸಿ ಪ್ರಮಾಣಕ್ಕಿಂತ ಹತ್ತು ಪಟ್ಟು ಹೆಚ್ಚು ವಿಟಮಿನ್ ಸಿ ಪ್ರಮಾಣವು ಈ ಮರಗಳ ಹಣ್ಣುಗಳಲ್ಲಿದೆ. ಹೀಗಾಗಿ ಔಷಧೀಯ ಗುಣಗಳ ಕಾರಣಕ್ಕೆ ಈ ಹಣ್ಣುಗಳನ್ನು ಸ್ಥಳೀಯರು ಸೇವಿಸುತ್ತಾರೆ. ಹೃದ್ರೋಗವನ್ನು ತಡೆಗಟ್ಟಲು ಮತ್ತು ಚಿಕಿತ್ಸೆ ನೀಡಲು ಇದನ್ನು ಬಳಸಲಾಗುತ್ತದೆ. ಈ ದೈತ್ಯ ಮರಗಳನ್ನು ನೋಡಲು ನೀವು ಮಡಗಾಸ್ಕರ್‌ನವರೆಗೆ ಹೋಗಬೇಕಾಗಿಲ್ಲ. ಏಕೆಂದರೆ ಬೆಂಗಳೂರಿನಿಂದ ಸುಮಾರು 370 ಕಿಮೀ ದೂರದ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ದೊಡ್ಡಹುಣಸೆ ಮರದ ಮೈದಾನದಲ್ಲಿ ಮೂರು ದೈತ್ಯ ಬಾವೊಬಾಬ್ ಮರಗಳನ್ನು ನೋಡಬಹುದು. ಈ ಮರಗಳನ್ನು ಕೃಷ್ಣ ಪರಮಾತ್ಮ ನೆಟ್ಟಿದ್ದಾನೆ ಎಂಬುದು ಇಲ್ಲಿನವರ ನಂಬಿಕೆ. ಸಿದ್ದಿ ಬುಡಕಟ್ಟು ಜನಾಂಗದವರು ಆಫ್ರಿಕಾದಿಂದ ಬೀಜಗಳನ್ನು ಇಲ್ಲಿಗೆ ತಂದು ಬೆಳೆಸಿದರು ಎಂಬ ನಂಬಿಕೆಯೂ ಇದೆ. ಮರದ ಮೈದಾನದಲ್ಲಿ ತ್ರಿಕೋನ ರಚನೆ ಮಾಡಿ, ಮರಗಳ ರಕ್ಷಣೆಗಾಗಿ ರಾಜ್ಯ ಸರ್ಕಾರದಿಂದ ಬೇಲಿ ಹಾಕಲಾಗಿದೆ. ಈ ಮರಗಳ ಸುತ್ತಳತೆ ಸರಾಸರಿ 15 ಮೀಟರ್ ಹಾಗೂ ಎತ್ತರ 15 ಮೀಟರ್.

ಸೌಜನ್ಯ : ಸುಧಾ ಪತ್ರಿಕೆ

ಸಾಧಕರು

ಸಂಗ್ರಹ : ಡಾ. ವಸುಂಧರಾ ಭೂಪತಿ

ನ್ಯೂನತೆಯನ್ನು ಮೆಟ್ಟಿ ನಿಂತ ಅಪ್ರತಿಮ ಸಾಧಕಿ ಕೌರ್




ಹುಟ್ಟಿನಿಂದಲೇ ನ್ಯೂನತೆಗಳಿರುವುದು ಒಂದೆಡೆಯಾದರೆ ಜೀವನದ ದಾರಿಯಲ್ಲಿ ಅನಿರೀಕ್ಷಿತವಾಗಿ ಬರುವ ನ್ಯೂನತೆಗಳು ಇನ್ನೊಂದೆಡೆ. ಆದರೆ ಸಾಧನೆಗೆ ಇದು ಯಾವುದೂ ಅಡ್ಡಿಯಲ್ಲ ಎನ್ನುವುದನ್ನು ಹಲವರು ಈಗಾಗಲೇ ನಿರೂಪಿಸಿದ್ದಾರೆ. ಒಂದು ಅಪಘಾತ, ಬದುಕನ್ನೇ ಅಂಧಕಾರಕ್ಕೆ ದೂಡಿಬಿಡುತ್ತದೆ. ಹಲವು ಕನಸನ್ನು ನುಚ್ಚು ನೂರು ಮಾಡಿಬಿಡುತ್ತದೆ. ಆದರೆ ಕೆಲವೊಬ್ಬರು ಅಪಘಾತದಲ್ಲಾದ ನ್ಯೂನ್ಯತೆಯನ್ನೇ ಮರೆತು, ತಮಗೇನೂ ಆಗೇ ಇಲ್ಲವೆಂಬಂತೆ ಕಲ್ಪನೆಗೂ ಮೀರಿ ಸಾಧನೆ ಮಾಡುತ್ತಾರೆ. ಮುಖ್ಯವಾಗಿ ಸಾಧಿಸುವ ಛಲ ಬೇಕು. ಅದಕ್ಕಿಂತಲೂ ಹೆಚ್ಚಾಗಿ ಜೀವನ ಪ್ರೀತಿ ಇರಬೇಕು. ಶುಬ್ರೀತ್ ಕೌರ್ ನ್ಯೂನತೆಯನ್ನು ಮೆಟ್ಟಿ ನಿಂತು ಜನಪ್ರಿಯತೆಯ ಮೆಟ್ಟಿಲೇರಿದ ಅಪ್ರತಿಮ ಸಾಧಕಿ. ಪಂಜಾಬ್ ಮೂಲದ ಸುಬ್ರೀತ್ ತನ್ನ ಒಂದು ಕಾಲಿನಿಂದಲೇ ನೃತ್ಯ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗುತ್ತಿದ್ದಾರೆ. ಸಾಧನೆಗೆ ವೈಕಲ್ಯಗಳು ಎಂದಿಗೂ ಅಡ್ಡಿಯಾಗುವುದಿಲ್ಲ ಎನ್ನುವುದಕ್ಕೆ ಈಕೆ ಉದಾಹರಣೆ. 28ರ ಹರೆಯದ ಸುಬ್ರೀತ್ ಏಷ್ಯಾದ ಪ್ರಸಿದ್ಧ ರಿಯಾಲಿಟಿ ಶೋ ಒಂದರಲ್ಲಿ ಭಾಗವಹಿಸಿ ಜನಮನ ಗೆದ್ದಿದ್ದಳು. ಒಂದು ಕಾಲಿನ ನೃತ್ಯಗಾತಿ ಎಂದೇ ಪ್ರಸಿದ್ಧಿ ಪಡೆದಳು. 2014ರಲ್ಲಿ ರಿಯಾಲಿಟಿ ಶೋ ಒಂದರಲ್ಲಿ ಭಾಗವಹಿಸಿ ಪ್ರಸಿದ್ಧಿ ಪಡೆದಿದ್ದಾಳೆ. 2009ರಲ್ಲಿ ಸ್ಕೂಟರ್ ಸವಾರಿ ಮಾಡುತ್ತಿದ್ದಾಗ ಅಪಘಾತವಾಗಿ ತನ್ನ ಒಂದು ಕಾಲನ್ನು ಕಳೆದುಕೊಂಡಿದ್ದಳು. ನೃತ್ಯವೇ ಕನಸು ಎಂದುಕೊಂಡವಳಿಗೆ ಇದು ಬಹುದೊಡ್ಡ ಆಘಾತವಾಗಿ ಒಂದು ಕಾಲನ್ನು ಕಳೆದುಕೊಂಡರೂ ಅದು ಆಕೆಯ ಕನಸಿಗೆ ಭಂಗ ತರಲಿಲ್ಲ. ಸಾಧಿಸುವ ಛಲತೊಟ್ಟ ಆಕೆ ಮತ್ತೆ ನೃತ್ಯ ಮಾಡಲು ಆರಂಭಿಸಿದಳು. 2014ರಲ್ಲಿ ಇಂಡಿಯಾ ಗಾಟ್ ಟಾಲೆಂಟ್‌ನಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಳು. ಆದರೆ ಅವಳ ಹೋರಾಟದ ಹಾದಿ ಇನ್ನೂ ಮುಗಿದಿರಲಿಲ್ಲ. ನಿರಂತರ ಪರಿಶ್ರಮ, ಪ್ರಯತ್ನದಿಂದ ದೈಹಿಕ ನ್ಯೂನ್ಯತೆಯು ಸಾಧನೆಗೆ ಅತಿ ದೊಡ್ಡ ಸಮಸ್ಯೆ ಎನ್ನುವವರಿಗೆ ಧನಾತ್ಮಕತೆಯನ್ನು ಹರಡಲು ಸಾಮಾಜಿಕ ಜಾಲತಾಣವು ಸಹಕಾರಿಯಾಗಿದೆ ಎನ್ನುತ್ತಾರೆ ಸುಬ್ರೀತ್. ನ್ಯೂನತೆಯನ್ನು ಮೆಟ್ಟಿ ನಿಂತ ಈಕೆ ಯುವಜನತೆಗೆ ಸ್ಫೂರ್ತಿಯಾಗಿದ್ದಾಳೆ. ಸಾಧನೆಗೆ ನ್ಯೂನತೆಗಳು ಅಡ್ಡಿಯಾಗುವುದಿಲ್ಲ ಎಂದು ಜಗತ್ತಿಗೇ ಸಾರಲು ಹೊರಟಿರುವ ಕೌರ್ ನ್ಯೂನತೆಗಳ ಬಗ್ಗೆ ಕೀಳರಿಮೆ ಹೊಂದಿರುವವರಿಗೆ ಆದರ್ಶವಾಗಿದ್ದಾಳೆ.

ಸೌಜನ್ಯ : ಉದಯವಾಣಿ

ಸಾಮಾಜಿಕ ಮತ್ತು ಸಾಂಸ್ಕೃತಿಕ ಪುಟ

ಸಂಗ್ರಹ : ಅಖಿಲಾ ವಿದ್ಯಾಸಂದ್ರ


ಬೇಲೂರು, ಹಳೇಬೀಡು ದೇವಾಲಯ ಯುನೆಸ್ಕೋ ಪಟ್ಟಿಗೆ ಶಿಫಾರಸು



ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಹೊಯ್ಸಳ ದೇವಾಲಯಗಳು ಯುನೆಸ್ಕೋ ವಿಶ್ವಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಬೇಕು ಎಂದು ಕೇಂದ್ರ ಸರ್ಕಾರ ಯುನೆಸ್ಕೋಗೆ ನಾಮ ನಿರ್ದೇಶನ ಮಾಡಿದೆ. ಬೇಲೂರು, ಹಳೇಬೀಡು ವಿಶ್ವಪಾರಂಪರಿಕ ತಾಣದ ಪಟ್ಟಿಗೆ ಸೇರಲಿರುವ ಬೇಲೂರಿನ ಚನ್ನಕೇಶವ ದೇವಾಲಯ, ಹೇಳಬೀಡಿನಲ್ಲಿರುವ ಹೊಯ್ಸಳೇಶ್ವರ ಹಾಗೂ ಸೋಮನಾಥಪುರದ ಕೇಶವ ದೇವಾಲಯಗಳು ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಯ ಪ್ರತೀಕವಾಗಿದ್ದು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿವೆ. 12ನೇ ಶತಮಾನದಲ್ಲಿ ನಿರ್ಮಾಣವಾದ ಈ ಎಲ್ಲಾ ದೇವಾಲಯಗಳು ಪ್ರಸ್ತುತ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಸಂರಕ್ಷಿತ ಸ್ಮಾರಕಗಳಾಗಿವೆ. ಬೇಲೂರು ಚನ್ನಕೇಶನ ದೇವಾಲಯ ಯಗಚಿ ನದಿಯ ದಂಡೆಯ ಮೇಲಿದೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ, ದೇಶಗಳ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಬೇಲೂರು ಹಿಂದೆ ಹೊಯ್ಸಳರ ರಾಜಧಾನಿಯಾಗಿತ್ತು ಎನ್ನುತ್ತದೆ ಇತಿಹಾಸ. ಹಳೇಬೀಡಿನಲ್ಲಿ ಹೊಯ್ಸಳೇಶ್ವರ ದೇವಾಲಯ ವಿಷ್ಣುವರ್ಧನ ಮತ್ತು ಎರಡನೇ ಬಲ್ಲಾಳರಿಂದ ನಿರ್ಮಿಸಲ್ಪಟ್ಟಿದೆ. ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ಜೋಡಿ ದೇವಾಲಯಗಳು ಇದಾಗಿದ್ದು, ವಾಸ್ತು ಶಿಲ್ಪಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ರಾಮಾಯಣ, ಮಹಾಭಾರತ, ಭಾಗವತಗಳಲ್ಲಿನ ದೃಷ್ಟಾಂತಗಳನ್ನು ಈ ದೇಗುಲಗಳ ಹೊರಗೋಡೆಗಳ ಮೇಲೆ ಚಿತ್ರಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿರುವ ಸೋಮನಾಥಪುರದ ಕೇಶವ ದೇವಾಲಯ ಹೊಯ್ಸಳರ ರಾಜನಾದ 3ನೇ ನರಸಿಂಹನ ಆಸ್ಥಾನದಲ್ಲಿ ಸೇನಾ ದಂಡನಾಯಕನಾಗಿದ್ದ ಸೋಮನಾಥ 1254–2191ರ ನಡುವೆ ನಿರ್ಮಾಣ ಮಾಡಿದನು ಎಂಬ ಇತಿಹಾಸವಿದೆ. ನಕ್ಷತ್ರಾಕಾರದ ಜಗುಲಿಯ ಮೇಲೆ ಈ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ವೇಣುಗೋಪಾಲ, ಕೇಶವ, ಜನಾರ್ದನನ ವಿಗ್ರಹಗಳು ದೇವಾಲಯದಲ್ಲಿವೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಈ ದೇವಾಲಯವನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಣೆ ಮಾಡಿದೆ.

ಸೌಜನ್ಯ : ಒನ್ ಇಂಡಿಯಾ

ಭಾರತದ ಬಜೆಟ್‌ಗಿದೆ 162 ವರ್ಷಗಳ ಇತಿಹಾಸ



ಕೊರೊನಾ ಇರಲಿ, ಬೇರೆ ಯಾವುದೇ ಸಂಕಷ್ಟವೇ ಬರಲಿ. ಬಜೆಟ್ ಮಂಡನೆ ಮಾತ್ರ ಎಂದಿಗೂ ನಿಲ್ಲುವಂತಿಲ್ಲ. ಬದಲಿಗೆ, ದೇಶಕ್ಕೆ ವಿಷಮ ಕಾಲ ಬಂದಂತೆಲ್ಲ ಬಜೆಟ್‌ನಮಹತ್ವ, ಜವಾಬ್ದಾರಿಗಳು ಹೆಚ್ಚುತ್ತಲೇ ಹೋಗುತ್ತವೆ. ಬ್ರಿಟಿಷರ ಕಾಲದಿಂದ ದೇಶದಲ್ಲಿ ಬಜೆಟ್ ಮಂಡನೆಯ ಪರಂಪರೆ ಆರಂಭವಾಯಿತು. ಅಧಿಕೃತವಾಗಿ ಹೇಳುವುದಾದರೆ ಭಾರತದಲ್ಲಿ ಬಜೆಟ್ ಮಂಡನೆ ಶುರುವಾದ 162ನೇ ವರ್ಷವಿದು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದದ್ದು 1857. ಬ್ರಿಟಿಷರು ಈ ಹೋರಾಟವನ್ನು ಸಿಪಾಯಿ ದಂಗೆ ಎಂದು ಕರೆದರು. ಅದರ ಪರಿಣಾಮಗಳ ತೀವ್ರತೆ ಕಡಿಮೆ ಮಾಡಲು ಯತ್ನಿಸಿದರಾದರೂ, ಭಾರತವನ್ನು ಇನ್ನಷ್ಟು ವರ್ಷಗಳ ಹಿಡಿತದಲ್ಲಿರಿಸಿಕೊಳ್ಳಬೇಕೆಂದರೆ ಆಡಳಿತ ಸುಧಾರಣೆ ಅನಿವಾರ್ಯ ಎಂದು ಬ್ರಿಟಿಷರಿಗೆ ಮನವರಿಕೆಯಾಯಿತು. ಭಾರತದ ಆಡಳಿತ ಚುಕ್ಕಾಣಿಯು ಈಸ್ಟ್ ಇಂಡಿಯಾ ಕಂಪನಿಯಿಂದ ನೇರವಾಗಿ ಬ್ರಿಟನ್ ಸರ್ಕಾರದ ಸುಪರ್ದಿಗೆ ಬಂದಿತು. ಈ ಬೆಳವಣಿಗೆಯಾದ ಎರಡು ವರ್ಷಕ್ಕೆಲ್ಲ, ಅಂದರೆ 1860ರಲ್ಲೇ ಮೊದಲ ಬಜೆಟ್ ಮಂಡನೆಯಾಗಿತ್ತು. ಬ್ರಿಟಿಷ್ ಆಡಳಿತದಲ್ಲಿ ಮೊದಲ ಬಜೆಟ್ ಮಂಡನೆಯ ಹಿಂದೆ ಟೋಪಿ ತಯಾರಕರೋರ್ವರು ಇದ್ದರು. ಸ್ವಾತಂತ್ರ್ಯಾಪೂರ್ವದಲ್ಲೇ ಮಂಡನೆಯಾದ ಮೊದಲ ಬಜೆಟ್‌ನ ರೂವಾರಿ ಸ್ಕಾಟ್ಲ್ಯಾಂಡ್‌ನ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೇಮ್ಸ್ ವಿಲ್ಸನ್. ಟೋಪಿ ತಯಾರಿಕೆಯ ಮೂಲಕ ವೃತ್ತಿ ಜೀವನ ಆರಂಭಿಸಿದ ಜೇಮ್ಸ್ ವಿಲ್ಸನ್ ಬ್ರಿಟನ್ ಸಂಸತ್‌ನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಭಾರತದ ಸರ್ಕಾರಿ ಆರ್ಥಿಕ ವ್ಯವಸ್ಥೆಯಲ್ಲಿ ಬ್ರಿಟಿಷ್ ಮಾದರಿಯ ಅಡಿಪಾಯ ಹಾಕಿದವರ ಸಾಲಲ್ಲಿ ಜೇಮ್ಸ್ ವಿಲ್ಸನ್ ಹೆಸರು ಮೊದಲ ಸಾಲಲ್ಲಿ ನಿಲ್ಲುತ್ತದೆ ಎಂದು ಸರ್ ರಿಚರ್ಡ್ ಟೆಂಪಲ್ ಅವರು "ಫೈನಾನ್ಶಿಯಲ್ ಫೌಂಡೇಶನ್ ಆಫ್ ದಿ ಬ್ರಿಟಿಷ್ ರಾಜ್" ಎಂಬ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ವ್ಯಾಪಾರ ವಹಿವಾಟುಗಳಿಗೆ ಸರ್ಕಾರ ಭದ್ರತೆ ನೀಡುತ್ತದೆ. ಹೀಗಾಗಿ, ಸರ್ಕಾರಕ್ಕೆ ತೆರಿಗೆ ನೀಡಬೇಕೆಂದು ಬಹುವಾಗಿ ಜೇಮ್ಸ್ ವಿಲ್ಸನ್ಸ್ ಪ್ರತಿಪಾದಿಸಿದ್ದರು. ಪ್ರಸಿದ್ಧ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಸ್ಥಾಪಿಸಿದವರೂ ಇವರೇ ಆಗಿದ್ದಾರೆ. ಪತ್ರಿಕೋದ್ಯಮದಲ್ಲೂ ಹೆಸರೊತ್ತಿದ್ದ ಇವರು, ಈಗ ಜಗತ್ತಿನಾದ್ಯಂತ ಹೆಸರುವಾಸಿಯಾಗಿರುವ 'ದಿ ಎಕನಾಮಿಸ್ಟ್' ನಿಯತಕಾಲಿಕೆಯ ಸ್ಥಾಪಕ ಸಂಪಾದಕರಾಗಿ 16 ವರ್ಷ ಸೇವೆ ಸಲ್ಲಿಸಿದ್ದರು. ಟೋಪಿ ತಯಾರಿಕೆಯಿಂದ ವೃತ್ತಿ ಜೀವನ ಆರಂಭಿಸಿ, ವಸಾಹತು ಭಾರತದ ಬಜೆಟ್ ರೂಪಿಸುವವರೆಗೆ ಬೆಳೆದ ಜೇಮ್ಸ್ ವಿಲ್ಸನ್‌ನನ್ನು ಬಡ್ಜೆಟ್ ಮಂಡನೆ ವೇಳೆ ಸ್ಮರಿಸಲೇಬೇಕು.

ಸೌಜನ್ಯ : ಟಿ.ವಿ.9 ಕನ್ನಡ

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

A theory began to emerge. Perhaps the virus mutated when it passed through a human carrier, This, in fact,is the principle behind the production of vaccines. The virulencecence of the virus is softened by passing it through several animals until it no longer has the power to infect, but does have the ability to produce antibodies. The suspicion remained strong that a rodent or bat was the source. The new reports from Atlanta on Monath's bats and rats still showed no virus, however. Meanwhile, precious quotas of immune plasma were distributed to Ibadan, Jos and Zorzor in case of another emergency-although in any real crisis it would be woefully inadequate. THEN, three months after the terror had died down in Zorzor, several suspicious fever illnesses began developing in the Panguma Catholic Hospital in Sierra Leone, some 150 km from Zorzor. The patients had drifted slowly over many months. A number of deaths had been reported. In Atlanta, Tom Monath cabled. Panguma that there was a possibility it might be Lassa, although it was not typical for the disease to move so slowly. But Lassa fever seemed to be able to make its laws. He requested serum-blood specimens and drew up acontingency plan with others at the laboratory. Should the specimen tests confirm Lassa, a team of doctors and scientists, including Monath, Casals and Kemp, would be fiown to the stricken area. When the tests were completed, they clearly showed Lassa and the team left for Africa, arriving at Panguma to find that 64 cases had occurred, with 23 deaths. The outbreak appeared to be more dangerous than previous ones, for it was not just hospital-transmitted. The disease passed from village to village, and probable cases began showing up in other hospitals in the region. Among the animals being caught here were many types of rodents, which villagers chased out of the bush and ate. Suspicions began growing, and a special effort was made to get as many as possible. Cases continued to appear in Sierra Leone, but the crisis was over. Tom Monath returned to At lanta to help with the complex tests that he hoped would establish a specific rat as the carrier. A preliminary finding had indicated that one type of rodent might indeed be the culprit. He brought each sample, wrapped in a sealed plastic bag, into the laboratory through a "dunk" tank filled with chlorine bleach. Then, inside the steel-and-glass isolator, his hands punched into the long rubber gloves, he proceeded with the awkward work demanded by the hot-lab routine.

To be continueed...

Statement About Ownership and other particulars of Bapu Prapancha, Bengaluru as required under Rule of the registration of Newspapers (Press & Registration Book 1867)

1.	Place of Publication	Bengaluru
2.	Periodically Publication	Monthly
3.	Printer's Name	Creativegeekz
	Nationality	Indian
	Address	# 58, Yadhava College Road, Madhavanagara, Bengaluru - 560001, Ph : 080 40927049
4.	Publisher's Name	Indira Krishnappa
	Nationality	Indian
	Address	Karnataka Gandhi Smaraka Nidhi, Gandhi Bhavana, Kumarapark East, Bengaluru - 560001
5.	Editor in Chief	Dr. Wooday P. Krishna
	Address	Karnataka Gandhi Smaraka Nidhi, Gandhi Bhavana, Kumarapark East, Bengaluru - 560001
6.	Name & Address of individuals who own the Newspaper	Karnataka Gandhi Smaraka Nidhi, Gandhi Bhavana, Kumarapark East, Bengaluru - 560001

I Indira Krishnappa hereby declare that the particulars given above are true to the best of my knowledge and belief

Sd-

20.03.2022

Indira Krishnappa
Pulisher

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಫೆಬ್ರವರಿ ತಿಂಗಳ ಬಾಪು ಪ್ರಪಂಚ ಸಂಚಿಕೆಯಲ್ಲಿ ಲೋಕಮಾನ್ಯರು, ಸಾವಿತ್ರಿಬಾ ಫುಲೆ ನೇತಾಜಿ, ಬಾಬೂಜಿ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ಜನತೆಯ ಒಳಿತಿಗಾಗಿ ತಮ್ಮನ್ನು ಸಮರ್ಪಿಸಿಕೊಂಡ ಬಗೆಯ ಇಂಚಿಂಚು ಮಾಹಿತಿಯುಳ್ಳ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವುದು ಸಂತೋಷದ ವಿಷಯವಾಗಿದೆ. ಸಂಪಾದಕ ಮಂಡಳಿಗೆ ವಂದನೆಗಳು

ಡಾ. ವಿ.ಎಸ್. ಪಾರ್ವತಿ

ಮಾನ್ಯರೇ,

ನಾನು ಗುರುವಾರ, 10 ಫೆಬ್ರವರಿ 2022ರಂದು ನಡೆದ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿದ್ದ "ಗಡಿನಾಡ ಚೇತನ" ಪ್ರಶಸ್ತಿ ಸಮಾರಂಭದಲ್ಲಿ ನಡೆದ ವಿಚಾರ–ಮಂಥನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಗಾಂಧಿ ಭವನದ ಸದಸ್ಯರುಗಳಿಗೆ ಹೃತ್ಪೂರ್ವಕ ವಂದನೆಗಳನ್ನು ತಿಳಿಸುತ್ತಾ, ನನ್ನ ಕೆಲವು ವಿಚಾರಗಳನ್ನು ಪ್ರಸ್ತುತ ಪಡಿಸುತ್ತೇನೆ. ಮದ್ರಾಸ್ ಪ್ರಾಂತದ ಬಳ್ಳಾರಿ ಜಿಲ್ಲೆಯ ಧರ್ಮಾವರಂ, ಕಲ್ಯಾಣದುರ್ಗ, ರಾಯದುರ್ಗ ಮತ್ತು ಕರ್ನಾಟಕದ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ ಪೆನುಕೊಂಡ, ಹಿಂದುಪುರ, ಪುಟಪರ್ತಿ ಮತ್ತು ಮಡಶಿರಾಗಳ ಮನಃಸ್ಥಿತಿಗಳು ಜನರ ಭಾವನೆಗಳು, ಆಚಾರ–ವಿಚಾರಗಳಿಗೆ ಸ್ಪಂದಿಸಿ ಜನರ ಆಶೋತ್ತರಗಳನ್ನು ಅರಿತುಕೊಳ್ಳುವ ಪ್ರಯಾಸ ಮಾಡಬೇಕು. ಎಲ್ಲಾ ಭಾಷೆಯ ಜನ ಎಲ್ಲಾ ರಾಜ್ಯಗಳಲ್ಲೂ ಇದ್ದಾರೆ. ಆದ್ದರಿಂದ "ಎಲ್ಲಾದರು ಇರು, ಎಂತಾದರು ಇರು ಮೊದಲು ಮಾನವನಾಗಿರು ಹಾಗೆಯೇ ಕನ್ನಡವಾಗಿರು" ಎಂಬ ರಾಷ್ಟ್ರಕವಿ ಕುವೆಂಪು ಅವರ ಮನಃದ ಇಂಗಿತವನ್ನು ಅರಿತುಕೊಳ್ಳುವುದು ಲೇಸು. ಇದು ನನ್ನ ನಿಲುವು ಮುಂದಿನ "ಬಾಪು ಪ್ರಪಂಚ" ಸಂಚಿಕೆಯನ್ನು ಎದುರು ನೋಡುತ್ತಿರುವೆ.

ಡಾ. ಶ್ರೀನಿವಾಸ ದಂಡಿನ
ಅನಂತಪುರ, ಆಂಧ್ರಪ್ರದೇಶ

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಸಂಚಿಕೆಯು ವಿಶಿಷ್ಟ ಲೇಖನಗಳಿಂದ ಮೂಡಿಬರುತ್ತಿದ್ದು, ಯುವಜನತೆಗೆ ಪೂರಕವಾದ ಅಂಶಗಳನ್ನು ಒಳಗೊಂಡಿದೆ.

ಡಾ. ವಿ. ಪ್ರಶಾಂತ, ವಿಜಯಪುರ

ಫೆಬ್ರವರಿ ತಿಂಗಳ ಬಾಪು ಪ್ರಪಂಚ ಸಂಚಿಕೆಯಲ್ಲಿ ಅಕ್ಷರದವ್ವ ಸಾವಿತ್ರಿ ಬಾಫುಲೆ, ಜಗಜೀವನರಾಂ ಮತ್ತು ತಿಲಕರ ಲೇಖನಗಳು ಸ್ವಾತಂತ್ರ್ಯ ಪೂರ್ವದಲ್ಲಿ ಅವರು ಸಲ್ಲಿಸಿದ ದೇಶಸೇವೆಯನ್ನು ಮರು ಅನಾವರಣಗೊಳಿಸುತ್ತದೆ.

ಡಾ. ಪೂರ್ಣಿಮ

ಬಾಪು ಪ್ರಪಂಚ ಪತ್ರಿಕೆಯು ಸಂಕೀರ್ಣಾಧಾರಿತವಾಗಿದ್ದು ಶಿಕ್ಷಣ, ಆರೋಗ್ಯ, ಪರಿಸರ, ಸ್ವಾತಂತ್ರ್ಯ ಹೋರಾಟ, ಮಹನೀಯರುಗಳ ಪರಿಚಯ, ವಿಶೇಷ ಸುದ್ದಿಗಳು, ಸಾಮಾಜಿಕ ಪರಿವರ್ತನೆಗೆ ಪೂರಕವಾಗುವ ಲೇಖನಗಳಿಂದ ವಿಭಿನ್ನವಾಗಿ ಮೂಡಿಬರುತ್ತಿದೆ.

ಡಾ. ಎಸ್.ಜಿ. ಸುಶೀಲಮ್ಮ
ಸುಮಂಗಲಿ ಸೇವಾಶ್ರಮ

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಸಾಮಾಜಿಕ, ಶಿಕ್ಷಣ ಹಾಗೂ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಮಹಾನ್ ವ್ಯಕ್ತಿಗಳ ಪರಿಚಯವನ್ನು ಬಾಪು ಪ್ರಪಂಚ ಪ್ರತಿ ಸಂಚಿಕೆಯಲ್ಲೂ ಹೊತ್ತು ತರುತ್ತಿದೆ. ಸಂಪಾದಕ ಮಂಡಳಿಗೆ ಅಭಿನಂದನೆಗಳು.

ಅಖಿಲಾ ವಿದ್ಯಾಸಂದ್ರ

ಕನ್ನಡ ನಾಡು ನುಡಿಗಾಗಿ ಸಾಹಿತ್ಯ, ಶಿಕ್ಷಣ, ಸಾಮಾಜಿಕ ಕ್ಷೇತ್ರಗಳಲ್ಲಿ ಹೋರಾಟ ನಡೆಸಿದ ಹಲವಾರು ಮಹಾನ್ ವ್ಯಕ್ತಿಗಳ ಪರಿಚಯವನ್ನು ಬಾಪು ಪ್ರಪಂಚ ಸಂಚಿಕೆಯಲ್ಲಿ ವಿಸ್ತೃತವಾಗಿ ಮೂಡಿ ಬರುತ್ತಿದೆ.

ಡಾ. ರಾಮಲಿಂಗೇಶ್ವರ (ಸಿಸಿರಾ)

ಗಾಂಧಿ ಭವನವು ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಪರಿಸರ ಕಾಳಜಿ, ಸ್ವಚ್ಛತೆ, ಶ್ರಮದಾನ, ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆಗಳಂತ ಅನೇಕ ಸಮಾಜಮುಖಿ ಕೆಲಸಗಳನ್ನು ಸಮಾಜದ ಎಲ್ಲ ಸ್ತರದ ಜನತೆಗೆ ತಲುಪಿಸುತ್ತಿದೆ. ಇವುಗಳಲ್ಲಿ ಬಾಪು ಪ್ರಪಂಚ ಪತ್ರಿಕೆಯು ಮಹತ್ವದ್ದಾಗಿದೆ.

ನಾಗರಾಜ್, ಮೈಸೂರು

ಗಾಂಧಿ ಭವನದ ಹೆಮ್ಮೆಯ ಪ್ರಕಟಣೆಯಲ್ಲೊಂದಾದ ಬಾಪು ಪ್ರಪಂಚ ಪತ್ರಿಕೆಯು ಗಾಂಧೀಜಿ ಅವರ ಜೀವನಾನುಭವ, ತಿಲಕ್, ಸಾವಿತ್ರಿಬಾ ಫುಲೆ, ಅಂಬೇಡ್ಕರ್, ಬಾಬೂಜಿ ಅವರ ಸೇವಾ ಕೈಂಕರ್ಯಗಳನ್ನು ಕನ್ನಡಿಯ ಬಿಂಬವಾಗಿ ಓದುಗರಿಗೆ ತಲುಪಿಸುತ್ತಿದೆ. ತಮಗೆ ಧನ್ಯವಾದಗಳು.

ಮಹಾಂತೇಶ್, ರಾಮದುರ್ಗ

ಗಾಂಧಿ ಅವರ ರಚನಾತ್ಮಕ ಕಾರ್ಯಗಳನ್ನು ಧ್ಯೇಯವೆಂಬಂತೆ ಗಾಂಧಿ ಭವನವು ಸಮಾಜಕ್ಕೆ, ಯುವಜನತೆಗೆ ತಲುಪಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ, ಶ್ರದ್ಧೆ ಹಾಗೂ ಪರಿಸರದ ಅರಿವು, ಜಾಗೃತೆ ಮೂಡಿಸುವಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಲ್ಲದೆ, ಮಹಾತ್ಮ ಗಾಂಧಿ ಮತ್ತು ಅವರ ಅನುಯಾಯಿಗಳು, ದೇಶಕ್ಕಾಗಿ ದುಡಿದ ಮಹನೀಯರು, ಮಹಿಳೆಯರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಅಸಂಖ್ಯ ವೀರಯೋಧರ ಕುರಿತಾದ ಲೇಖನ, ಪುಸ್ತಕಗಳ ಪ್ರಕಟನೆ ಸಮಾಜಕ್ಕೆ ಪೂರಕವಾದ ಅನೇಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಸುತ್ಯಾರ್ಹವಾಗಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬಾಪು ಪ್ರಪಂಚ ಪತ್ರಿಕೆಯು ಸಂಚಿಕೆಯಿಂದ ಸಂಚಿಕೆಗೆ ವಿಭಿನ್ನ ಹಾಗೂ ವಿಷಯಾಧಾರಿತವಾಗಿ ಮೂಡಿಬರುತ್ತಿರುವುದು ಹೆಮ್ಮೆಯ ಸಂಕೇತವಾಗಿದೆ. ಗಾಂಧಿ ಭವನದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಮಹೇಶ್

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆಯು ಇಂದಿನ ಯುವಜನತೆಗೆ ಮಾದರಿಯಾಗುವಂತಹ ಅತ್ಯಮೂಲ್ಯವಾದ ಲೇಖನಗಳನ್ನೊತ್ತು ಮೂಡಿ ಬರುತ್ತಿದೆ. ಮಹಾತ್ಮ ಗಾಂಧಿ ಅವರ ತತ್ತ್ವ ಸಿದ್ಧಾಂತಗಳು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಮಹಿಳೆಯರು, ಮಹನೀಯರುಗಳ ಪರಿಚಯ, ದೇಶದ ಔನ್ನತ್ಯಕ್ಕಾಗಿ ದುಡಿದ ಮಹಾಪುರುಷರ ವ್ಯಕ್ತಿ ವಿಶೇಷಗಳು, ಕನ್ನಡ ನಾಡಿಗಾಗಿ ಸಮರ್ಪಿಸಿಕೊಂಡ ಸಾಹಿತಿಗಳು, ಹೋರಾಟಗಾರರ ಕಥನಗಳು ಪತ್ರಿಕೆಯ ಅಂದವನ್ನು ಇಮ್ಮಡಿಗೊಳಿಸಿದೆ. ಗಾಂಧಿ ಭವನದ ಈ ಕಾರ್ಯವು ಶ್ಲಾಘನೀಯವಾಗಿದೆ.

ತಮಗೆ ಧನ್ಯವಾದಗಳು.

ಕೃಷ್ಣ ಹಾನ್‌ಬಾಳ್, ಸಾಹಿತಿಗಳು

ಬಾಪು ಪ್ರಪಂಚ ಸಂಚಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನಗಳು ಮಹತ್ವಪೂರ್ಣವಿಷಯುಗಳೊಂದಿಗೆ ಮಹಾನ್ ಪುರುಷರ ಸಾಮಾಜಿಕ ಕಳಕಳಿ, ಹೋರಾಟ, ನಿಸ್ವಾರ್ಥ ಸೇವೆ, ಸಮರ್ಪಣಾಭಾವ, ಅವರು ಸಮಾಜಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡ ಬಗೆ ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ.

ಯೋಗೀಶ್

ಗಾಂಧಿ ಭವನದ ಕಾರ್ಯಕ್ರಮಗಳು



ಸ್ವಾಮಿ ವಿವೇಕಾನಂದ ಐಟಿಐ ಕಾಲೇಜು ವಿಜಯಪುರದಲ್ಲಿ ದಿನಾಂಕ: 21.2.2022ರಂದು ವಿಶ್ವ ವಿದ್ಯಾನಿಲಯ ಮಟ್ಟದ ಶ್ರಮದಾನ ಶಿಬಿರದಲ್ಲಿ ಮಲ್ಲಿಕಾರ್ಜುನ ಶಿ. ಮಾಲಿ, ಶ್ರೀನಾಥ್, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಬಿ.ವಿ. ಭಾರತಿ, ಸೈಯದ್ ರಫೀಕ್, ವಿ.ಎಂ. ಸೂರ್ಯಪ್ರಕಾಶ್, ನಂದೀಶ, ಆರ್. ಅಕ್ಷಯ್ ಹಾಗೂ ಡಾ.ವಿ. ಪ್ರಶಾಂತ ಇದ್ದಾರೆ.



ಬೇಲೂರಿನ ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿ.22.2.2022 ರಂದು ಒಂದು ದಿನದ ವಿಶ್ವ ವಿದ್ಯಾನಿಲಯ ಮಟ್ಟದ ಶ್ರಮದಾನ ಶಿಬಿರದ ಕಾರ್ಯಕ್ರಮದಲ್ಲಿ ಇಂದಿರಾ ಕೃಷ್ಣಪ್ಪ, ಹೆಚ್.ಆರ್. ಮನೋಹರ್, ಶ್ಯಾಮಲಾ, ಆರ್.ಅಕ್ಷಯ್. ಡಾ.ವಿ. ಪ್ರಶಾಂತ ಮತ್ತಿತರರು ಇದ್ದಾರೆ.



ಹಾಸನದ ಬೇಲೂರು ಗ್ರಾಮದಲ್ಲಿ ದಿ. 22.2.2022ರಂದು ಮಾತೃ ದಿನಾಚರಣೆ ಹಾಗೂ ಕಸ್ತೂರಬಾ ಅವರ ಸಂಸ್ಮರಣೆಯಲ್ಲಿ ನಾಡೋಜ ಪದ್ಮಶ್ರೀ ಡಾ. ಸಾಲುಮರದ ತಿಮ್ಮಕ್ಕ ಅವರಿಗೆ ಗೌರವಾರ್ಪಣೆ ಸಂದರ್ಭದಲ್ಲಿ ಕ.ಗಾಂ.ಸ್ಮಾ.ನಿಧಿ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಸುಮಂಗಲಿ ಸೇವಾಶ್ರಮದ ಶ್ಯಾಮಲಾ, ರಾ.ಯು.ಯೋ.ದ ಡಾ.ವಿ. ಪ್ರಶಾಂತ, ಹೆಚ್.ಶರತ್, ಯ ಆರ್. ಅಕ್ಷಯ್ ಚಿತ್ರದಲ್ಲಿದ್ದಾರೆ.





ಅರಸೀಕೆರೆ ಕಸ್ತೂರಿ ಬಾ ಗಾಂಧಿ ಆಶ್ರಮದಲ್ಲಿ ದಿನಾಂಕ 27.2.2022ರಂದು ಆಚರಿಸಿದ ಮಾತೃ ದಿವಸ ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಕೆ ಎಂ ಶಿವಲಿಂಗೇಗೌಡ ನಾಡೋಜ ಡಾ. ವೂಡೇ ಪಿ. ಕೃಷ್ಣ, ಹಾಸನ ಕೃಷಿ ಕಾಲೇಜಿನ ಡೀನ್ ಡಾ. ವಾಸುದೇವನ್, ಪ್ರತಿನಿಧಿ ಡಾ ಉಷಾ ಅಬ್ರಾಲ್, ಟ್ರಸ್ಟಿ ಪ್ರೊ ಜಿ.ಬಿ. ಶಿವರಾಜು, ಡಾ. ಪ್ರಕಾಶ್, ಜ.ನಾ. ತೇಜಶ್ರೀ ಮತ್ತು ಹಾಸನ ಕೃಷಿ ಕಾಲೇಜು, ಚನ್ನರಾಯಪಟ್ಟಣದ ಪ್ರಥಮ ದರ್ಜೆ ಕಾಲೇಜು, ಕೋಣಂದೂರು ಕಾಲೇಜಿನ ವಿದ್ಯಾರ್ಥಿಗಳು ಶ್ರಮದಾನದಲ್ಲಿ ಇದ್ದಾರೆ.





ಗಾಂಧಿ ಭವನದಲ್ಲಿ ದಿನಾಂಕ 28.02.2022ರಂದು ಡಾ. ಕೆ ನಾಗಪ್ಪ ಆಳ್ವ ಮತ್ತು ಶ್ರೀಮತಿ ಕಲ್ಯಾಣಿ ಆಳ್ವ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಶಿವರುದ್ರ ಮಹಾಸ್ವಾಮಿಗಳು ಶ್ರೀ ಬೇಲಿಮಠ, ಮಹಾಸಂಸ್ಥಾನ ಶ್ರೀ ಶೃತಿಪ್ರಿಯ, ಸಂಪನ್ಮೂಲ ವ್ಯಕ್ತಿಗಳು, ಶ್ರೀ ಕೆ. ಮೋಹನದೇವ ಆಳ್ವ, ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ, ಗೌ. ಕಾರ್ಯದರ್ಶಿಗಳಾದ ಇಂದಿರಾ ಕೃಷ್ಣಪ್ಪ ಮತ್ತು ವಿದ್ಯಾರ್ಥಿನಿಯರು ಚಿತ್ರದಲ್ಲಿದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು



ಶಿಡ್ಲಘಟ್ಟದ ಸುಗಟೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ದಿ7.3.2022ರಂದು ನಡೆದ ಮಹಿಳಾ ದಿನಾಚರಣೆಯಲ್ಲಿ ಗ್ರಾ.ಪಂ. ಅಧ್ಯಕ್ಷೆ ಶಾಂತಮ್ಮ ದೇವರಾಜು, ಜ್ಞಾನಜ್ಯೋತಿ ಶಾಲೆಯ ಪ್ರಾಂಶುಪಾಲರಾದ ಮನುಶ್ರೀ, ಪ್ರಗತಿ ಕಾಲೇಜಿನ ಪ್ರಾಂಶುಪಾಲರಾದ ಜಿ. ಭಾರತಿ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಬೆಂಗಳೂರು ಉತ್ತರ ವಿ.ವಿ.ಯ ಉಪ ಕುಲಪತಿಗಳಾದ ಡಾ. ನಿರಂಜನ ವಾನಳ್ಳಿ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ. ವಿ. ಪ್ರಶಾಂತ, ಎಂ. ನಾಗರಾಜು, ನಾರಾಯಣಸ್ವಾಮಿ, ಎಲ್ ನಾರಾಯಣ ಸ್ವಾಮಿ ಮುನಿವೆಂಕಟಶೆಟ್ಟಿ, ಬಚ್ಚೇಗೌಡ ಉಮಾದೇವಿ,



ಓಂಕಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣ ನಾರಾಯಣಪುರದಲ್ಲಿ ದಿ. 10.3.2022 ನಡೆದ ದೀಪೋತ್ಸವ ಕಾರ್ಯಕ್ರಮದಲ್ಲಿ ಕ.ಗಾಂ.ಸ್ಮಾ.ನಿ. ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ರುದ್ರಪ್ಪ, ಎಚ್.ಎಸ್. ಮುನಿರಾಜು, ಶ್ರೀನಿವಾಸಮೂರ್ತಿ ಎನ್., ಎಸ್.ಎಸ್ ಪ್ರದೀಪ, ಬಿ.ವಿ. ಭಾರತಿ, ಎಸ್.ಎ. ನಾಗೇಶ್ ಇದ್ದರು.



ಗಾಂಧಿ ಭವನದಲ್ಲಿ ದಿ.13.3.2022ರಂದು ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ರಾ.ಸೇ.ಯೋ. ಯುವಸಬಲೀಕರಣ ಇಲಾಖೆ ಮತ್ತು ಕ.ಗಾಂ.ಸ್ಮಾ.ನಿಧಿ ಸಂಯುಕ್ತಾಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ಯುವಜನ ಸಮಾವೇಶದಲ್ಲಿ ನಾಡೋಜ ಡಾ. ಹಂಪನಾ, ನಾಡೋಜ ಡಾ. ಕಮಲಾ ಹಂಪನಾ, ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ ವೂಡೇ ಪಿ. ಕೃಷ್ಣ, ನ್ಯಾಯವಾದಿ ನಂಜಪ್ಪ ಕಾಳೇಗೌಡ, ಸಾಹಿತಿ ಶಶಿಕಾಂತರಾವ್, ಇಂದಿರಾ ಕೃಷ್ಣಪ್ಪ, ಡಾ. ರಾಮಲಿಂಗೇಶ್ವರ ಮತ್ತು ಸಮಾವೇಶದ ಅಧ್ಯಕ್ಷರಾದ ಸಂಗಮೇಶ್ ಉಪಾಸೆಯವರ ಇದಾರೆ.



ಶೇಷಾದ್ರಿಪುರಂ ಪ್ರೌಢಶಾಲೆಯಲ್ಲಿ ದಿ.14.3.2022ರಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ವಿದ್ಯಾರ್ಥಿಗಳಿಗೆ ಗಾಂಧಿ ವಿವೇಕಾನಂದರ ಚಿಂತನೆಗಳ ಉಪನ್ಯಾಸದಲ್ಲಿ ಇಂದಿರಾ ಕೃಷ್ಣಪ, ಡಾ.ಬಿ.ಎಸ್. ಅಶೋಕ್ ಕುಮಾರ್, ಮುಖ್ಯೋಪಾಧ್ಯಾಯರಾದ ಚವ್ಹಾಣ್, ವೇದಾವತಿ, ಡಾ. ರಾಮಲಿಂಗೇಶ್ವರ ಇದ್ದಾರೆ



ಚನ್ನಪಟ್ಟಣ ತಾಲ್ಲೂಕಿನ ಕುಡಿಕೆ ಬೇವೂರು ಶ್ರೀ ಸಿದ್ಧರಾಮೇಶ್ವರ ವಿದ್ಯಾಸಂಸ್ಥೆಯಲ್ಲಿ ದಿ. 04.03.2022 ರಂದು ನಡೆದ ಪ್ರತಿಭಾ ಪುರಸ್ಕಾರ, ಗಾಂಧಿ ವಿಚಾರೋಪನ್ಯಾಸ ಮತ್ತು ಮಕ್ಕಳಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಪ್ರೊ. ಜಯರಾಂ, ಬಿ.ಕೆ. ಲಕ್ಷ್ಮಣ್, ಡಾ. ರಾಮಲಿಂಗೇಶ್ವರ, ಸಿದ್ಧಲಿಂಗಯ್ಯ ಮತ್ತಿತರರು ಇದ್ದಾರೆ..



ಶೇಷಾದ್ರಿಪುರಂ ಕಾಲೇಜಿನಲ್ಲಿ ದಿ.14.03.2022ರಂದು ಜೀವನ ಮೌಲ್ಯಗಳ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ನಾಡೋಜ ಡ. ವೂಡೇ ಪಿ. ಕೃಷ್ಣ, ಇಂದಿರಾ ಕೃಷ್ಣಪ್ಪ, ದಯಾನಂದ್, ಡಾ. ಹೆಚ್.ಎನ್. ಮೀರಾ, ಮಂಜುನಾಥ್ ಹೆಚ್. ಮತ್ತು ಡಾ. ರಾಮಲಿಂಗೇಶ್ವರ ಇದ್ದಾರೆ.

ಪತ್ರಿಕಾ ವರದಿಗಳು

ಪ್ರಜಾ ಪ್ರಗತಿ

ಸೇವೆ, ತ್ಯಾಗ ನಮ್ಮ ದೇಶದ ಎರಡು ಆದರ್ಶಗಳು

ಶೇಷ ವಿಶ್ವವಿದ್ಯಾಲಯ ಮಟ್ಟದ ಶ್ರಮದಾನ ಶಿಬಿರದಲ್ಲಿ ಇಂದಿರಾ ಕೃಷ್ಣಪ್ಪ ಅಭಿಮತ



ಗಾಂಧೀಜಿ ತತ್ವಾದರ್ಶ ಪಾಲಿಸಬೇಕು: ಸಿಸಿರಾ

ಚನ್ನಪಟ್ಟಣ: ಬೆಂಗಳೂರಿನ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ವತಿಯಿಂದ 2021-22ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ತಾಲೂಕಿನ ಬೇವೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ರಾಷ್ಟ್ರೀಯ ಏಕೀಕರಣ ಮತ್ತು ಸಾಮಾಜಿಕ ಸಾಮರಸ್ಯಕ್ಕಾಗಿ ಯುವಜನತೆ ಎಂಬ ಘೋಷವಾಕ್ಯದೊಂದಿಗೆ 3ನೇ ದಿನದ ಕಾರ್ಯಕ್ರಮ ಯುವಜನತೆಯ ಪಾತ್ರ ಕುರಿತು ಉಪನ್ಯಾಸ ನಡೆಯಿತು. ಬೆಂಗಳೂರು ಶೇಷಾದ್ರಿಪುರಂ ಕಾಲೇಜಿನ ಎಸ್. ರಾಮಲಿಂಗೇಶ್ವರ ಅವರು ಆಧುನಿಕ ಸಮಾಜ ಮತ್ತು ಯುವ ಜನಾಂಗವನ್ನು ಕುರಿತಂತೆ ...



ಮಹಿಳೆಯರ ಸ್ವಾವಲಂಬನೆಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಮುಂದೆ ಬರಬೇಕಿದೆ



ಪ್ರಸ್ತುತ ಸಂದರ್ಭಕ್ಕೆ ಗಾಂಧಿ ಅನಿವಾರ್ಯ

ಗಾಂಧಿ ಭವನದ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅಭಿಪ್ರಾಯ





... ಸ್ಪರ್ಧೆ, ಮಹಾತ್ಮರ ವೇಷಭೂಷಣ ಸ್ಪರ್ಧೆ ವಿಜೇತರಾದ ವಿದ್ಯಾರ್ಥಿನಿಯರಿಗೆ ಆಡಳಿತ ಮಂಡಳಿ ಅಧ್ಯಕ್ಷ ಬಿ.ಹೆಚ್. ಪಂಕಜ ಅವರು ಬಹುಮಾನ ಪ್ರದಾನ ಮಾಡಿದರು. ವಿವೇಕಾನಂದ ಮಹಿಳಾ ಪದವಿ ಕಾಲೇಜು ...

ನಾಡೋಜ ಡಾ. ಹಂ.ಪ.ನಾಗರಾಜಯ್ಯರಿಂದ ಯುವಜನ ಸಮಾವೇಶ ಉದ್ಘಾಟನೆ

ಹೋರಾಟಗಳಿಗೆ ನೈತಿಕ ಮೌಲ್ಯ ಅಗತ್ಯ

ಹೊ.ಕ.ಸಮಾಚಾರ, ಬೆಂಗಳೂರು

... ವನ್ನು ಸುಧಾರಿಸುವ ನಿಟ್ಟಿನಲ್ಲಿ ಹೋರಾಟ ನಡೆಸಲು ಪ್ರಥಮವಾಗಿ ನೈತಿಕತೆ ಮತ್ತು ಮೌಲ್ಯಗಳು ಮುಖ್ಯ. ಇಂತಹ ಮಹತ್ವಪೂರಿತ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಇಲ್ಲದಿದ್ದರೆ ಯಾವುದೇ ಹೋರಾಟಗಳು ಸಫಲತೆಯನ್ನು ಕಾಣುವುದಿಲ್ಲ ಎಂದು ಹಿರಿಯ ಸಾಹಿತಿ ನಾಡೋಜ ಹಂ.ಪ.ನಾಗರಾಜಯ್ಯ ಎಂದು ಅಭಿಪ್ರಾಯಪಟ್ಟರು.

ಗಾಂಧಿ ಭವನದಲ್ಲಿ ಭಾನುವಾರ ಬುದ್ಧ-ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಮತ್ತು ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ನಡೆದ ಗಾಂಧೀಜಿ, ...



ಯುವಜನ ಸಮಾವೇಶವನ್ನು ಹಿರಿಯ ...

... ಮಾಡಿಕೊಂಡು, ಪ್ರಬುದ್ಧತೆಯನ್ನು ಹೊಂದಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರಜಾವಾಣಿ

ಪ್ರತಿಭಾ ಪಲಾಯನ ತಡೆಗಟ್ಟಿ'



ಪರಿಸರ ಸಂರಕ್ಷಣೆಯಲ್ಲಿ ಅಡಗಿದೆ ನಮ್ಮೆಲ್ಲರ ಭವಿಷ್ಯ



ವಿದ್ಯಾರ್ಥಿಗಳ ವಲಸೆ ತಡೆ ಅನಿವಾರ್ಯ



ಸ್ತ್ರೀ ಕುಲಕ್ಕೆ ಕಸ್ತೂರಬಾ ಬೆಳಕು



ವಿಜಯಪುರ

ಒಂದು ಜೀವನವನ್ನು ಸೃಷ್ಟಿ ಮಾಡುವ ಶಕ್ತಿ ಹೆಣ್ಣಿಗೆ ಇದೆ ಎಂದಾದರೆ ಅವಳಲ್ಲಿ ಅನಂತವಾದ ವಿಶೇಷ ಶಕ್ತಿ ಇದೆ ಎಂದರ್ಥ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ತಿಳಿಸಿದರು.

ಇವರು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕರ್ನಾಟಕ ಸರ್ಕಾರ ಇವರ ಸಂಯುಕ್ತ ಆಶ್ರಯದಲ್ಲಿ, ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಬೆಳ್ಳೂರು ಗ್ರಾಮದಲ್ಲಿ ಸನ್ಮಾನಿಸಿ ಮಾತನಾಡಿದರು.

ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

In one year 1806, when Kizzy was 16-more than 20,000 blacks had been brought into just two states, Georgia and South Caro lina. Slaves were selling for un heard-of prices. One morning in that year, the county sheriff visited Massa Waller. Bell, who was sent from the kitchen. while the sheriff spoke to the massa, knew instinctively that something was wrong, and that it somehow in volved her. Just before lunchtime, Massa Waller called her in. His voice was strained and angry as he told Bell the sheriff's news. A young field hand had been captured after running away. Under beating, he had confessed that he had been helped by Kizzy. "You know my rules," he told Bell. "She will have to be sold." Bell fled screaming from the house to her cabin. When Kunta returned from an errand in the buggy, Massa Waller told him what he had told Bell. Numbly, Kunta went to his cabin. He could not really comprehend what the massa had said. His Kizzy sold away? It was inconceivable. At the sight of Kunta, Bell began screaming. "Ain't gon' take my baby! Ain't gon' sell my baby! Sell he, not my baby!" The truth sank in, and all the bitterness that had ever been in Kunta boiled in him anew, all that he had ever felt of toubob, all that he had never ceased to feel in this cruel land. The sheriff returned in the middle of the afternoon with a slave trader. The trader went inside the house and emerged holding a chain at tached to cuffs round the wrists of h a weeping Kizzy. Bell charged from her cabin. "You done dis?" she shouted at Kizzy. Kizzy's face was an agony. It was plain that she was guilty. "Oh, Lawd Gawd, have mercy, massa!" Bell screamed. "She ain't meant to! She ain't! Please, massa, please! Please!" Massa Waller spoke tersely: "Wrong is wrong. You know my rules. I have already sold her." He nodded to the slave trader who started to pull Kizzy towards the cart. Then Kunta sprang to his daughter, seizing her about the waist, hugging her as if he would crush her. "Save me, Fa!" she cried. The sheriff's pistol butt came crashing down against Kunta's head, and he fell to his knees, dazed. Vaguely he saw the slave trader pushing Kizzy, her body thrashing, flailing, into the cart. The cart gath ered speed; Bell went lumbering after it, and Kizzy was screaming, Kunta rushed to where Kizzy had last stood. Bending, he scooped up the dust of her footprints. The spirits said that if he kept the dust, her feet would return to that spot. He ran with the dust towards the cabin in Slave Row. He must put it in some safe place. His eyes fell upon the gourd full of pebbles. He flung away the dust and, snatching up the gourd, banged it down against the packed-earth floor. The gourd burst into pieces, and the pebbles which had been his record of the rains of his life went flying in all directions. "He Were an African"KIZZY was bought from the slave trader by a man named Tom Lea, who took her to a small plantation in North Carolina. Her new massa forced himself on her, and she bore a child named George. It bothered Kizzy that he was brown, but she finally learned not to think about it. By the time he was four, George knew that his grandfather was African. Since few slave children on the Lea plantation even knew who their fathers were, George pestered his mother for more information about the man who had said his name was "Kunta Kin-tay," who called a fiddle or guitar "ko," and a river "Kamby Bolongo."

To bi continueed...

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026

ಕಲ್ಪನಾ ಚಾವ್ಲ (17.2.1962 - 01.01.2003)




ಭಾರತ ಸಂಜಾತ ಮೊದಲ ಮಹಿಳಾ ಗಗನಯಾತ್ರಿ ಹಾಗೂ ಅಮೆರಿಕನ್ ಪ್ರಜೆ. ಅಂತರಿಕ್ಷ ನೌಕೆ ಕೊಲಂಬಿಯಾ ಭೂವಾತಾವರಣದಲ್ಲಿ ಸುಟ್ಟು ಭಸ್ಮವಾದಾಗ ಮಡಿದ ಏಳು ಗಗನಯಾತ್ರಿಗಳಲ್ಲಿ ಇವರೂ ಒಬ್ಬರು. ಹರಿಯಾಣದ ಕರ್ನಾಲ್ ಎಂಬ ಊರಿನಲ್ಲಿ ಜನಿಸಿದ ಕಲ್ಪನಾ ಚಾವ್ಲ, 1982ರಲ್ಲಿ ಪಂಜಾಬ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ನಂತರ ಸ್ನಾತಕೋತ್ತರ ಶಿಕ್ಷಣವನ್ನು ಅಮೇರಿಕಾದಲ್ಲಿ ಪಡೆದರು. 1995 ರಲ್ಲಿ ಕಲ್ಪನಾ, ಅಮೇರಿಕಾದಲ್ಲಿನ ನಾಸಾ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗೆ ಸೇರಿದರು. 1997ರ ನವೆಂಬರ್ 19 ರಂದು ಇವರ ಮೊದಲ ಬಾಹ್ಯಾಕಾಶಯಾನ ಪ್ರಾರಂಭವಾಯಿತು. ನಂತರ ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದಂತೆ ಸುಮಾರು 80 ಸಂಶೋಧನೆಗಳಲ್ಲಿ ಕಲ್ಪನಾ ನಿರತರಾಗಿದ್ದರು. 2003ರ ಫೆಬ್ರವರಿ 1ರಂದು ಕೊಲಂಬಿಯಾ ಆಕಾಶನೌಕೆ ಎಸ್.ಟಿ.ಎಸ್.-87ರಲ್ಲಿ ಗಗನಯಾತ್ರೆ ಮುಗಿಸಿ ಭೂಮಿಗೆ ಮರಳುವಾಗ, ತಾಂತ್ರಿಕ ದೋಷದಿಂದಾಗಿ ಸಂಭವಿಸಿದ ಅಪಘಾತದಲ್ಲಿ ಮೃತರಾದರು.ಈ ನೌಕೆಯಲ್ಲಿ ಇವರೊಂದಿಗೆ ಇತರ ಆರು ಗಗನಯಾನಿಗಳಿದ್ದರು. ಇವರ ನೆನಪಿಗಾಗಿ ಭಾರತ ಸರ್ಕಾರ ಫೆಬ್ರವರಿ 5, 2003 ರಂದು "ಮೆಟ್ ಸ್ಯಾಟ್" ಉಪಗ್ರಹ ಸರಣಿಯನ್ನು "ಕಲ್ಪನಾ" ಎಂದು ಮರುನಾಮಕರಣ ಮಾಡುವ ಮೂಲಕ ಕಲ್ಪನಾ ಅವರಿಗೆ ಗೌರವ ಸೂಚಿಸಲಾಯಿತು.

ಆನಂದಿಬಾಯಿ ಗೋಪಾಲರಾವ್ ಜೋಶಿ (31.3.1865 - 26.02.1887)



ಪಾಶ್ಚಾತ್ಯ ವೈದ್ಯಕೀಯ ಪದವಿ ಪಡೆದ ಮೊಟ್ಟಮೊದಲ ಭಾರತೀಯ ಮಹಿಳಾ ವೈದ್ಯೆ. ಅಮೇರಿಕಾದ ನೆಲದ ಮೇಲೆ ಸಂಚರಿಸಿದ ಮೊದಲ ಹಿಂದೂ ಮಹಿಳೆ ಎಂಬ ಹೆಗ್ಗಳಿಕೆಯೂ ಇವರಿಗೇ ಸಲ್ಲುತ್ತದೆ. ಮಹಾರಾಷ್ಟ್ರದ ಪುಣೆಯಲ್ಲಿ ಜನನ. ಒಂಬತ್ತನೇ ವಯಸ್ಸಿನಲ್ಲಿ ತಮಗಿಂತಲೂ ಇಪ್ಪತ್ತು ವರ್ಷ ದೊಡ್ಡವರಾದ ಗೋಪಾಲ್ ರಾವ್ ಅವರನ್ನು ವರಿಸಿದರು. ಇವರ ಪತಿ ಗೋಪಾಲ್ ರಾವ್ ಅವರು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು ಎಂಬ ಮನೋಭಾವದವರಾಗಿದ್ದರು. ಆನಂದಿಬಾಯಿ ಅವರ ಚುರುಕುತನವನ್ನು ನೋಡಿ, ಅವರ ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಆನಂದಿಬಾಯಿ ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ಗಂಡು ಮಗುವಿಗೆ ಜನ್ಮ ನೀಡಿದರು, ಆದರೆ ಉತ್ತಮ ಚಿಕಿತ್ಸಾ ಸೌಲಭ್ಯಗಳಿಲ್ಲದ ಕಾರಣ, ಹತ್ತು ದಿನಗಳ ನಂತರ ಮಗು ಕೊನೆಯುಸಿರೆಳೆಯಿತು. ಇದರಿಂದಾಗಿ ಅವರಲ್ಲಿ ವೈದ್ಯರಾಗಬೇಕು ಎಂಬ ಛಲ ಹುಟ್ಟಿತು. ಪತಿಯ ಸಹಕಾರದಿಂದ ಆನಂದಿಬಾಯಿ ಅವರು ಪಾಶ್ಚಿಮಾತ್ಯ ವೈದ್ಯಕೀಯ ಪದವಿ ಪಡೆಯಲು ನಿಶ್ಚಯಿಸಿದರು. ಅದೇ ಛಲದಿಂದ 1883ರಲ್ಲಿ ಅವರು ಅಮೆರಿಕಾಕ್ಕೆ ತೆರಳಿ ಡ್ರೆಕ್ಸೆಲ್ ಮಹಿಳಾ ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಸೇರಿದರು. ತಮಗಿದ್ದ ಅನಾರೋಗ್ಯದ ಸಮಸ್ಯೆಯ ಹೊರತಾಗಿಯೂ ಧೃತಿಗೆಡದೇ ಓದಿನತ್ತ ಗಮನ ಹರಿಸಿದರು. ಮಾರ್ಚ್ 11, 1886 ರಲ್ಲಿ ವೈದ್ಯಕೀಯ ಪದವಿಯನ್ನು ಪಡೆದು. ರಾಣಿ ವಿಕ್ಟೋರಿಯ ಅವರ ಹೊಗಳಿಕೆಗೆ ಪಾತ್ರರಾದರು. ಭಾರತಕ್ಕೆ ಮರಳಿದ ನಂತರ ಕೊಲ್ಹಾಪುರದ ಆರ್.ಸಿ.ಎಸ್.ಎಮ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಸಿ.ಪಿ.ಆರ್ ಆಸ್ಪತ್ರೆಯ ಮಹಿಳಾ ವಿಭಾಗದ ಮುಖ್ಯಸ್ಥರಾಗಿದ್ದರು.

ತಿರುಮಲಾಂಬ (ಮಾರ್ಚ್ 25, 1887 - ಆಗಸ್ಟ್ 31 1982)



ಹೊಸಗನ್ನಡದ ಮೊದಲ ಲೇಖಕಿ, ಪತ್ರಿಕಾ ಸಂಪಾದಕಿ, ಪ್ರಕಾಶಕಿ, ಮುದ್ರಕಿ ಎಂದು ಪ್ರಖ್ಯಾತರಾದ ತಿರುಮಲಾಂಬ ಅವರು ನಂಜನಗೂಡಿನಲ್ಲಿ ಜನಿಸಿದರು. ಸಾಹಿತ್ಯ ಪ್ರಿಯರಾಗಿದ್ದ ತಂದೆ ವೆಂಕಟಕೃಷ್ಣ ಅಯ್ಯಂಗಾರ್‌ರ ಪ್ರೋತ್ಸಾಹದಿಂದ ರಾಮಾಯಣ, ಮಹಾಭಾರತ, ಭಾಗವತಗಳ ವಾಚನವಷ್ಟೇ ಅಲ್ಲದೆ ನಂಜನಗೂಡು ಶ್ರೀಕಂಠಶಾಸ್ತ್ರಿ, ಬೆಳ್ಳಾವೆ ಸೋಮನಾಥಯ್ಯ, ಎಂ. ವೆಂಕಟಾದ್ರಿ ಶಾಸ್ತ್ರಿ ಮುಂತಾದವರ ಕಥೆ ನಾಟಕಗಳನ್ನು ಓದತೊಡಗಿದರು. ಬಿಡುವಿನ ವೇಳೆಯಲ್ಲಿ ಮಕ್ಕಳಿಗೆ, ನೆರೆಹೊರೆಯ ಮಹಿಳೆಯರಿಗೆ ಪಾಠ ಹೇಳಿಕೊಡಲು ಪ್ರಾರಂಭಿಸಿದ ತಿರುಮಲಾಂಬ ಅವರ ಮನೆ ಕ್ರಮೇಣ ಪಾಠಶಾಲೆಯಾಗಿಯೇ ರೂಪುಗೊಂಡಿತು. ವಿದ್ಯಾರ್ಥಿಗಳಿಗಾಗಿ ಇವರು "ಸನ್ಮಾರ್ಗದರ್ಶಿನಿ" ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಇವರು ನಾಟಕ, ಕಾದಂಬರಿ, ಕತೆ, ಭಕ್ತಿಗೀತೆಗಳನ್ನು ಬರೆಯಲಾರಂಭಿಸಿದರು. ಇವರು "ಸತೀ ಹಿತೈಷಿಣಿ" ಎಂಬ ಗ್ರಂಥಮಾಲೆಯನ್ನು ಪ್ರಾರಂಭಿಸಿ ಪ್ರಥಮವಾಗಿ ಅವರ "ಸುಶೀಲೆ" ಕಾದಂಬರಿ ಪ್ರಕಟಗೊಂಡಿತು. ಆ ಕಾದಂಬರಿ ಪ್ರಕಟಗೊಂಡ ಕ್ಷಿಪ್ರ ಅವಧಿಯಲ್ಲೇ ನಾಲ್ಕು ಆವೃತ್ತಿಗಳನ್ನು ಕಂಡಿತು. "ಸತೀಹಿತೈಷಿಣಿ" ಸಂಸ್ಥೆಯಿಂದ ಹಲವು ಮೇಧವಿಗಳ ಕೃತಿಗಳು ಪ್ರಕಟಗೊಂಡವು. ಅವರ "ನಭಾ", "ವಿದ್ಯುಲ್ಲತಾ", "ಹರಿಣಿ" ಮುಂತಾಗಿ ಒಟ್ಟು ಹನ್ನೊಂದು ಪುಸ್ತಕಗಳು ಪ್ರಕಟಗೊಂಡವು. ಕತೆ, ಕಾದಂಬರಿ, ಪತ್ತೇದಾರಿ ಕಾದಂಬರಿ, ಪ್ರಬಂಧ, ಪದ್ಯ, ನಾಟಕ ಹೀಗೆ ಒಟ್ಟು ಸುಮಾರು ಇಪ್ಪತ್ತೆಂಟು ಕೃತಿಗಳು ಕೃತಿಗಳು ಪ್ರಕಟಗೊಮಡವು. ತಿರುಮಲಾಂಬ ಅವರು ರಚಿಸಿದ "ಮಣಿಮಾಲ" ಅವರ ಕೊನೆಯ ಕಾದಂಬರಿ. ಇವರ ಪೂರ್ಣಕಲಾಗ್ರಂಥ, ದಕ್ಷಕನ್ಯಾ, ಮತ್ತು ವಿದ್ಯುಲ್ಲತಾ ಕೃತಿಗಳು ಮೈಸೂರು ವಿಶ್ವವಿದ್ಯಾಲಯದ ಇಂಟರಮೀಡಿಯೆಟ್ ಹಾಗು ಬಿ.ಎಸ್.ಸಿ. ತರಗತಿಗಳಿಗೆ ಪಠ್ಯಪುಸ್ತಕಗಳಾಗಿದ್ದವು.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049